Editor: NITYANANDASWAMI Publisher: U. BASAVARAJA RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ 16 | ಸಂಚಿಕೆ 48 | ನವೆಂಬರ್ 21-27, 2022 | ಪುಟ 16 | ರೂ.10/-

Volume: 16 Issue: 48 November 21-27, 2022 Pages: 16 Price: 10/-

https://janashakthi.wordpress.com e-mail : js_weekly@yahoo.com









ಸಿ.ಐ.ಟಿ.ಯು. 15 ನೆಯ ರಾಜ್ಯ ಸಮ್ಮೇಳನ:

ಧಾಳಿಗಳನ್ನು ಹಿಮ್ಮೆಟ್ಟಿಸಿ ಕಾರ್ಮಿಕ ವರ್ಗದ ಹಕ್ಕುಗಳನ್ನು ಸಂರಕ್ಷಿಸಿಕೊಳ್ಳಲು ಪ್ರಬಲ ಪ್ರತಿರೋಧದ ಸಂಕಲ್ಪ

ಆಗಬೇಕಿದೆ ಚುನಾವಣಾ ಆಯೋಗದ್ದೇ ಸುಧಾರಣೆ




- ಅರ್ಥಶಾಸ್ತ್ರವನ್ನು ಅಪ್ರಾಮಾಣಿಕತೆಯ ಮಟ್ಟಕ್ಕೆ ಇಳಿಸಿರುವ ನವ-ಉದಾರವಾದ
- ದಲಿತರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ ವಿರೋಧಿಸಿ ಐಕ್ಯ ಹೋರಾಟಕ್ಕೆ ಕರೆ
- ಯು.ಎಸ್. ಚುನಾವಣೆಗಳು 'ಟ್ರಂಪ್ ಅಲೆ'ಗೆ ತಡೆ, ಆದರೆ ಪ್ರಜಾಪ್ರಭುತ್ವಕ್ಕೆ ಅಪಾಯ ತಪ್ಪಿಲ್ಲ

‘ವೀರ’ ಸಾವರ್ಕರ್– ಏಳು ಮಿಥ್ಯೆಗಳು

ಮಿಥ್ಯೆಗಳನ್ನು ಸತ್ಯಸಂಗತಿಗಳಿಂದ ಬೇರ್ಪಡಿಸುವ ಒಂದು ಪ್ರಾಮಾಣಿಕ ಆಕಾಂಕ್ಷೆಯಿಂದ ರಚಿಸಿರುವ ಡಾ.ಶಮ್ಸುಲ್ ಇಸ್ಲಾಮ್ ರವರ ‘ಸಾವರ್ಕರ್ ಅನ್‌ಮಾಸ್ಕ್ಡ್’ ಪ್ರಸ್ತಾವನೆಯಲ್ಲಿ ಸಾವರ್ಕರ್ ಅವರನ್ನು ರಾಷ್ಟ್ರೀಯ ನೇತಾರನನ್ನಾಗಿ ಬಿಂಬಿಸುವ ಯಾವುದೇ ಯೋಜನೆ 1998 ಕ್ಕೂ ಮುಂಚೆ ಹಿಂದುತ್ವ ಬ್ರಿಗೇಡಿಗೆ ಇರಲಿಲ್ಲ, ನಂತರ ಅದು ಮುನ್ನೆಲೆಗೆ ಬರುವಲ್ಲಿ ಕಾಂಗ್ರೆಸ್ ಪಕ್ಷದ ಪಾತ್ರವೂ ಇದೆ ಎಂಬುದನ್ನು ಪರಿಶೀಲಿಸುತ್ತ ಸಾವರ್ಕರ್ ಅವರ ಹೊಗಳುಭಟರ ತಂಡದಲ್ಲಿ ಕಾಂಗ್ರೆಸ್ ಕೂಡ ಸೇರಿಕೊಂಡದ್ದು ವಿಷಾದದ ಸಂಗತಿ ಎನ್ನುತ್ತಾರೆ. ಮುಂದೆ ಅವರು ಸಾವರ್ಕರ್‌ರವರನ್ನು ಕುರಿತ ಏಳು ಮಿಥ್ಯೆಗಳನ್ನು ಒಂದೊಂದಾಗಿ ಈ ದಾಖಲೆಗಳ ಬೆಳಕಿನಲ್ಲಿ ಪರಿಶೀಲಿಸುತ್ತಾರೆ.

ಡಾ. ಶಮ್ಸುಲ್‌ಇಸ್ಲಾಂ
ಅನು: ಟಿ.ಸುರೇಂದ್ರರಾವ್

ಭಾಗ – 4




ಮಿಥ್ಯೆ 1 –‘ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ’!

ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ. ಸಾವರ್ಕರ್ ಅಸಾಧಾರಣ ಧೈರ್ಯ ಪ್ರದರ್ಶಿಸಿದರು. ಬ್ರಿಟಿಷ್ ಆಳರಸ’ರೊಂದಿಗೆ ಅವರು ಎಂದೂ ಶಾಮೀಲಾಗಲಿಲ್ಲ ಎಂದು ಹಿಂದುತ್ವ ಪ್ರಚಾರಕರ ಮಿಥ್ಯೆಯನ್ನು ಪರಿಶೀಲಿಸುತ್ತಾ ಕಾಲಾ ಪಾನಿ ಅಥವಾ ಕರಿ ನೀರು ಎಂದು ಕರೆಯಲ್ಪಡುವ ಅಂಡಮಾನಿನ ಭಯಂಕರ ಸೆಲ್ಯುಲರ್ ಜೈಲಿನಲ್ಲಿ. ಗೂಡಿನಂತಿರುವ ಸಣ್ಣ ಕೋಣೆಯಲ್ಲಿ ಭೀಕರ ಕ್ರೌರ್ಯಗಳಿಗೆ ಒಳಗಾದವರು ಸಾವರ್ಕರ್ ಒಬ್ಬರೇ ಎಂದು ಬಿಂಬಿಸಲು ಬಿಜೆಪಿ ನೇತೃತ್ವದ ಸರ್ಕಾರವು ಶತಪ್ರಯತ್ನ ಮಾಡುತ್ತಿರುವಂತೆ ಕಾಣುತ್ತಿದೆ ಎನ್ನುವ ಲೇಖಕರು, ಸತ್ಯಸಂಗತಿಗಳು ಮಾತ್ರ ಬೇರೆಯೇ –ಗಾಬರಿ ಹುಟ್ಟಿಸುವ– ಕತೆಯನ್ನೇ ಹೇಳುತ್ತವೆ ಎನ್ನುತ್ತಾರೆ. ಸಾವರ್ಕರ್‌ಗಿಂತ ಎಷ್ಟೋ ಮೊದಲು ಭಾರತದ ಮೊದಲ ಸ್ವಾತಂತ್ರ್ಯ ಯುದ್ಧ ಎಂದು ದಾಖಲಾಗಿರುವ 1857ರ ಬಂಡಾಯದಲ್ಲಿ ಭಾಗವಹಿಸಿದ್ದಕ್ಕಾಗಿ ಈ ಶಿಕ್ಷೆ ಅನುಭವಿಸಿದ ಮೂವರ ಕುರಿತು ಕಳೆದ ಸಂಚಿಕೆಯಲ್ಲಿ ಓದಿದ್ದೀರಿ. ಮುಂದೆ ಓದಿ..

ಸಾವರ್ಕರ್‌ರ ಆರಂಭದ ರಾಜಕೀಯ ಜೀವನ


ಹೀಗೆ, ಸೆಲ್ಯುಲರ್ ಜೈಲು ಅಂದರೆ ಕೇವಲ ಸಾವರ್ಕರ್ ಕತೆ ಅಲ್ಲ. ಇಲ್ಲಿ, ಸಾವರ್ಕರ್ ಬಗ್ಗೆ ಕೂಡ ಕೆಲವು ವಿವರಗಳನ್ನು ತಿಳಿದುಕೊಳ್ಳುವುದು ಬಹಳ ಪ್ರಸ್ತುತವಾಗುತ್ತದೆ. ಅವರು ಮಹಾರಾಷ್ಟ್ರದ ಭೂಮಾಲಕ ಚಿತ್ಪಾವನ ಬ್ರಾಹ್ಮಣರ ಕುಟುಂಬದಲ್ಲಿ 1983 ರಲ್ಲಿ ಜನಿಸಿದರು. ಅವರ ಶಾಲಾ ದಿನಗಳಿಂದಲೇ, ಅವರು ಬ್ರಿಟಿಷ್ ವಿರೋಧಿ ಚಳುವಳಿಗೆ ಆಕರ್ಷಿತರಾಗಿದ್ದರು ಮತ್ತು ಮೇ 1904ರಲ್ಲಿ, ಮಝ್ಜಿನಿಯ ‘ಗಿಯೊವನ್ನಿ ಇತಾಲಿಯ’ (ಯುವ ಇಟಲಿ) ಚಳುವಳಿಯಿಂದ ಪ್ರಭಾವಿತರಾಗಿ ಅಭಿನವ್ ಭಾರತ್ (ಯುವ ಭಾರತ) ಸಮಾಜವನ್ನು ಸ್ಥಾಪಿಸಲು ಸಹಾಯ ಮಾಡಿದರು. ಕಾನೂನು ಅಧ್ಯಯನಕ್ಕಾಗಿ ಅವರು ಇಂಗ್ಲೆಂಡಿಗೆ (1906–1910) ತೆರಳಿದರು. ಆದರೆ ಅಲ್ಲಿ ಅವರು ಭಾರತದಲ್ಲಿನ ಬ್ರಿಟಿಷ್ ಆಳ್ವಿಕೆಯ ವಿರುದ್ಧದ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಇಂಗ್ಲೆಂಡಿನಲ್ಲಿ, ಅವರು ಫ್ರೀ ಇಂಡಿಯಾ ಸೊಸೈಟಿಯನ್ನು ಸ್ಥಾಪಿಸಿದರು, ಭಾರತದಿಂದ ಬ್ರಿಟಿಷ್ ಆಳ್ವಿಕೆಯನ್ನು ಕಿತ್ತೊಗೆಯಲು ಅದು ಗುಪ್ತ ಚಟುವಟಿಕೆಗಳನ್ನು ಸಂಘಟಿಸಿತು. ಫ್ರೀ ಇಂಡಿಯಾ ಸೊಸೈಟಿ ಯ ಸದಸ್ಯರಲ್ಲೊಬ್ಬರಾದ ಮದನ್ ಲಾಲ್ ಢಿಂಗ್ರಾ ಅವರು ಲಂಡನ್ನಿನ ಭಾರತೀಯ ಕಛೇರಿಯ ಒಬ್ಬ ಅಧಿಕಾರಿಯನ್ನು ಹತ್ಯೆ ಮಾಡಿದ ನಂತರ ಸಾವರ್ಕರ್ ಅವರನ್ನು ಬಂಧಿಸಲಾಯಿತು ಮತ್ತು ಭಾರತಕ್ಕೆ ಕರೆ ತತರಲಾಯಿತು. ಭಾರತಕ್ಕೆ ಬರುವಾಗಿನ ಹಾದಿಯಲ್ಲಿ, ಬಂಧನದಲ್ಲಿದ್ದ ಸಾವರ್ಕರ್ ಅವರು ಫ್ರಾನ್ಸ್‌ನ ಮಾರ್ಸೈಲ್ಸ್ ಎಂಬಲ್ಲಿ ತಪ್ಪಿಸಿಕೊಳ್ಳಲು ಒಂಧು ದಿಟ್ಟ, ಆದರೆ ನಿಷ್ಫಲ ಪ್ರಯತ್ನ ಮಾಡಿದರು.


ಭಾರತದಲ್ಲಿ, ಅವರನ್ನು ವಿಚಾರಣೆಗೆ ಒಳಪಡಿಸಲಾಯಿತು ಮತ್ತು ಎರಡು ವಿಭಿನ್ನ ಪ್ರಕರಣಗಳಲ್ಲಿ ಎರಡು ಜೀವಾವಧಿ ಗಡೀಪಾರು ಶಿಕ್ಷೆ ಅಂದರೆ 50 ವರ್ಷಗಳ ಜೈಲುವಾಸದ ಶಿಕ್ಷೆ ನೀಡಲಾಗುತ್ತದೆ. ಜುಲೈ 4, 1911 ರಂದು ಅವರನ್ನು ಶಿಕ್ಷೆ ಅನುಭವಿಸಲು ಅಂಡಮಾನಿನ ಸೆಲ್ಯುಲರ್ ಜೈಲಿಗೆ ಸ್ಥಳಾಂತರಿಸಲಾಗುತ್ತದೆ. ಅಲ್ಲಿ ಅವರು 1911, 1913, 1914, 1918 ಮತ್ತು 1920 ರಲ್ಲಿ ಐದು ಬಾರಿ ಬ್ರಿಟಿಷ್ ದೊರೆಗಳಿಗೆ ಕ್ಷಮಾದಾನ ಬೇಡಿ ಪತ್ರ ನೀಡಿದರೂ ಅವರ ಬಿಡುಗಡೆಯಾಗಲಿಲ್ಲ; ಆದರೆ ಅವರು ಕ್ರಮೇಣವಾಗಿ ಜೈಲು ಅಧಿಕಾರಿಗಳ ವಿಶೇಷ ಪ್ರೀತಿಪಾತ್ರರಾಗುತ್ತಾರೆ; ಅವರಿಗೆ 1920ರಲ್ಲಿ ಒಂದು ಗುಮಾಸ್ತನ ಕೆಲಸ ನೀಡುತ್ತಾರೆ; ನಂತರದಲ್ಲಿ ಜೈಲಿನ ಎಣ್ಣೆ ಉಗ್ರಾಣದಲ್ಲಿ ಮೇಲ್ವಿಚಾರಕನಾಗಿ ಕೆಲಸ ಮಾಡಲು ಅವರಿಗೆ ಅವಕಾಶ ನೀಡುತ್ತಾರೆ. ಅವರಿಗೆ ಕ್ಷಮಾದಾನ ನೀಡುವ ಭಾಗವಾಗಿ 1921 ರಲ್ಲಿ ಬ್ರಿಟಿಷ್ ಸರ್ಕಾರವು ಮೊದಲಿಗೆ ಅವರನ್ನು ಭಾರತದ ಮುಖ್ಯ ಭೂಭಾಗಕ್ಕೆ ಸ್ಥಳಾಂತರಿಸುತ್ತದೆ. ಬೇರೆ ಬೇರೆ ಜೈಲುಗಳಲ್ಲಿ ಇಟ್ಟ ನಂತರ, ಜನವರಿ 6, 1924 ರಂದು ಅವರನ್ನು ಅಂತಿಮವಾಗಿ ಪಶ್ಚಿಮ ಭಾರತದ ಪುಣೆಯ ಯೆರವಾಡಾ ಜೈಲಿನಿಂದ ಬಿಡುಗಡೆ ಮಾಡಲಾಗುತ್ತದೆ, ಅವರು ರತ್ನಗಿರಿ ಜಿಲ್ಲೆಯಲ್ಲಿ ಮಾತ್ರ ವಾಸಿಸಬೇಕು ಮತ್ತು “ಬ್ರಿಟಿಷ್ ಸರ್ಕಾರದ ಅನುಮತಿಯಿಲ್ಲದೇ ಐದು ವರ್ಷಗಳ ಕಾಲ ಸಾರ್ವಜನಿಕವಾಗಿಯಾಗಲೀ ಅಥವಾ ಖಾಸಗಿಯಾಗಿಯಾಗಲೀ ಯಾವುದೇ ರೀತಿಯ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಬಾರದು….” ಎಂಬ ಷರತ್ತಿನೊಂದಿಗೆ ಬಿಡುಗಡೆಯಾಗುತ್ತದೆ. ಸಾವರ್ಕರ್ ಅವರ ಮೇಲೆ ವಿಧಿಸಿದ ಈ ಷರತ್ತುಗಳನ್ನು 1937ರಲ್ಲಷ್ಟೇ ಮಾತ್ರವೇ ಹಿಂತೆಗೆದುಕೊಳ್ಳಲಾಗುತ್ತದೆ. ಆದರೆ, ಆ ಷರತ್ತುಗಳು ಜಾರಿಯಲಿದ್ದ ಅವಧಿಯಲ್ಲಿ ಬ್ರಿಟಿಷ್ ಯಜಮಾನರುಗಳ ಒಡೆದು ಆಳುವ ನೀತಿಗೆ ಸರಿಯಾಗಿ ಹೊಂದಿಕೊಳ್ಳುವಂತೆ ಕೋಮುವಾದಿ ರಾಜಕೀಯ ಚಟುವಟಿಕೆಗಳನ್ನು ನಡೆಸಲು ಅವರಿಗೆ ಅವಕಾಶ ನೀಡಲಾಗಿತ್ತು.


THE INDIAN
WAR OF INDEPENDENCE
OF 1857
BY
AN INDIAN NATIONALIST
ALL RIGHTS RESERVED

ಮೊದಲ ಘಟ್ಟ: ಎಲ್ಲರನ್ನೂ ಒಳಗೊಳ್ಳುವ ಭಾರತದ
ಒಬ್ಬ ಸ್ವಾತಂತ್ರ್ಯ ಹೋರಾಟಗಾರನಾಗಿ

ಒಬ್ಬ ಕಾರ್ಯಕರ್ತನಾಗಿ, ಬರಹಗಾರನಾಗಿ ಮತ್ತು ಭಾಷಣಗಾರನಾಗಿ ಸಾವರ್ಕರ್ ಅವರ ಪಾತ್ರವನ್ನು ಎರಡು ಭಿನ್ನವಾದ ಮತ್ತು ತದ್ವಿರುದ್ಧವಾದ ಘಟ್ಟಗಳಾಗಿ ವಿಭಜಿಸಬಹುದು. ಸಾವರ್ಕರ್ ಅವರು ತಮ್ಮ ರಾಜಕೀಯ ಜೀವನವನ್ನು ಒಬ್ಬ ನಿಜವಾದ ಕ್ರಾಂತಿಕಾರಿಯಾಗಿ ಆರಂಭಿಸಿದರು; ಯಾವುದೇ ಧಾರ್ಮಿಕ ಹಾಗೂ ರಾಜಕೀಯ ತಾರತಮ್ಯವಿಲ್ಲದ ಸ್ವತಂತ್ರ ಭಾರತಕ್ಕಾಗಿ ದೃಢವಾಗಿ ನಿಂತರು. 1911ರಲ್ಲಿ ಅಂಡಮಾನಿನ ಸೆಲ್ಯುಲರ್ ಜೈಲಿಗೆ ಹೋಗುವ ವರೆಗೆ ಧಾರ್ಮಿಕ ಭಿನ್ನತೆಗಳನ್ನು ಕಿಂಚಿತ್ತೂ ಲೆಕ್ಕಿಸದ ಸ್ವತಂತ್ರ ಭಾರತದ ಗುರಿಸಾಧನೆಗೆ ಬದ್ಧನಾದ ಪ್ರತಿಪಾದಕನಾಗಿ ಅವರು ಉಳಿದರು. ಅವರ ಒಟ್ಟು ಆಲೋಚನೆಯು ಹಿಂದೂ ಪುರಾಣ ಹಾಗೂ ಚರಿತ್ರೆಯಲ್ಲಿ ಬೇರು ಬಿಟ್ಟಿದ್ದರೂ ಕೂಡ, ಭಾರತವೆಂಬ ತಾಯಿನಾಡಿನ ವಿಮೋಚನೆಯು ದೇಶದ ಹಿಂದೂಗಳು ಹಾಗೂ ಮುಸ್ಲಿಮರ ಐಕ್ಯ ದೃಢ ಸಂಕಲ್ಪದ ಮೇಲೆಯೇ ಅವಲಂಬಿತವಾಗಿದೆ ಎಂದು ಅಚಲವಾಗಿ ನಂಬಿದ್ದರು.


ನಾನಾ ಸಾಹೇಬ್


ಅಜೀಮುಲ್ಲಾ

ಅವರ ಈ ಆಲೋಚನೆಯು 1857 ರ ಬಂಡಾಯ ಕುರಿತ ಅವರ ಪ್ರಧಾನ ಕೃತಿಯಾದ ದಿ ಇಂಡಿಯನ್ ವಾರ್ ಆಫ್ ಇಂಡಿಪೆಂಡೆನ್ಸ್ 1857 ದಲ್ಲಿ ನಿಸ್ಸಂದೇಹವಾಗಿ ಕಣ್ಣಿಗೆ ಕಾಣುತ್ತದೆ; ಅದನ್ನವರು 1907 ರಲ್ಲಿ ಇಂಗ್ಲೆಂಡಿನಲ್ಲಿದ್ದಾಗ ಬರೆದಿದ್ದರು. ಬ್ರಿಟಿಷ್ ಸರ್ಕಾರ ಆ ಪುಸ್ತಕವನ್ನು ನಿಷೇಧಿಸಿದ್ದರೂ, ಜಗತ್ತಿನಾದ್ಯಂತ ಹಲವಾರು ಮುದ್ರಣಗಳನ್ನು ಕಂಡಿದೆ ಮತ್ತು ಅವುಗಳು ಸ್ವಾತಂತ್ರ್ಯಪೂರ್ವ ಕ್ರಾಂತಿಕಾರಿ ಗುಂಪುಗಳು ಮತ್ತು ವ್ಯಕ್ತಿಗಳಿಂದ ಪ್ರಾಯೋಜಿತವಾಗಿದ್ದವು. ಆ ಪುಸ್ತಕದ ಪ್ರಸ್ತಾವನೆಯಲ್ಲಿಯೇ ಸಾವರ್ಕರ್ ಅವರು ಮುಸ್ಲಿಮರ ಬಗೆಗಿನ ಕಡು ಹಗೆತನದ ಬಗ್ಗೆ ಎಚ್ಚರಿಸಿದ್ದರು; ತಾಯಿನಾಡಿನ ವಿಮೋಚನೆಗೆ ಹಿಂದೂಗಳ ಹಾಗೂ ಮುಸ್ಲಿಮರ ಐಕ್ಯತೆಯು ತೀರಾ ಅಗತ್ಯವಾದುದೆಂದು ಒತ್ತಿ ಹೇಳಿದ್ದರು. ಅವರು ಹೀಗೆ ಬರೆದಿದ್ದರು:

ತನ್ನ ಗತಕಾಲದ ಬಗ್ಗೆ ಅರಿವಿಲ್ಲದ ದೇಶಕ್ಕೆ ಭವಿಷ್ಯವಿಲ್ಲ. ಗತಕಾಲದ ಬಗ್ಗೆ ಸಾರಿ ಹೇಳುವುದಷ್ಟೇ ಅಲ್ಲ ಅದನ್ನು ತನ್ನ ಭವಿಷ್ಯದ ಮುಂದುವರಿಕೆಗಾಗಿ ಹೇಗೆ ಬಳಸಿಕೊಳ್ಳಬೇಕು ಎಂಬುದನ್ನೂ ತಿಳಿದುಕೊಳ್ಳುವ ಸಾಮರ್ಥ್ಯವನ್ನು ದೇಶವು ಬೆಳೆಸಿಕೊಳ್ಳಬೇಕು ಎನ್ನುವುದೂ ಅಷ್ಟೇ ಸತ್ಯ. ದೇಶವು ತನ್ನ ಇತಿಹಾಸದ ಧಣಿಯಾಗಬೇಕೇ ವಿನಃ ಅದರ ಗುಲಾಮನಾಗಬಾರದು. . . ಮಹಮ್ಮದೀಯರ ವಿರುದ್ಧದ ದ್ವೇಷ ಭಾವನೆಯು ಶಿವಾಜಿಯ ಕಾಲದಲ್ಲಷ್ಟೇ ಅಗತ್ಯವಾಗಿತ್ತು – ಆದರೆ, ಆಗ ಹಿಂದೂಗಳಲ್ಲಿ ಅಂತಹ ಭಾವನೆಯು ಪ್ರಧಾನವಾಗಿತ್ತು ಎನ್ನುವ ಮಾತ್ರಕ್ಕೆ ಈಗ ಅಂತಹ ಭಾವನೆಯನ್ನು ಪೋಷಿಸುವುದು ಅನ್ಯಾಯ ಹಾಗೂ ಮೂರ್ಖತನವಾಗುತ್ತದೆ.

ಸಾವರ್ಕರ್ ಅವರ ಈ ಚಿರಸ್ಥಾಯೀ ಕೃತಿಯು, 1857 ರ ಕ್ರಾಂತಿ ಐಕ್ಯತೆ, ಸ್ವಾತಂತ್ರ್ಯ ಹಾಗೂ ಜನರ ಕಾರ್ಯಶಕ್ತಿಯ ಚೈತನ್ಯವನ್ನು ಭಾರತವು ಎಷ್ಟರಮಟ್ಟಿಗೆ ಮೈಗೂಡಿಸಿಕೊಂಡಿತ್ತು ಎಂಬುದರ ಒಂದು ಪರೀಕ್ಷೆಯಾಗಿತ್ತು ಎಂದು ಸಾರುತ್ತ ಕೊನೆಗೊಳ್ಳುತ್ತದೆ. ಮುಂದುವರೆದು ಅವರು ದೇಶವಾಸಿಗಳಿಗೆ ಹೀಗೆ ಕರೆ ಕೊಟ್ಟರು:

ಸ್ವರಾಜ್ಯಕ್ಕಿಂತ –ಅದು ಪ್ರಜಾಪ್ರಭುತ್ವದ್ದಾಗಿರಲಿ, ಅಥವಾ ರಾಜಪ್ರಭುತ್ವದ್ದಾಗಿರಲಿ, ಅಥವಾ ಅರಾಜಕತೆಯದ್ದೇ ಆಗಿದ್ದರೂ ಕೂಡ, ವಿದೇಶಿ ಅಧಿಪತ್ಯವು ಕೆಟ್ಟದು ಎಂದು ಸಂಪೂರ್ಣವಾಗಿ ತಿಳಿದುಕೊಂಡು ಮತ್ತು ಸ್ವಾತಂತ್ರ್ಯಕ್ಕಾಗಿ ಹೋರಾಡಲು ಮುಂದೆ ಬಂದ ಆ ವೀರರಿಗೆ ನಿಜವಾದ ಕೀರ್ತಿ ಸಲ್ಲಬೇಕು; ಈ ತತ್ವವನ್ನು ಅರಿತವರು, ತಮ್ಮ ಧರ್ಮ ಹಾಗೂ ತಮ್ಮ ದೇಶಕ್ಕಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸಿದವರು...... ಅಂಥವರ ಹೆಸರುಗಳನ್ನು ನಾವು ನೆನೆಯಬೇಕು, ಗೌರವಭಾವದಿಂದ ಸಾರಬೇಕು!

ಇಂತಹ ವೀರರ ಗೌರವಾರ್ಥವಾಗಿಯೇ ದಿ ಇಂಡಿಯನ್ ವಾರ್ ಆಫ್ ಇಂಡಿಪೆಂಡೆನ್ಸ್ 1857 ಕೃತಿಯನ್ನು ಸಾವರ್ಕರ್ ‘1857 ರ ಹುತಾತ್ಮರಿಗೆ’ ಅರ್ಪಿಸಿದರು. ತಾಯಿನಾಡಿಗಾಗಿ ತಮ್ಮ ಜೀವವನ್ನೇ ಅರ್ಪಿಸಿದ ಆ ಧೀರ ವ್ಯಕ್ತಿಗಳ ಹೆಸರುಗಳ ಪಟ್ಟಿಯಲ್ಲಿ ಮಂಗಲ್ ಪಾಂಡೆ, ರಾಣಿ ಲಕ್ಷ್ಮಿ ಬಾಯಿ, ನಾನಾ ಸಾಹೇಬ್, ಮೌಲ್ವಿ ಅಹಮದ್ ಶಾಹ್, ಅಜಿಮುಲ್ಲಾ ಖಾನ್, ತಾಂತ್ಯಾ ಟೋಪೆ, ಬಹಾದ್ದೂರ್ ಶಾಹ್ ಜಫರ್, ಬೇಗಂ ಜೀನತ್ ಮಹಲ್ ಮತ್ತು ಇನ್ನೂ ಅನೇಕರ, ಹಿಂದೂಗಳ ಹಾಗೂ ಮುಸ್ಲಿಮರ ಹೆಸರುಗಳನ್ನು ಈ ಪುಸ್ತಕದಲ್ಲಿ

ಪುಟ 12 ಕ್ಕೆ

ಸಂಪಾದಕೀಯ

ಚುನಾವಣಾ ಅಕ್ರಮಗಳ ಸಿದ್ಧತೆ: ಹಗರಣದ ತನಿಖೆ ನಿಷ್ಪಕ್ಷಪಾತವಾಗಿ ನಡೆಯಲಿ

ಮತದಾರರ ಜಾಗೃತಿ ನೆಪದಲ್ಲಿ ಅವರ ವೈಯುಕ್ತಿಕ ಮಾಹಿತಿಗಳನ್ನು, ರಾಜಕೀಯ ಒಲವುಗಳನ್ನು ತಿಳಿದು ಖಾಸಗಿಯಾಗಿ ಅಕ್ರಮಗಳಿಗೆ ದುರ್ಬಳಕೆ ಮಾಡುತ್ತಿದ್ದ ಭಾರಿ ಹಗರಣ ಬೆಳಕಿಗೆ ಬರುತ್ತಿದೆ. ಬೆಂಗಳೂರಿನ 28 ವಿಧಾನಸಭಾ ಕ್ಷೇತ್ರಗಳಲ್ಲಿನ ಮತದಾರರ ಪಟ್ಟಿ ಪರಿಷ್ಕರಣೆ, ಮತದಾರರ ಹೆಸರಿಗೆ ಆಧಾರ ಜೋಡಣೆಯ ಕಲಸವನ್ನು ಬೆಂಗಳೂರು ಬೃಹತ್ ಮಹಾನಗರ ಪಾಲಿಕೆ– ಬಿ.ಬಿ.ಎಂ.ಪಿ. 'ಚಿಲುಮೆ' ಎಂಬ ಖಾಸಗಿ ಸಂಸ್ಥೆಗೆ ವಹಿಸಿದ್ದಾಗಿ ತಿಳಿದು ಬಂದಿದೆ. ಮಲ್ಲೇಶ್ವರಂನಲ್ಲಿ ಕಛೇರಿ ಹೊಂದಿರುವ ಈ 'ಚಿಲುಮೆ ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಗ್ರಾಮೀಣ ಅಭಿವೃದ್ಧಿ ಸಂಸ್ಥೆ' ಈ ಕೆಲಸವನ್ನು ಉಚಿತವಾಗಿ ಮಾಡುವುದಾಗಿ ಹೇಳಿತ್ತು ಎನ್ನುವ ಅಂಶವೂ ಅನುಮಾನಕ್ಕೆ ಕಾರಣವಾಗಿದೆ. ಈ ಕೆಲಸಕ್ಕೆ ತೊಡಗಿದ್ದ ಸುಮಾರು 10 ರಿಂದ –12 ಸಾವಿರ ಕೆಲಸಗಾರರಿಗೆ ವೇತನ ಎಲ್ಲಿಂದ ಬರುತ್ತಿತ್ತು? ಇದರಿಂದ ಅವರಿಗೇನು ಲಾಭ ಎನ್ನುವ ಪ್ರಶ್ನೆ ಸಹಜವಾಗಿಯೇ ಬರುತ್ತದೆ. ಪ್ರತಿಯೊಂದಕ್ಕೂ ಹಣಕಾಸು ಎಲ್ಲಿ ಎಂದು ಸಾರ್ವಜನಿಕರಿಗೆ ಕೇಳುವ ಮುಖ್ಯಮಂತ್ರಿ ಮತ್ತು ಬಿಬಿಎಂಪಿ ಆಯುಕ್ತರು ಏನೂ ಪ್ರಶ್ನಿಸದೇ ಅನುಮತಿ ಕೊಟ್ಟಿದ್ದಾರೆಂದು ನಂಬಲು ಸಾಧ್ಯವೇ? ಈ ಸಂಸ್ಥೆ ಮತದಾರರನ್ನು ಜಾಗೃತಿ ಮಾಡುವುದಾಗಿ ಹೇಳಿಕೊಂಡರೂ ವಹಿಸಿದ ಕೆಲಸವನ್ನು ಬಿಟ್ಟು ವಿವಿಧ ಮಾಹಿತಿಗಳನ್ನು ಸಂಗ್ರಹಿಸಿದ್ದು ಯಾಕೆ? ತಾವೇ ನೀಡಿದ ಗುರುತಿನ ಚೀಟಿಯೊಳಗೆ ಬೂತ್ ಮಟ್ಟದ ಅಧಿಕಾರಿ– ಬಿ.ಎಲ್.ಓ ಎಂದು ಬರೆದುಕೊಂಡು ಬಿಟ್ಟಿದ್ದಾರೆ ಎಂಬ ಆಯುಕ್ತರ ಬಾಲಿಷಃ ಹೇಳಿಕೆಯೂ ಹಾಸ್ಯಾಸ್ಪದವಾಗಿದೆ. ಇವರ ನಿರ್ದೇಶನ ಮೀರಿ ಆ ಸಂಸ್ಥೆ ಕೆಲಸ ಮಾಡುತ್ತಿತ್ತು ಎನ್ನುವುದಾದರೆ ಅದರ ನಿಜ ಉದ್ದೇಶ ಏನು ಎನ್ನುವುದನ್ನು ಅರಿಯಲಾರದಷ್ಟು ಇವರೆಲ್ಲಾ ಮುಗ್ಧರೇ? ಚುನಾವಣಾ ಆಯೋಗ ಮಾಡಬೇಕಿದ್ದ ಇಂತಹ ಕೆಲಸವನ್ನು ಒಂದು ಖಾಸಗಿ ಕಂಪನಿಗೆ ವಹಿಸಿ ಕಣ್ಣು ಮುಚ್ಚಿ ಕೈಚೆಲ್ಲಿ ಕೂಡುತ್ತಾರೆ ಎಂದರೆ ಏನರ್ಥ? ಇಂತಹ ಹೊಣೆಗೇಡಿ ಅಧಿಕಾರಿಯನ್ನು ಆಯುಕ್ತರನ್ನಾಗಿ ಕೂಡಿಸಲಾಯಿತೇ ಅಥವಾ ಸರಕಾರದಲ್ಲಿ ಇರುವವರು ತನ್ನ ಬಯಕೆಯಂತೆ ಈ ಕೃತ್ಯವನ್ನು ಮಾಡಿಸುತ್ತಿದ್ದಾರೆಯೇ? ಎನ್ನುವ ಸಾರ್ವಜನಿಕ ಪ್ರಶ್ನೆ ಸಹಜ. ಯಾಕೆಂದರೆ ಈ ಸಂಸ್ಥೆ ಕೇವಲ ಆಧಾರ್ ಸಂಖ್ಯೆ ಸಂಗ್ರಹಿಸಿದ್ದು ಮಾತ್ರವಲ್ಲ, ಹಿಂದೆ ಮತ್ತು ಈಗ ಮತದಾರರ ರಾಜಕೀಯ ಒಲವುಗಳನ್ನೂ, ಕಾರಣಗಳನ್ನೂ ಸಂಗ್ರಹಿಸಿದೆ. ಈಗಾಗಲೇ ನಮಗೆ ತಿಳಿದಿರುವಂತೆ ವಾಟ್ಸಾಪ್, ಫೇಸ್ ಬುಕ್ ಮುಂತಾದವುಗಳ ಡಾಟಾ ಇರಿಸಿಕೊಂಡು ಅವುಗಳನ್ನು ಬಳಸಿಯೇ ರಾಜಕೀಯ ಒಲವುಗಳನ್ನು ತಿಳಿದು ತನಗೆ ಬೇಕಾದಂತೆ ತಂತ್ರ ಮತ್ತು ಕುತಂತ್ರವನ್ನು ಹೆಣೆಯುವುದು ನಡೆಯುತ್ತಿದೆ. ಈಗ ದೊರೆತ ಪ್ರಾಥಮಿಕ ಮಾಹಿತಿಯಂತೆ ಈ ಪ್ರಕ್ರಿಯೆಯಲ್ಲಿಯೇ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿಯೇ ಸುಮಾರು 6,69,650 ಮತದಾರರ ಹೆಸರುಗಳು ನಾಪತ್ತೆ– ಡಿಲೀಟ್ ಆಗಿವೆ ಎನ್ನುವುದು ದಿಗ್ಭ್ರಾಂತಿಯನ್ನು ಉಂಟು ಮಾಡುತ್ತದೆ.

ಒಂದೊಂದು ವಿಧಾನಸಭಾ ಕ್ಷೇತ್ರದಲ್ಲೂ 30,000 ದಿಂದ 40,000 ಮತದಾರರು ಕಾಣೆಯಾಗಿದ್ದಾರೆ. ಈ ವ್ಯಕ್ತಿಗಳಿಗೆ ಮಾಹಿತಿ ನೀಡಿದವರೂ ಸಹ ಇದೀಗ ಷಾಕ್ ಗೆ ಒಳಗಾಗಿದ್ದಾರೆ. ಆಡಳಿತ ಪಕ್ಷ ಬಿಜೆಪಿಗೆ ಅನುಕೂಲಕರವಾಗಿ ಇಲ್ಲದ ಮತದಾರರನ್ನು ಹೀಗೆ ಡಿಲೀಟ್ ಮಾಡಲಾಗಿದೆಯೇ ಎಂಬ ಗುಮಾನಿಯೂ ಎದ್ದಿದೆ. ಅಂದರೆ ಮುಂಬರುವ ಕರ್ನಾಟಕ ವಿಧಾನಸಭಾ ಚುನಾವಣೆಗೆ ಸಿದ್ಧಗೊಳ್ಳುತ್ತಿರುವುದು ಕೇವಲ ಚುನಾವಣಾ ಆಯೋಗ ಮಾತ್ರವಲ್ಲ, ಅಧಿಕಾರ ನಡೆಸುತ್ತಿರುವ ಬಿಜೆಪಿಯೂ ಸಹ ಎನ್ನುವುದೂ ನಿಚ್ಚಳ. ಇದರಲ್ಲಿ ಆಳುವ ಪಕ್ಷದೊಂದಿಗೆ ಚುನಾವಣಾ ಆಯೋಗದ ಅಧಿಕಾರಿಗಳ ಪಾತ್ರ ಎಷ್ಟರ ಮಟ್ಟಿನದು ಎನ್ನುವುದೂ ಆಳವಾದ ತನಿಖೆಗೂ ಒಳಗೊಳ್ಳಬೇಕಾಗಿದೆ. ಬಿಜೆಪಿಯ ಈ ಕೃತ್ಯಗಳು, ಕಾನೂನುಬದ್ದ ಕ್ರಮವಲ್ಲ. ಅದು ಅಕ್ರಮ, ಅನೈತಿಕ. ಮತದಾರರನ್ನು ಮನ ಗೆಲ್ಲಲು ಆಗದ ರಾಜಕೀಯ ಪಕ್ಷವೊಂದು ತನ್ನ ಅಧಿಕಾರ ಮತ್ತು ಅಪಾರ ಹಣದ ಮೂಲಕ ಹೀಗೆ ಅಕ್ರಮಗಳನ್ನು ನಡೆಸುವ ಹಾದಿ ಹಿಡಿದರೆ, ಅದರಲ್ಲೂ ಕೇಂದ್ರ ಮತ್ತು ರಾಜ್ಯಗಳಲ್ಲಿ ಅಧಿಕಾರದಲ್ಲಿರುವ, ಎಲ್ಲ ವಿರೋಧ ಪಕ್ಷಗಳನ್ನು ನಿರ್ನಾಮ ಇಲ್ಲವೇ ಅಪೋಶನ ಮಾಡುತ್ತೇನೆ ಎಂದು ಬಹಿರಂಗವಾಗಿಯೇ ಸಾರುವ ಪಕ್ಷವೊಂದು ಹೀಗೆ ಮಾಡುತ್ತದೆ ಎನ್ನುವುದು ಭಾರೀ ಅಘಾತಕಾರಿ ಪರಿಣಾಮವನ್ನು ಬೀರಬಲ್ಲುದು. ಇಂತಹ ಚಿಂತನೆ, ಕೃತ್ಯಗಳು ಒಂದು ಘೋರ ಕ್ರಿಮಿನಲ್ ಅಪರಾಧವಾಗಿದೆ. ಬಿಜೆಪಿ ವಿವಿಧ ರಾಜ್ಯಗಳಲ್ಲಿ ನಡೆಸಿರುವ ಚುನಾವಣಾ ಅಕ್ರಮಗಳು ಯಾರೂ ಊಹಿಸಲಾರದಷ್ಟು ಇವೆ ಎನ್ನುವುದು ಹಿಂದಿನ ಅನುಭವಗಳಲ್ಲಿ ಕಂಡುಬರುತ್ತದೆ. ಮತದಾರರ ಕಾರ್ಡ್ ಗಳು ಮತ್ತು ಮತದಾನದ ಯಂತ್ರಗಳು ಸಾರ್ವಜನಿಕವಾಗಿಯೇ ಸಿಕ್ಕಿರುವ ಹಲವು ಉದಾಹರಣೆಗಳಿವೆ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳನ್ನು ಎದುರಿಸಲಾಗದೇ ಅವರ ಅಸ್ತಿತ್ವವನ್ನೇ ನಿರ್ಜೀವಗೊಳಿಸಿ ನಿರ್ನಾಮ ಮಾಡಿಬಿಡುವುದು ಫ್ಯಾಸಿಸ್ಟ್ ಮಾದರಿಯ ಅತಿರೇಕವಾಗಿದೆ. ಈ ಮೂಲಕ ಚುನಾವಣೆಗಳನ್ನೇ ಅರ್ಥಹೀನಗೊಳಿಸುತ್ತಾ ಹೋಗುವುದು ಒಂದೆಡೆಯಾದರೆ, ಮತ್ತೊಂದೆಡೆ ತಾನೇ ಅಧಿಕಾರದಲ್ಲಿ ಸದಾ ಮುಂದುವರೆಯ ಬೇಕು ಎನ್ನುವ ಸರ್ವಾಧಿಕಾರತ್ವ ಮಾತ್ರವಲ್ಲ ಅಧಿಕಾರ ಹಿಡಿಯಲು ಯಾವುದೇ ಹಂತಕ್ಕೂ ಹೋಗಬಹುದು ಎನ್ನುವ ದಾಷ್ಟ್ರ್ಯ ಅಪಾಯದ ಮಟ್ಟವನ್ನೂ ಮೀರಿದ್ದಾಗಿದೆ. ಈ ವರ್ತನೆ ಮತ್ತು ಒಟ್ಟು ವಿದ್ಯಾಮಾನಗಳು ನಮ್ಮ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಬುಡಮೇಲುಗೊಳಿಸುವ ಘೋರ ಪಾತಕದ ಕೃತ್ಯವಾಗಿದೆ.

ಈ ಇಡೀ ಪ್ರಕರಣ ಬೆಂಗಳೂರಿನ ಉಸ್ತುವಾರಿ ವಹಿಸಿರುವ ಮುಖ್ಯಮಂತ್ರಿಗಳಿಗೆ ಮತ್ತು ಆಯುಕ್ತರ ಪರಸ್ಪರ ಗಮನಕ್ಕೆ ಬಾರದೆ ನಡೆದಿರಲು ಸಾಧ್ಯವೇ ಇಲ್ಲ ಎನ್ನುವ ವಿರೋಧ ಪಕ್ಷದ ಮಾತುಗಳಲ್ಲಿ ಅರ್ಥವಿದೆ. ತನಿಖೆಯಲ್ಲಿ ನೋಟು ಎಣಿಸುವ ಯಂತ್ರವು ಸಿಕ್ಕಿದೆ ಎನ್ನುವುದು ಇದರ ವಹಿವಾಟು ಎಷ್ಟು ದೊಡ್ಡದಿರಬಹುದು ಎನ್ನುವುದನ್ನು ಹೇಳುತ್ತದೆ. ಕಂಪನಿ ತನ್ನ ಮೂಲ ಬಂಡವಾಳ ಕೇವಲ ಒಂದು ಲಕ್ಷ ಎಂದು ಪ್ರಕಟಿಸಿದೆ. ಆದರೆ ಇದು ನಡೆಸುತ್ತಿರುವ ಚಟುವಟಿಕೆಗಳ ಅಗಾಧತೆಯನ್ನು ನೋಡಿದಾಗ ಸಾವಿರಾರು ಕೋಟಿ ಇಲ್ಲವೇ ಕನಿಷ್ಠ ನೂರಾರು ರೂಪಾಯಿಗಳ ವ್ಯವಹಾರವಂತೂ ನಡೆದಿರಬಹುದಾದ ಸಾಧ್ಯತೆಗಳಿವೆ. ಈಗ ಕೇವಲ ಆ ಕಂಪನಿಯಲ್ಲಿ ಕೆಲಸ ಮಾಡುವ ನಾಲ್ಕು ಜನರನ್ನು ಮತ್ತು ಸ್ಥಳೀಯ ಚುನಾವಣಾ ಅಧಿಕಾರಿಯನ್ನು ಮಾತ್ರ ಬಂಧಿಸಲಾಗಿದೆ. ಈ ಸಂಸ್ಥೆಯ ಮುಖ್ಯಸ್ಥರಾಗಿರುವ ನಿರ್ದೇಶಕರುಗಳನ್ನು ಇದುವರೆಗೂ ಬಂಧಿಸದೆ ಇರುವುದು ಸಾರ್ವಜನಿಕರಲ್ಲಿ ಪ್ರಶ್ನೆಯನ್ನು ಹುಟ್ಟಿಸಿದೆ.

ಮತ್ತೊಂದು ಸಂಗತಿ ಎಂದರೆ ಈ ಸಂಸ್ಥೆಯ ಮುಖ್ಯಸ್ಥರು ಮತ್ತು ಸಚಿವ ಡಾ.ಅಶ್ವಥನಾರಾಯಣ ರವರ ಜೊತೆಗೆ ಇರುವ ರಕ್ತ ಸಂಬಂಧ ಮತ್ತು ಬಾಂಧವ್ಯಗಳು. ಈ ಅಂಶವೂ ಒಟ್ಟು ಹಗರಣದಲ್ಲಿ ಮುಖ್ಯವಾಗಿ ಕೆಲಸ ಮಾಡಿದ ಸಾಧ್ಯತೆಗಳಿವೆ. ಈ ಸಂಸ್ಥೆಯ ಮೂಲಚೂಲಗಳನ್ನು ಬಯಲಿಗೆ ಎಳೆಯುವ ಕಾರ್ಯ ತನಿಖೆಯಲ್ಲಿ ಮಹತ್ತರವಾಗಿದೆ.

ಚಿಗುರು ಸಂಸ್ಥೆಯ ಕೆಲಸಗಳು ಕೇವಲ ಬೆಂಗಳೂರಿಗೆ ಮಾತ್ರ ಸೀಮಿತವಾಗಿಲ್ಲ, ಬದಲಾಗಿ ಕರ್ನಾಟಕದ ರಾಜ್ಯ ವಿವಿಧ ಜಿಲ್ಲೆಗಳ ಕ್ಷೇತ್ರಗಳಿಗೂ ವ್ಯಾಪಿಸಿರುವುದು ಪುಟ 4 ಕ್ಕೆ

ಹಾಲಿನ ದರ ಹೆಚ್ಚಳದ ಹೇಳಿಕೆ ಮತ್ತು ಅದರ ಜಾರಿಗೆ ತಡೆ ಬಿಜೆಪಿಯ ಒಂದು ರಾಜಕೀಯ ತಂತ್ರ

ಸಿ.ಸಿದ್ದಯ್ಯ



ಹಾಲು ಮತ್ತು ಮೊಸರಿನ ದರವನ್ನು ಲೀಟರ್ ಗೆ 3 ರೂ. ಏರಿಕೆ ಮಾಡಿ, ಅದು ನಾಳೆಯಿಂದಲೇ ಜಾರಿಗೆ ಬರುತ್ತದೆ ಎಂದು ಹೇಳಿ ಅಂದೇ ಅದಕ್ಕೆ ತಡೆ ಹಿಡಿದ ಸುದ್ದಿ ನವೆಂಬರ್ 14 ರಂದು ಬಂತು. ಈ ರೀತಿ ಹೆಚ್ಚಳ ಮಾಡಿದ ದರವನ್ನು ಹಾಲು ಉತ್ಪಾದಕರಿಗೆ ವರ್ಗಾವಣೆ ಮಾಡಲಾಗುವುದು ಎಂಬ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿಯ ಪ್ರಕಟಣೆ ರೈತರಿಗೆ ಕೆಲ ಸಮಯ ಒಂದಷ್ಟು ಖುಷಿ ತಂದಿತ್ತು. ಈ ಹೆಚ್ಚಳ ಗ್ರಾಹಕರಿಗೆ ಹೊರೆ ಎನಿಸಿತ್ತು. ಆದರೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚನೆ ಮೇರೆಗೆ ಈ ದರದ ಹೆಚ್ಚಳವನ್ನು ಅಂದೇ ತಡೆ ಹಿಡಿಯಲಾಯಿತು.

ಚುನಾವಣೆಯಲ್ಲಿ ರಾಜಕೀಯ ಲಾಭ ಪಡೆಯುವ ತಂತ್ರ:

ಇನ್ನು ಐದಾರು ತಿಂಗಳಲ್ಲಿ ರಾಜ್ಯ ವಿಧಾನಸಭಾ ಚುನಾವಣೆ ನಡೆಯುತ್ತದೆ. ಇಂತಹ ಸಮಯದಲ್ಲಿ ಹಾಲಿನ ದರ ಏರಿಕೆ ಮಾಡಿದರೆ ಗ್ರಾಹಕರ ಕೋಪಕ್ಕೆ ತುತ್ತಾಗಬೇಕಾಗುತ್ತದೆ. ಹೆಚ್ಚಳ ಮಾಡದಿದ್ದರೆ ಹಾಲು ಉತ್ಪಾದಕ ರೈತರ ಕೋಪಕ್ಕೆ ತುತ್ತಾಗಬೇಕಾಗುತ್ತದೆ. ದರ ಹೆಚ್ಚು ಮಾಡಿ, ಆ ಹೆಚ್ಚುವರಿ ದರವನ್ನು ಹಾಲು ಉತ್ಪಾದಕರಿಗೆ ನೀಡುವ ಉದ್ದೇಶ ಹೊಂದಲಾಗಿದೆ ಎಂದು ಪ್ರಕಟಿಸುವ ಮೂಲಕ, ತಾನು ಹಾಲು ಉತ್ಪಾದನೆ ಮಾಡುವ ಮಿಲಿಯಾಂತರ ರೈತರ ಪರವಾಗಿದ್ದೇವೆಂದು ತೋರಿಸಿಕೊಳ್ಳುವ ಹಾಗೂ ಅವರ ಬೆಂಬಲ ಪಡೆಯುವ ಪ್ರಯತ್ನ ಮತ್ತು ದರ ಹೆಚ್ಚಾದರೆ ಗ್ರಾಹಕರಿಗೆ ತೊಂದರೆಯಾಗಲಿದೆ, ಆದ್ದರಿಂದ ಅದನ್ನು ವಾಪಾಸು ಪಡೆಯಲಾಗಿದೆಯೆಂಬ ಮತ್ತೊಂದು ಅಭಿಪ್ರಾಯವನ್ನು ತೂರಿ ಬಿಡುವ ಮೂಲಕ ಗ್ರಾಹಕರ ಬೆಂಬಲ ಪಡೆಯುವ ದುರುದ್ದೇಶದಿಂದ ಈ ಕ್ರಮ ವಹಿಸಲಾಗಿದೆ. ಆ ಮೂಲಕ ಉತ್ಪಾದಕರನ್ನು ಹಾಗೂ ಗ್ರಾಹಕರನ್ನು ಮುಖಾಮುಖಿಯಾಗಿಸುವ, ಸರಕಾರ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಮತ್ತು ಚುನಾವಣಾ ಲಾಭ ಗಳಿಸುವ ರಾಜಕೀಯ ತಂತ್ರ ಇದಾಗಿದೆ.

ಪಶು ಸಾಕಾಣಿಕೆ ವೆಚ್ಚ ದುಬಾರಿ:

ಗ್ರಾಮೀಣ ಭಾಗದಲ್ಲಿ ಕೃಷಿ ಜತೆ ಉಪಕಸುಬಾಗಿ ಹೈನುಗಾರಿಕೆ ನಡೆಸಿ ಜೀವನ ಸಾಗಿಸುತ್ತಿರುವ ರೈತ ಸಮುದಾಯಕ್ಕೆ ಇಂದು ಪಶು ಸಾಕಾಣಿಕೆ ವೆಚ್ಚ ಹೆಚ್ಚಿನ ಹೊರೆಯಾಗಿದೆ. ಕೃಷಿಯಲ್ಲಿ ಟ್ರಾಕ್ಟರ್ ಗಳ, ಯಂತ್ರಗಳ ಬಳಕೆ ಹೆಚ್ಚಿದಂತೆ ಉಳುಮೆ ಮತ್ತು ಸಾಗಾಣಿಕೆಯಲ್ಲಿ ಹಸು/ಎತ್ತುಗಳ ಬಳಕೆ ಕಡಿಮೆಯಾಗಿದೆ. ಇದರಿಂದ ಹಸು ಸಾಕಾಣಿಕೆಯಿಂದ ರೈತರಿಗೆ ಬರುವ ಆದಾಯವೂ ಕಡಿಮೆಯಾಗಿದೆ.

ಪಶು ಅಹಾರಗಳಾದ ಒಣ ಹುಲ್ಲು, ಜೋಳದ ಕಡ್ಡಿ, ಬೂಸ, ಶೇಂಗಾ, ಹಿಂಡಿ ಇತ್ಯಾದಿಗಳ ದರ ಹೆಚ್ಚಳವಾಗಿದೆ. ನಂದಿನಿ ಪಶು ಆಹಾರದ ಬೆಲೆಯೂ ದಿನೇ ದಿನೇ ದುಬಾರಿಯಾಗುತ್ತಿದೆ. ಆರೇಳು ತಿಂಗಳ ಹಿಂದೆ 950 ರೂ. ಇದ್ದ 50 ಕೆ.ಜಿ. ಚೀಲದ ದರ ಇಂದು 1185 ರೂ.ಗೆ ಏರಿಕೆಯಾಗಿದೆ. ಹಾಲು ಉತ್ಪಾದಕರ ಮೇಲೆ ಇವುಗಳ ನೇರ ಪರಿಣಾಮ ಬೀರುತ್ತಿದೆ. ಹೈನುಗಾರರು ಹಾಲು ಉತ್ಪಾದನೆಯ ಖರ್ಚು ಮತ್ತು ಆದಾಯವನ್ನು ಸರಿದೂಗಿಸಲಾಗದೆ ಹೈರಣಾಗಿದ್ದಾರೆ. ಇದಲ್ಲದೆ ಹೆಚ್ಚಿದ ಮಳೆಯಿಂದಾಗಿ ಶೆಂಗಾ ಹಿಂಡಿ, ಜೋಳ, ಹತ್ತಿ ಹಿಂಡಿ ಉತ್ಪಾದನೆ ಕುಂಠಿತವಾಗಿದ್ದು, ಕಳೆದ ಕೆಲವು ತಿಂಗಳಿಂದ ಇವುಗಳ ದರ ತೀವ್ರ ಏರುಗತಿಯಲ್ಲಿದೆ. ಚಿಕಿತ್ಸೆ, ಕೊಟ್ಟಿಗೆ ಸ್ವಚ್ಛತೆ, ನಿರ್ವಹಣೆ ಸೇರಿ ಎಲ್ಲವೂ ದುಬಾರಿಯಾಗಿವೆ.

ಸರ್ಕಾರದಿಂದ ಧನಸಹಾಯ:

ಸಹಕಾರ ಸಂಘಗಳು ಗುಣಮಟ್ಟದ ಆಧಾರಿತವಾಗಿ ಒಂದು ಲೀಟರ್ ಹಾಲಿಗೆ 28 ರೂ. ನೀಡುತ್ತಿದೆ. ಈ ಹಣಕ್ಕೆ ಸರ್ಕಾರದ ಸಹಾಯಧನ 5 ರೂ ಸೇರಿದರೆ ಸರಾಸರಿ 33ರೂ. ನಷ್ಟು ರೈತರಿಗೆ ಸಿಗುತ್ತದೆ. ಈ ಸಹಾಯಧನದ ಹಣವನ್ನೂ ಎರಡು ಮೂರು ತಿಂಗಳಿಗೊಮ್ಮೆ ಕೊಡುತ್ತಾರೆ ಎನ್ನುತ್ತಾರೆ ಮೈಸೂರು ಜಿಲ್ಲೆಯ ಗ್ರಾಮವೊಂದರ ರೈತ ನಾಗೇಂದ್ರ.

50 ಸಾವಿರ ರೂ ಕೊಟ್ಟು ತಂದಿದ್ದ ಹಸುವೊಂದು ದಿನಕ್ಕೆ ಮೂರ್ನಾಲ್ಕು ಲೀಟರ್ ಹಾಲು ಕೊಡುತ್ತಿತ್ತು. ಕಳೆದ ತಿಂಗಳು ಡೌನರ್ ಕೌ ಸಿಂಡ್ರೋಮ್ ನಿಂದಾಗಿ, ತನ್ನ ಕಾಲ ಮೇಲೆ ನಿಲ್ಲಲಾಗದೆ, ಮೇಲೇಳಲೂ ಆಗದೆ ಬಳಲುತ್ತಿತ್ತು. ವೈದ್ಯರಿಂದ ಚಿಕಿತ್ಸೆ ಕೊಡಿಸಿದರೂ ಅದು ಬದುಕುಳಿಯಲಿಲ್ಲ. ಅದಕ್ಕೆ ಈ ಖಾಯಿಲೆ ಬಂದಾಗಲೇ ಒಂದೆರಡು ಸಾವಿರ ರೂಗೆ ಮಾರುವಂತೆ ಕೆಲವರು ಸಲಹೆ ನೀಡಿದರು. ನನ್ನ ಮನಸ್ಸು ಅದಕ್ಕೆ ಒಪ್ಪಲಿಲ್ಲ. ಎಂದು ನೋವು ತೋಡಿಕೊಂಡ ನಾಗೇಂದ್ರ ತನ್ನ ಮನೆಯ ಎದುರು ಸತ್ತ ಹಸುವಿನ ಸಮಾದಿ ಮಾಡಿರುವುದನ್ನು ತೋರಿಸುತ್ತಾರೆ. 30 ಸಾವಿರ ವಿಮಾ ಹಣದ ನಿರೀಕ್ಷೆಯಲ್ಲಿದ್ದೇನೆ. ಮತ್ತೊಂದು ಹಸು ಖರೀದಿಗೆ ಹಣ ಹೊಂದಿಸಬೇಕು ಎನ್ನುತ್ತಾರೆ ಅವರು.

ಗರ್ಭ ಧರಿಸಿದ ಹಸುಗಳನ್ನು ಏನು ಮಾಡಬೇಕು?:

ಇಂದು ಹಾಲಿನ ಉತ್ಪಾದನೆಗಾಗಿಯೇ ಹಸುಗಳ ಸಾಕಾಣಿಕೆ ಮಾಡುತ್ತಾರೆ. ಇದಕ್ಕಾಗಿ ಹೆಚ್ಚು ಹಾಲು ಕೊಡುವ ಎಚ್ ಎಫ್ ತಳಿಯ ಜರ್ಸಿ ಹಸುಗಳನ್ನು 40 ರಿಂದ 60 ಸಾವಿರ ರೂ. ಕೊಟ್ಟು ಖರೀದಿಸಬೇಕು. ಈ ಹಸುಗಳ ಬೆಲೆ ಹಾಲು ಕೊಡುವ ಸಾಮರ್ಥ್ಯಕ್ಕೆ ಅನುಗುಣವಾಗಿ ಒಂದು ಲಕ್ಷ ರೂಪಾಯಿವರೆಗೆ ಇದೆ. ಇವುಗಳಿಗಾಗಿ ಪ್ರತ್ಯೇಕ ಕೊಟ್ಟಿಗೆ ನಿರ್ಮಾಣ ಮಾಡಲು ಲಕ್ಷಕ್ಕೂ ಹೆಚ್ಚು ಹಣ ವೆಚ್ಚ ಮಾಡಬೇಕು. ಬಹಳಷ್ಟು ಬಡ ರೈತರು ಪ್ರತ್ಯೇಕ ಕೊಟ್ಟಿಗೆ ಹೊಂದಲಾಗಿಲ್ಲ. ಈ ಹಣವನ್ನು ಖಾಸಗೀ ಲೇವಾದೇವಿದಾರರಿಂದ ಅಧಿಕ ಬಡ್ಡಿಗೆ ಸಾಲ ಪಡೆಯುತ್ತಾರೆ. ಈ ಹಸುಗಳು ವರ್ಷಕ್ಕೊಮ್ಮೆ ಕರು ಹಾಕುತ್ತವೆ. ವರ್ಷದಲ್ಲಿ ಹತ್ತು ತಿಂಗಳು ಹಾಲು ಕೊಡುತ್ತವೆ. ಒಂದು ವೇಳೆ ಹಸು ಬೆದೆಗೆ ಬರದಿದ್ದರೆ, ಬೆದೆಗೆ ಬಂದು ಫಲ ನಿಲ್ಲದಿದ್ದರೆ ಅಂಥ ಹಸುಗಳನ್ನು ಸಾಕುವ ಆರ್ಥಿಕ ಸಾಮರ್ಥ್ಯ ರೈತರಿಗಿಲ್ಲ. ಅಂತಹ ಹಸುಗಳನ್ನು ಏನು ಮಾಡಬೇಕು? ಎಂದು ಪ್ರಶ್ನಿಸುವ ಅದೇ ಗ್ರಾಮದ ಮತ್ತೊಬ್ಬ ಹಿರಿಯ ರೈತ ಬಸವರಾಜು ತಮ್ಮ ಪ್ರಶ್ನೆಗೆ ತಾವೇ ಉತ್ತರಿಸಿದ್ದು ಹೀಗೆ,

"ಇಂತಹ ಗೊಡ್ಡು ಹಸುಗಳನ್ನು ಸಾಕಲು ಯಾರೂ ಹಣ ಕೊಟ್ಟು ಖರೀದಿಸುವುದಿಲ್ಲ. ಇಂದಿನ ನಿಯಮಗಳ ಪ್ರಕಾರ 13 ವರ್ಷದ ಒಳಗಿನ ಹಸುಗಳನ್ನು ಕಟುಕರಿಗೆ ಮಾರುವಂತಿಲ್ಲ. ಕದ್ದು ಮುಚ್ಚಿ ಮಾರಿದರೂ ಮೂರ್ನಾಲ್ಕು ಸಾವಿರ ಪುಟ 7 ಕ್ಕೆ

ಯು.ಬಿ.ಲೋಕಯ್ಯ: ಬದುಕು-ಹೋರಾಟ
ರೋಮಾಂಚಕ ಹೋರಾಟಗಳ ಆಕರ್ಷಕ ಕಥನ

ವಾಸುದೇವ ಉಚ್ಚಿಲ

ಕಮ್ಯೂನಿಸ್ಟ್ ನಾಯಕರ ಜೀವನದಲ್ಲಿ ಹೋರಾಟಗಳ ಕಥೆ ಇದ್ದೇ ಇರುತ್ತದೆ. ಅವರು ಬದುಕಿರುವವರೆಗೂ, ಅವರ ಬಗೆಗೆ ತಿಳಿದವರು, ಈ ಕಥೆಗಳನ್ನು ಹೇಳುತ್ತಲೂ ಇರುತ್ತಾರೆ. ಆದರೆ ಅವುಗಳನ್ನು ಬರೆದು ದಾಖಲೆ ಮಾಡದೆ ಇದ್ದರೆ, ಆ ಕಥೆಗಳು ಮರೆವಿಗೆ ಸಲ್ಲುತ್ತದೆ.

ಕರ್ನಾಟಕದಲ್ಲೇ ಹಲವಾರು ಹೋರಾಟಗಾರ ಕಮ್ಯೂನಿಸ್ಟರ ಜೀವನ ಚರಿತ್ರೆಯನ್ನು ಬರೆಯದೆ ಇದ್ದುದರಿಂದ, ಹಲವು ಮಂದಿಯ ಜೀವನ ವೃತ್ತಾಂತಗಳು ಮರೆವಿಗೆ ಸಂದಿದೆ. ಕನ್ನಡದಲ್ಲಿ ಬೆರಳೆಣಿಕೆಯ ಜೀವನ ಚರಿತ್ರೆಗಳಷ್ಟೇ ಪ್ರಕಟವಾಗಿವೆ.

78 ವರ್ಷದ ಯು.ಬಿ.ಲೋಕಯ್ಯನವರು ನಮ್ಮ ಕಣ್ಣೆದುರಿಗೇ ಇದ್ದಾರೆ. ತಮ್ಮ 13ನೆಯ ವರ್ಷದಿಂದಲೂ ಅವರು ಕಮ್ಯೂನಿಸ್ಟ್ ಚಳುವಳಿಗಾರರ ಜೊತೆಗೇ ಇದ್ದಾರೆ. ನಾಯಕತ್ವವನ್ನೂ ನೀಡಿದ್ದಾರೆ. ಸಿಪಿಐ(ಎಂ) ಪಕ್ಷ ಕಳೆದ ವರ್ಷವಷ್ಟೇ ಅವರಿಗೆ ಹೊಣೆಗಾರಿಕೆಯಿಂದ ನಿವೃತ್ತಿ ನೀಡಿದೆ. ಅವರದ್ದೊಂದು ಕ್ರಾಂತಿಕಾರಿ ಜೀವನ ಎಂದು ಅವರ ಸುತ್ತಲಿನವರಿಗೆ ಗೊತ್ತು. ಅವರ ಒಡನಾಡಿಯಾಗಿ ದುಡಿದಿದ್ದ ಬಾಬು ಪಿಲಾರ್‌ರವರು "ಯು.ಬಿ.ಲೋಕಯ್ಯ: ಬದುಕು–ಹೋರಾಟ" ಪುಸ್ತಕವನ್ನು ಇತ್ತೀಚೆಗಷ್ಟೇ ಬರೆದು ಪ್ರಕಟಿಸಿದ್ದಾರೆ. ಯು.ಬಿ.ಲೋಕಯ್ಯನವರ ರೋಮಾಂಚಕ ಹೋರಾಟಗಳನ್ನು ಆಕರ್ಷಕ ಕಥನವಾಗಿ ಬರಹದಲ್ಲಿ ಕಾಣಿಸುವ ಮೂಲಕ, ಬಾಬು ಪಿಲಾರ್ ಅವರು ಸಮರ್ಥ ಲೇಖಕರೂ ಹೌದು ಎಂಬುದು ಇದೇ ಪ್ರಥಮವಾಗಿ ಜಾಹೀರು ಆಗಿದೆ.

ಪುಸ್ತಕದ ಪರಿಚಯ ಮಾಡುವ ಈ ಬರಹದಲ್ಲಿ, ಯು.ಬಿ.ಲೋಕಯ್ಯರ ನೂರಾರು ರೈತ ಕಾರ್ಮಿಕರ ಪರವಾದ ಹೋರಾಟಗಳ ಮಾಹಿತಿಯನ್ನು ಸಮಗ್ರವಾಗಿ ಕೊಡುವುದಂತೂ ಸಾಧ್ಯವೇ ಇಲ್ಲ. ಯು.ಬಿ.ಲೋಕಯ್ಯ ಅವರು ಯಾರು, ಅವರು ಮಾಡಿದ ಹೋರಾಟ ಯಾವ ಬಗೆಯದು ಎಂಬುದನ್ನು ಸೂಚಿಸುವುದಷ್ಟೇ ಇಲ್ಲಿನ ಕೆಲಸ.

1940ರ ದಶಕದ ಮಧ್ಯದಲ್ಲಿ ಬಡ ಗೇಣಿದಾರ ರೈತನೊಬ್ಬನ ಮಗನಾಗಿ ಹುಟ್ಟಿದ ಯು.ಬಿ.ಲೋಕಯ್ಯರ ಕುಟುಂಬ, ಭೂಮಾಲಿಕನ ಗೇಣಿ ಸಕಾಲಕ್ಕೆ ಸಲ್ಲಿಸಲಾಗದೆ, ದ.ಕ.ಜಿಲ್ಲೆಯ ಮುಡಿಪು ಎಂಬಲ್ಲಿಂದ ಉಳ್ಳಾಲ ಪರಿಸರದ ಊರಿಗೆ ಬರುತ್ತದೆ. ಚಿಕ್ಕ ಮಕ್ಕಳ ಕುಟುಂಬ ಬಡತನದಲ್ಲಿ ವಿದ್ಯಾಭ್ಯಾಸವನ್ನು ಪಡೆಯಲಾರದ ಕಷ್ಟದಲ್ಲಿತ್ತು. ಆ ಸಂದರ್ಭ ಉಳ್ಳಾಲ ಪರಿಸರದ ಬೀಡಿ ಕಂಪೆನಿಯಲ್ಲಿ ಬೀಡಿ ಸುತ್ತುವ ಕೆಲಸಕ್ಕೆ ತೊಡಗುತ್ತಾರೆ ಬಾಲಕ ಯು.ಬಿ.ಲೋಕಯ್ಯ. ಬೀಡಿ ಕಂಪೆನಿಯಲ್ಲಿ ಬೀಡಿ ಮಾಲಿಕರಿಂದ ಕಾರ್ಮಿಕರ ಶೋಷಣೆ, ಸುತ್ತುಮುತ್ತಲು ಕೃಷಿ ಕೆಲಸ ಮಾಡುವಲ್ಲಿ ಭೂಮಾಲಿಕರಿಂದ ಗೇಣಿ ರೈತರ ಹಾಗೂ ಕೃಷಿ ಕಾರ್ಮಿಕರ ಶೋಷಣೆ. ಆ ಭಾಗದಲ್ಲಿ ಆಗ ಉದಯಿಸಿರುವ ಕಮ್ಯೂನಿಸ್ಟ್ ಚಳುವಳಿಯಿಂದಲಾಗಿ, ಸೂಕ್ಷ್ಮ ಹಾಗೂ ಚುರುಕು ಬುದ್ಧಿಯ ಯು.ಬಿ.ಲೋಕಯ್ಯರಿಗೆ ಶೋಷಣೆಯ ಸ್ವರೂಪ ಅನುಭವಕ್ಕೆ ಬಂತು. ಅನ್ಯಾಯವನ್ನು ಕಂಡಾಗಲೆಲ್ಲ ಅದನ್ನು ಪ್ರತಿಭಟಿಸುವ ಗುಣವನ್ನು ಬೆಳೆಸಿಕೊಂಡರು ಮತ್ತು ಇದರಿಂದ ಕಮ್ಯೂನಿಸ್ಟ್ ಚಳುವಳಿಯಲ್ಲಿ ಭಾಗವಹಿಸತೊಡಗಿದರು.

ಯುವಕನಾಗಿ ಬೀಡಿ ಕಾರ್ಮಿಕನಾಗಿ ದುಡಿಯುತ್ತಿದ್ದಾಗಲೇ, ಉಳ್ಳಾಲ ಪ್ರದೇಶದಲ್ಲಿ ಭೂಮಾಲಕರು ಗೇಣಿರೈತರನ್ನು ಒಕ್ಕಲೆಬ್ಬಿಸಿದಾಗ, ರೈತರು ಬೆಳೆದ ಕೊಯಿಲನ್ನು ಬಲವಂತವಾಗಿ ಕೊಯ್ದು ಸಾಗಿಸಿದಾಗ, ಅಥವಾ ರೈತರ ಮೇಲೆ ದಾಳಿ ದಬ್ಬಾಳಿಕೆ ನಡೆಸಿದಾಗ, ಅಂಥ ದೌರ್ಜನ್ಯಗಳ ವಿರುದ್ಧ ರೈತ ಸಂಘದ ಸಂಗಾತಿಗಳೊಂದಿಗೆ ದೈಹಿಕ ಸಂಘರ್ಷಕ್ಕೂ ಮುಂದಾಗಿ ರೈತರಿಗೆ ನ್ಯಾಯ ಒದಗಿಸಿಕೊಟ್ಟ ಹಲವಾರು ಸಂಗತಿಗಳನ್ನು ಈ ಪುಸ್ತಕದಲ್ಲಿ ನಿರೂಪಿಸಲಾಗಿದೆ. ಭೂಮಾಲಕರು ಭೂತಗಳಿಗೆ ಬಿಟ್ಟ ಭೂಮಿ ಎಂದು ಹೇಳಿ ರೈತರನ್ನು ಒಕ್ಕಲೆಬ್ಬಿಸಿದಾಗ, ಭೂತಗಳ ಕೋಲಗಳಲ್ಲಿ ತಾನು ಒಕ್ಕಲಿನವನೊಡನೆ ಭಾಗಿಯಾಗಿ, ಭೂತಗಳೇ ಒಕ್ಕಲಿನವನ ಪರವಾಗಿ ನ್ಯಾಯ ನೀಡುವಂತೆ ಮಾಡಿದ 2 ಪ್ರಸಂಗಗಳ ನಿರೂಪಣೆ ಅತ್ಯಂತ ಆಕರ್ಷಣೀಯವಾಗಿದೆ. (1. ಭೂತ ಕೇಳಿತು – ಶೆಟ್ಟಿಗಾರನ ಗೇಣಿಯಿಂದ ನೇಮ ನಡೆಸುವುದಾ? 2. ಮೋನಪ್ಪ ಭಂಡಾರಿ ಶುದ್ಧದದಲ್ಲಿದ್ದೀಯೋ?) ಒಕ್ಕಲು–ಧಣಿಯ ಸಂಘರ್ಷದಲ್ಲಿ ನ್ಯಾಯ ಕೊಡಿಸುವುದಾಗಿ ಲೋಕಯ್ಯನವರು ಮಧ್ಯಪ್ರವೇಶಿಸಿದ ಎಂಟತ್ತು ಪ್ರಸಂಗಗಳೂ ನಿರೂಪಣೆಯ ಶೈಲಿಯಿಂದ ಓದಿಸಿಕೊಳ್ಳುವ ಗುಣ ಹೊಂದಿವೆ.

ಗ್ರಂಥದಲ್ಲಿ ಮೂರು ಭಾಗಗಳಿವೆ. ಮೊದಲ ಭಾಗ ಯು.ಬಿ.ಲೋಕಯ್ಯರ ಬಾಲ್ಯದಿಂದ ಮೊದಲಾಗುತ್ತದೆ. ಬೀಡಿ ಕಂಪೆನಿಯಲ್ಲಿ ಕೆಲಸ ಆರಂಭಿಸಿದ್ದು, ಮುಂದೆ, ಯುವಕನಾಗಿ ಮಂಗಳೂರಿನ ಹಂಚಿನ ಕಾರ್ಖಾನೆಯಲ್ಲಿ ದುಡಿದದ್ದು, ಹಾಗೆ ಕೆಲಸ ಮಾಡುತ್ತಲೇ ಬೀಡಿ ಕಾರ್ಮಿಕರ, ಹಂಚಿನ ಕಾರ್ಮಿಕರ ಹೋರಾಟದ ಅನುಭವ ಪಡೆದಿದ್ದು ಮತ್ತು ಜೊತೆಗೆ ರೈತ ಚಳುವಳಿಯ ಸಂಪರ್ಕ ಪಡೆದುದರ ವಿವರಗಳಿವೆ. ಇದೇ ಭಾಗದಲ್ಲಿ ಆರೆಸ್ಸೆಸ್‌ನಲ್ಲಿ ಭಾಗವಹಿಸುತ್ತಿದ್ದ ತಾನು, ಆರೆಸ್ಸೆಸ್‌ನ ಮಾರ್ಗದರ್ಶಕರು ಬೀಡಿ ಕಾರ್ಮಿಕರ ಹಾಗೂ ರೈತರ ವಿರೋಧಿಯಾಗಿ ಮಾತನಾಡುತ್ತಿದ್ದುದನ್ನು ಗಮನಿಸಿ, ಅದನ್ನು ಪ್ರತಿಭಟಿಸಿ ಆರೆಸ್ಸೆಸ್ ಬಿಟ್ಟುದರ ನಿರೂಪಣೆ ಇದೆ. ಅಂದಿನ ಕಮ್ಯೂನಿಸ್ಟ್ ನಾಯಕರಾದ ಎ.ಕೃಷ್ಣ ಶೆಟ್ಟಿ, ಎಂ.ಎಚ್.ಕೃಷ್ಣಪ್ಪನವರ ಸಂಪರ್ಕಕ್ಕೆ ಬಂದು, ಕಮ್ಯೂನಿಸ್ಟ್ ಪಕ್ಷವೊಂದೇ ಬಡಜನತೆಯ ವಿಮೋಚಕ ಎಂಬ ಅರಿವು ಅವರಿಗೆ ಬರುತ್ತದೆ. ಆ ಸಂದರ್ಭದಲ್ಲಿ ತಮ್ಮ ಹಿರಿಯ ಸಂಗಾತಿಯಾದ ಜನಾರ್ದನ ನಾಯ್ಕ್ ಅವರೊಂದಿಗೆ ಮೂಡಬಿದರೆ ಸಮೀಪದ ಕೊಡಂಜೆಯಲ್ಲಿ ನಡೆದ ಕಮ್ಯೂನಿಸ್ಟ್ ಪಕ್ಷದ 13 ದಿನಗಳ ಕ್ಯಾಂಪು ಯು.ಬಿ.ಲೋಕಯ್ಯರನ್ನು ಒಬ್ಬ ತತ್ವನಿಷ್ಠ ಹಾಗೂ ಬದ್ಧತೆಯಿರುವ ಕಮ್ಯೂನಿಸ್ಟ್ ಕಾರ್ಯಕರ್ತರಾಗಿ ರೂಪಿಸಿದ ವಿಚಾರ ಬರುತ್ತದೆ.


ಗ್ರಂಥದ ಎರಡನೇ ಭಾಗದಲ್ಲಿ ರೈತ ಹೋರಾಟದ ವಿವಿಧ ಘಟನೆಗಳನ್ನು ನಿರೂಪಿಸಲಾಗಿದೆ.

ಗ್ರಂಥದ ಮೂರನೇ ಭಾಗದಲ್ಲಿ ಕಮ್ಯೂನಿಸ್ಟ್ ಪಕ್ಷದ ಪೂರ್ಣಾವಧಿ ಕಾರ್ಯಕರ್ತನಾಗಿ, ಬೀಡಿ ಕಾರ್ಮಿಕ ಸಂಘಟನೆಯಲ್ಲಿ ಮತ್ತು ಸಿಪಿಐ(ಎಂ) ಪಕ್ಷದಲ್ಲಿ ಜಿಲ್ಲಾ ಮಟ್ಟದ ಮುಖಂಡರಾಗಿ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದ ವಿವರಗಳನ್ನು ಕಾಣಿಸಲಾಗಿದೆ. ಬೀಡಿ ಉದ್ಯಮ ಮೊದಲು ಬೀಡಿ ಕಾರ್ಖಾನೆಗಳಲ್ಲಿ ಪುರುಷರು ಮಾಡುವ ವೃತ್ತಿಯಾಗಿತ್ತು. 1930ರ ದಶಕದಿಂದಲೇ ವಿವಿಧ ಉದ್ಯಮಗಳಲ್ಲಿ ಕಾರ್ಮಿಕರು ಸಂಘಟಿತರಾಗಿ ಹಕ್ಕುಗಳಿಗಾಗಿ ಬೇಡಿಕೆ ಇಡಲಾರಂಭಿಸಿದ್ದರು. ಬೀಡಿ ಉದ್ದಿಮೆಯಲ್ಲಿ ಕೂಡಾ. ಇದನ್ನು ತಪ್ಪಿಸಲು ಬೀಡಿ ಮಾಲಕರು ಮನೆ ಮನೆಗೆ ಬೀಡಿ ಕಟ್ಟುವುದನ್ನು ವರ್ಗಾಯಿಸಿ, ಕಾಂಟ್ರಾಕ್ಟು ಪದ್ಧತಿ ಹಾಗೂ ಮಹಿಳೆಯರ ಮೂಲಕ ಬೀಡಿ ಉದ್ದಿಮೆ ಮುಂದುವರಿಸಿದರು. ಇದರಿಂದ ಬೀಡಿ ಕಾರ್ಮಿಕರ ಶೋಷಣೆ ಇನ್ನಷ್ಟು ತೀವ್ರವಾಯಿತು. ಈ ಹಿನ್ನೆಲೆಯಲ್ಲಿ ದ.ಕ.ಜಿಲ್ಲೆಯಲ್ಲಿ ಬೀಡಿ ಕಾರ್ಮಿಕ ಚಳುವಳಿ ಹೆಚ್ಚೆಚ್ಚು ಬಲಿಷ್ಟವಾಗುತ್ತಾ ಹೋಯಿತು. ಇಂಥ ಸಂದರ್ಭದಲ್ಲೇ ಯು.ಬಿ.ಲೋಕಯ್ಯರು ಬೀಡಿ ಚಳುವಳಿಗೆ ನೇತೃತ್ವ ನೀಡಿದ್ದು. ರೈತ ಚಳುವಳಿ, ಹಂಚಿನ ಕಾರ್ಮಿಕರ ಚಳುವಳಿಯಲ್ಲಿ ಅವರು ತೋರಿದ ಸಮರಶೀಲ ಗುಣ, ಬೀಡಿ ಕಾರ್ಮಿಕರ ಚಳುವಳಿಯಲ್ಲೂ ಕಾಣಿಸಿಕೊಂಡಿತು. ಕನಿಷ್ಟ ಕೂಲಿಗಾಗಿ ಹೋರಾಟ, ಹೆರಿಗೆ ಭತ್ತೆಗಾಗಿ ಹೋರಾಟ, ಪ್ರಾವಿಡೆಂಟ್ ಫಂಡ್‌ಗಾಗಿ ನಡೆಸಿದ ಐತಿಹಾಸಿಕ ಹೋರಾಟ ಮತ್ತು ತುಟ್ಟಿಭತ್ತೆಗಾಗಿ ಪದೇ ಪದೇ ಮಾಡಬೇಕಾಗುತ್ತಿದ್ದ ಅಸಂಖ್ಯಾತ ಹೋರಾಟಗಳು–ಇವು ಎಲ್ಲದರಲ್ಲೂ ಯು.ಬಿ.ಲೋಕಯ್ಯನವರು ಮುನ್ನುಗ್ಗಿ ಸಾಗುವುದನ್ನು, ಭಯವೇ ಇಲ್ಲದ ಅವರ ನಡೆಯನ್ನು ಎಲ್ಲರೂ ಗುರುತಿಸಬಹುದಾಗಿತ್ತು. ಈ ಎಲ್ಲದರ ಬಗ್ಗೆಯೂ ಮೂರನೇ ಭಾಗದಲ್ಲಿ ವಿವರಗಳಿವೆ. ಸಿಪಿಐ(ಎಂ) ಪಕ್ಷದ ಗುರುಪುರ ವಲಯ ಕಾರ್ಯದರ್ಶಿಯಾಗಿ ದೀರ್ಘಕಾಲ ಪಕ್ಷವನ್ನು ಅವರು ಮುನ್ನಡೆಸಿದ್ದಾರೆ.

ಶಾಲಾ ಶಿಕ್ಷಣದಿಂದ ವಂಚಿತರಾದರೂ, ಚಳುವಳಿಯಲ್ಲಿ ಬೆಳೆಯುತ್ತಿದ್ದಂತೆ ಓದು ಬರಹ ಕಲಿತದ್ದು, ಸರಳವಾದ ಅವರ ಬದುಕು ಹಾಗೂ ಬಡಕುಟುಂಬದ ಹೆಣ್ಣೊಬ್ಬಳನ್ನು ಮದುವೆಯಾದುದು, ಹೆಣ್ಣು ಮಕ್ಕಳಿಬ್ಬರನ್ನು ಕಾಲೇಜು ಓದಿಸಿದ್ದು – ಇಂಥ ವೈಯುಕ್ತಿಕ ವಿವರಗಳೂ ಗ್ರಂಥದ ಬೇರೆ ಬೇರೆ ಕಡೆ ಮೂಡಿಬಂದಿದೆ. ತೋಳು ಮಡಚಿದ ಉದ್ದಕೈಯ ಬಿಳಿ ಶರ್ಟು, ಶುಭ್ರ ಬಿಳಿಯ ಪಂಚೆ–ಅವರ ಗುರುತು. ಕಂಕುಳಲ್ಲಿ ಸದಾ ಆ ದಿನದ ಪ್ರಜಾವಾಣಿ ಪತ್ರಿಕೆ. ಅಂಗಿ ಕಿಸೆಯಲ್ಲೊಂದು ಪಾಕೆಟ್ ಡೈರಿ.

ಯು.ಬಿ.ಲೋಕಯ್ಯರು ಒಂದು ದಂತ ಕಥೆ. ಅಂಥ ದಂತ ಕಥೆಯಾಗಬಲ್ಲವರು ಈ ದಿನಗಳಲ್ಲಿ ಹೆಚ್ಚು ಮಂದಿ ಇರಲಿಕ್ಕಿಲ್ಲ. ಅವರ ಸಾಹಸಮಯ ಜೀವನಗಾಥೆ ಮೂಲಕ ಅವರ ವ್ಯಕ್ತಿತ್ವದ ಪರಿಚಯವನ್ನು ಈ ಪುಸ್ತಕ ಮಾಡಿಕೊಡುತ್ತದೆ. ಈ ಪುಸ್ತಕದ ಇನ್ನೊಂದು ಮುಖ–ಪುಸ್ತಕದ ಬರವಣಿಗೆಯ ಆಕರ್ಷಕ ಶೈಲಿ. ಕಥೆ ಕಾದಂಬರಿಗಳ ನಿರೂಪಣಾ ಶೈಲಿಯಲ್ಲಿ ಯು.ಬಿ.ಲೋಕಯ್ಯರ ಹೋರಾಟದ ಕಥೆಗಳನ್ನು ಬಾಬು ಪಿಲಾರ್ ನಿರೂಪಿಸಿದ್ದಾರೆ. ಲೋಕಯ್ಯರ ಜೊತೆಗೆ ನಡೆಸಿದ ಸಂದರ್ಶನಗಳನ್ನು ಅಲ್ಲಲ್ಲಿ ಬಳಕೆ ಮಾಡಿಕೊಂಡಿದ್ದರೂ, ಅವರು ಘಟನಾ ಸಂದರ್ಭಗಳಲ್ಲಿ ನಡೆದ ಸಂಭಾಷಣೆಗಳನ್ನು ಯಥಾವತ್ತಾಗಿ ಕಾಣುವಂತೆ ಬಾಬು ಪಿಲಾರ್ ಬರೆದಿರುವುದರಿಂದ, ಒಂದು ಜೀವನ ಚರಿತ್ರೆಯೂ ಕಥೆ ಕಾದಂಬರಿಯಂತೆ ಓದಿಸಿಕೊಳ್ಳುವ ಗುಣ ಪಡೆದಿದೆ. ಮಂಗಳೂರಿನ ಹಿರಿಯ ಲೇಖಕಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತೆಯಾಗಿರುವ ಬಿ.ಎಂ. ರೋಹಿಣಿಯವರು ಈ ಪುಸ್ತಕಕ್ಕೆ ಮೌಲಿಕವಾದ ಮುನ್ನುಡಿಯನ್ನು ಬರೆದಿದ್ದಾರೆ.

ಮೊನ್ನೆ ಅಕ್ಟೋಬರ್ 31 ರಂದು ಬೀಡಿ ಕಾರ್ಮಿಕರ ಫೆಡರೇಶನ್ (ಸಿಐಟಿಯು) ರಾಜ್ಯ ಸಮ್ಮೇಳನ ಮಂಗಳೂರಿನಲ್ಲಿ ಜರಗಿದ್ದ ಸಂದರ್ಭದಲ್ಲಿ ಯು.ಬಿ.ಲೋಕಯ್ಯನವರು ಸಮ್ಮೇಳನದ ಧ್ವಜಾರೋಹಣ ಮಾಡಿದ್ದರು. ಉದ್ಘಾಟನಾ ಸಮಾರಂಭದಲ್ಲಿ ಫೆಡರೇಶನ್ನಿನ ರಾಷ್ಟ್ರೀಯ ಅಧ್ಯಕ್ಷರಾದ ದೇಬಾಶಿಸ್ ರಾಯ್ ಅವರು "ಯು.ಬಿ.ಲೋಕಯ್ಯ: ಬದುಕು–ಹೋರಾಟ" ಗ್ರಂಥವನ್ನು ಲೋಕಾರ್ಪಣೆ ಮಾಡಿದರು.




ಹಗರಣದ ತನಿಖೆ ನಿಷ್ಪಕ್ಷಪಾತವಾಗಿ ನಡೆಯಲಿ..... ಪುಟ 3 ರಿಂದ

ಕಂಡುಬಂದಿದೆ.

ಬಿಜೆಪಿ ಅಧಿಕಾರದಲ್ಲಿ ಬಂದ ಲಾಗಾಯ್ತಿನಿಂದಲೂ ಹಲವಾರು ಭಾರಿ ಹಗರಣಗಳು ಸ್ಫೋಟಗೊಳ್ಳುತ್ತಿವೆ. ಅವಿನ್ನೂ ಒಂದು ತಾರ್ಕಿಕ ಹಂತವನ್ನು ತಲುಪಿಲ್ಲ. ಅದೇ ಹೊತ್ತಿನಲ್ಲಿ ಚುನಾವಣಾ ಅಕ್ರಮಗಳ ಪ್ರಕರಣವೂ ಹೊರಬಂದಿದೆ. ಇಂಥದೊಂದು ಗಂಭೀರವಾದ ಆರೋಪ ಬಂದ ನಂತರ ಸರ್ಕಾರ ಅತ್ಯಂತ ಜವಾಬ್ದಾರಿಯಿಂದ ವರ್ತಿಸಬೇಕಾಗಿತ್ತು. ಅದಕ್ಕೆ ಬದಲಾಗಿ ಮುಖ್ಯಮಂತ್ರಿ ಮತ್ತು ಅವರ ಸಂಪುಟದ ಸಚಿವರು ಬಿಜೆಪಿ ನಾಯಕರು ಈ ಪ್ರಕರಣದ ಬಗ್ಗೆ ಪ್ರಶ್ನೆ ಎತ್ತಿದವರ ಮೇಲೆಯೇ ದಾಳಿಯನ್ನು ನಡೆಸುತ್ತಿರುವುದು ಅತ್ಯಂತ ಖಂಡನೀಯ. ಹಿಂದಿನ ಸರ್ಕಾರದ ಪಾತ್ರವೇನಾದರೂ ಇದ್ದರೆ ಅದನ್ನು ತನಿಖೆಗೆ ಒಳಪಡಿಸಬೇಕು. ಆದರೆ ಅದರ ಅರ್ಥ ಈಗಿನ ಹಗರಣದ ಸಮರ್ಥನೆಗೆ ಸಕಾರಣ ಹೇಗಾಗುತ್ತದೆ? ಇದು ಪ್ರಶ್ನಿಸಿದವರನ್ನೇ ಬೆಸರಿಸುವ ಬ್ಲಾಕ್ ಮೇಲ್‌ತಂತ್ರ. ಆಡಳಿತ ಪಕ್ಷದ ವರ್ತನೆ ಅತ್ಯಂತ ನಾಚಿಕೆಗೇಡಿನ, ಹೇಯ ಕೃತ್ಯವಾಗಿದೆ. ಈ ಸರ್ಕಾರದಲ್ಲಿರುವವರ ಬಾಗಿತ್ವವನ್ನು ಪ್ರಶ್ನಿಸುವ ಮತ್ತು ಇಡೀ ಪ್ರಕರಣದಲ್ಲಿ ಮುಖ್ಯಮಂತ್ರಿಯನ್ನು ಒಳಗೊಂಡಂತೆ ಸಂಬಂಧಿಸಿದ ಸಚಿವರು, ಶಾಸಕರು ಮತ್ತು ಬಿಬಿಎಂಪಿಯ ಆಯುಕ್ತರನ್ನು ಒಳಗೊಂಡು ಎಲ್ಲಾ ಅಧಿಕಾರಿಗಳನ್ನು ಆಳವಾದ ತನಿಖೆಗೆ ಒಳಪಡಿಸಬೇಕು. ಆದರೆ ಸರ್ಕಾರಕ್ಕೆ ಈ ಪ್ರಕರಣವನ್ನ ಮೂಲಚೂಲವಾಗಿ ಭೇದಿಸಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡುವ ಮನಸ್ಸು ಇದ್ದಂತೆ ಕಾಣುವುದಿಲ್ಲ. ಇದಕ್ಕೆ ಮುಖ್ಯವಾಗಿ ಚುನಾವಣಾ ಅಕ್ರಮಗಳನ್ನು ತಡೆಯುವ ದೃಢ ಮನಸ್ಸು ಇರಬೇಕು ಆದರೆ ಈ ಸರ್ಕಾರದಲ್ಲಿ ಅದೇ ಗೈರಾಗಿದೆ. ಪೊಲೀಸರ ಮೂಲಕ ನಡೆಸುವ ಈ ತನಿಖೆ ಸಾಕಾಗುವುದಿಲ್ಲ. ಹಗರಣ ನಡೆಸಿದ ಆರೋಪದಲ್ಲಿರುವವರ ಅಡಿಯಲ್ಲಿಯೇ ಇರುವ ಪೊಲೀಸ್ ಇಲಾಖೆಯ ತನಿಖೆಗೆ ಆದೇಶಿಸಿರುವುದು ಸರಿಯಲ್ಲ. ಇಲಾಖೆ ಕಾರ್ಯದಕ್ಷತೆಯಲ್ಲಿ ಸಮರ್ಥವಿದೆ ಎಂದರೂ ಈ ಸರ್ಕಾರದ ಆದೇಶ ಇಂಗಿತವನ್ನು ಮೀರಿ ಅದು ಕೆಲಸ ಮಾಡಲು ಸಾಧ್ಯವಿಲ್ಲ ಎನ್ನುವುದು ಹಲವು ಪ್ರಕರಣಗಳಲ್ಲಿ ಎದ್ದು ಕಾಣಿಸುತ್ತದೆ. ಬದಲಾಗಿ ಇದನ್ನು ಮುಚ್ಚಿ ಹಾಕುವ ಸಾಧ್ಯತೆಗಳೇ ಹೆಚ್ಚು ಎನ್ನುವ ಸಾರ್ವಜನಿಕರ ಅನುಮಾನಕ್ಕೆ ಆಧಾರ ಇಲ್ಲದಿಲ್ಲ. ಶೇ. 40ರ ಭ್ರಷ್ಟಾಚಾರ ಹಗರಣ, ರಮೇಶ್ ಜಾರಕಿಹೊಳಿಯವರ ಲೈಂಗಿಕ ಹಗರಣ, ಕೆ.ಎಸ್. ಈಶ್ವರಪ್ಪನವರ ಭ್ರಷ್ಟಾಚಾರದ ಹಗರಣ, ಪೊಲೀಸ್ ನೇಮಕಾತಿಯಲ್ಲಿ ನಡೆದಿರುವ ಬೃಹತ್ ಹಗರಣಗಳ ಪರಿಸ್ಥಿತಿ ಏನಾಗುತ್ತಿದೆ ಎನ್ನುವುದೇ ಸಾಕು. ಆದ್ದರಿಂದ ಈ ಪ್ರಕರಣವನ್ನು ರಾಜ್ಯ ಸರ್ಕಾರದ ಸುಪರ್ದಿಯಿಂದ ಬೇರೆ ಏಜೆನ್ಸಿ ಕೊಡಬೇಕು. ಇದನ್ನು ಹೈಕೋರ್ಟ್ ನ ಹಾಲಿ ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದ ತನಿಖೆಗೆ ಒಳಪಡಿಸಲು ಒತ್ತಾಯಿಸುತ್ತಿರುವುದನ್ನೂ ಪರಿಗಣಿಸಬೇಕು. ಒಟ್ಟುಆಗಬೇಕಿರುವುದು ನಿಸ್ಪಕ್ಷಪಾತದ ತನಿಖೆ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಮತ್ತು ಸಂಸದೀಯ ಪ್ರಜಾಪ್ರಭುತ್ವ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳ ಸಂರಕ್ಷಣೆ. ಹೀಗಾಗಿ ಸಂವಿಧಾನ ಬದ್ಧ ಸರಕಾರ ಒಂದು ಪಾರದರ್ಶಕವಾಗಿ ನಡೆದುಕೊಳ್ಳುವುದು ಅತ್ಯಂತ ಅಗತ್ಯ.

ಎಲ್ಲಾ ರಂಗಗಳಲ್ಲಿ ವಿಫಲವಾಗಿ, ರಾಜ್ಯದ ಬೊಕ್ಕಸ ಮತ್ತು ಸಾರ್ವಜನಿಕ ಸಂಪತ್ತನ್ನು ಲೂಟಿ ಹೊಡೆಯುತ್ತಿರುವ ಬಿಜೆಪಿ ಹಾಗೂ ಕೋಮುವಾದಿ ಕಾರ್ಪೋರೇಟ್ ದುಷ್ಟಕೂಟವು ಹಗರಣವನ್ನು ಮುಚ್ಚಿ ಹಾಕಲು ಬಿಡಬಾರದು. ಇದರ ಹೊಣೆ ಹೊತ್ತು ಮುಖ್ಯಮಂತ್ರಿ, ಹೆಸರು ಕೇಳಿ ಬಂದಿರುವ ಸಚಿವ ಅಶ್ವಥನಾರಾಯಣ ರಾಜೀನಾಮೆ ಸಲ್ಲಿಸಬೇಕು. ಆ ಮೂಲಕ ತನಿಖೆ ಸುಗಮವಾಗಿ ನಡೆಯುವಂತೆ ನೋಡಿಕೊಳ್ಳುವ ಜವಾಬ್ದಾರಿ ಅವರ ಹೆಗಲ ಮೇಲೆಯೇ ಇದೆ.



ಅಂಕಪಟ್ಟಿಗಾಗಿ ವಿದ್ಯಾರ್ಥಿಗಳು ನೀಡಿದ ಶುಲ್ಕದ ವಿವರ

ಹಣ ಕೊಟ್ರು ಕೈಗೆ ಸಿಕ್ತಿಲ್ಲ ಅಂಕಪಟ್ಟಿ: ಇದೊಂದು ದೊಡ್ಡ ಗೋಲ್ಮಾಲ್!

ಶಿಕ್ಷಣ ಕ್ಷೇತ್ರದಲ್ಲಿ ಡಿಜಿಟಲೀಕರಣ ಇತ್ತೀಚೆಗೆ ಸಾಕಷ್ಟು ಸದ್ದು ಮಾಡುತ್ತಿದೆ. ಕೊರೊನಾ ಹಾಗೂ ಲಾಕ್ಡೌನ್ ವೇಳೆ ಬಹುತೇಕ ಶಿಕ್ಷಣ ಸಂಸ್ಥೆಗಳು ಡಿಜಿಟಲ್ ವ್ಯವಸ್ಥೆಗೆ ಮೊರೆ ಹೋಗಿದ್ದವು, ಆ ಸಾಲಿಗೆ ಅಂಕಪಟ್ಟಿ ಕೂಡ ಸೇರ್ಪಡೆಯಾಗಿತ್ತು. ಅಂಕಪಟ್ಟಿಯ ಡಿಜಿಟಲೀಕರಣ ಸಾಕಷ್ಟು ಗೊಂದಲಗಳನ್ನು ತಂದೊಡ್ಡಬಹುದು ಎಂಬ ಅನುಮಾನಗಳು ಆಗಲೇ ವ್ಯಕ್ತವಾಗಿದ್ದವು. ಈಗ ಆ ಅನುಮಾನ ನಿಜವಾಗಿದೆ. ಹಣ ಕೊಟ್ಟರು ವಿದ್ಯಾರ್ಥಿಗಳ ಕೈಗೆ ಅಂಕಪಟ್ಟಿ ಸಿಗುತ್ತಿಲ್ಲ.

ಗುರುರಾಜ ದೇಸಾಯಿ

ಮಾಡಲು UGC ಅವಕಾಶವನ್ನು ನೀಡಿದೆ. ಈಗಾಗಲೇ ರಾಣಿ ಚೆನಮ್ಮ ವಿಶ್ವವಿದ್ಯಾನಿಲಯ, ಮೈಸೂರು ವಿಶ್ವವಿದ್ಯಾನಿಲಯ ಇತರ ವಿವಿಯ ಹಲವು ಉಪಕುಲಪತಿಗಳು ಉನ್ನತ ಶಿಕ್ಷಣ ಇಲಾಖೆಗೆ ಪತ್ರ ಬರೆದು ವಿದ್ಯಾರ್ಥಿಗಳಿಗೆ ಮುದ್ರಿತ ಅಂಕಪಟ್ಟಿ, ಪದವಿ ಪ್ರಮಾಣ ಪತ್ರ, ನಕಲು ಪತ್ರ ನೀಡಬೇಕೆಂದು ಕೇಳಿಕೊಂಡಿದ್ದಾರೆ. ಆದರೆ ಇಲಾಖೆ ಇದನ್ನು ಕೇಳಿಯೂ ಕೇಳಿಸಿಕೊಳ್ಳದಂತಿದೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮತ್ತು ಹೈಕೋರ್ಟ್ ಆದೇಶ, UCGಯ ಸೂಚನೆ

ಹಾಗೂ 200ರೂ, 300 ರೂ ಅಂಕಪಟ್ಟಿ ಶುಲ್ಕ ನೀಡಿದರೂ ಈಗ ವಿದ್ಯಾರ್ಥಿಗಳ ಕೈಗೆ ಮಾರ್ಕ್ಸ್‌ಕಾರ್ಡ್ ಸಿಗುತ್ತಿಲ್ಲ, ಕಂಪ್ಯೂಟರ್‌ನಲ್ಲಿ ಸಾಫ್ಟ್ ಕಾಪಿ ಡೌನ್‌ಲೋಡ್ ಮಾಡಿಕೊಳ್ಳಿ ಎಂದು ಶಿಕ್ಷಣ ಇಲಾಖೆ ಈಗ ಕೈ ತೊಳೆದುಕೊಂಡಿದೆ. ರಾಜ್ಯದಲ್ಲಿ 15 ಲಕ್ಷ ವಿದ್ಯಾರ್ಥಿಗಳು ಪದವಿ ಅಧ್ಯಯನ ಮಾಡುತ್ತಿದ್ದಾರೆ. ಒಂದು ಸೆಮೆಸ್ಟರ್‌ಗೆ ಅಂದಾಜು 45 ಕೋಟಿ ರೂನಷ್ಟು ಹಣ ಸಂಗ್ರಹವಾಗುತ್ತಿದ್ದು. ಮೂರು ವರ್ಷದಲ್ಲಿ 300 ಕೋಟಿ ರೂ ನಷ್ಟ ಹಣ ವಿದ್ಯಾರ್ಥಿಗಳಿಂದ ಸಂಗ್ರಹವಾಗುತ್ತಿದೆ. ಆದರೂ ವಿದ್ಯಾರ್ಥಿಗಳ ಕೈಗೆ ಅಂಕಪಟ್ಟಿ ಸಿಗುತ್ತಿಲ್ಲ. ಸಾಫ್ಟ್‌ಕಾಪಿ ಪಡೆಯುವುದಕ್ಕಾಗಿ ನಾವು ಇಷ್ಟೊಂದು ಹಣ ಕಟ್ಟಬೇಕಾ? ಆ ಸಾಫ್ಟ್‌ಕಾಪಿಗೂ 20 ರೂ ಹಣ ನಾವೇ ಮತ್ತೆ ಕಟ್ಟಬೇಕು. ಹೀಗಿದ್ದಮೇಲೆ ನಮ್ಮಿಂದ ಅಂಕಪಟ್ಟಿಗಾಗಿ ಪಡೆದ ಹಣ ಎಲ್ಲಿ ಹೋಯಿತು? ಎಂಬುದು 15 ಲಕ್ಷಜನ ವಿದ್ಯಾರ್ಥಿಗಳ ಪ್ರಶ್ನೆಯಾಗಿದೆ.

ವಿದ್ಯಾರ್ಥಿಗಳಲ್ಲಿ ಈ ರೀತಿಯ ಪ್ರಶ್ನೆ ಮೂಡುವುದು ಸಹಜ. ಹಣ ಕೊಟ್ಟ ಮೇಲೆ ಅಂಕ ಪಟ್ಟಿ, ಕೈಗೆ ಬರಬೇಕು ಎಂಬ ವಿದ್ಯಾರ್ಥಿಗಳ ವಾದದಲ್ಲಿ ಅರ್ಥವಿದೆ. ಆದರೆ ವಿದ್ಯಾರ್ಥಿಗಳಿಗೆ ಇರುವ ಈ ಗೊಂದಲವನ್ನು, ಸಮಸ್ಯೆಯನ್ನು ಬಗೆ ಹರಿಸಲು ಯಾರೂ ಕೂಡಾ ಮುಂದಾಗದಿರುವುದು ಹಲವು ಅನುಮಾನಗಳನ್ನು ಹುಟ್ಟುಹಾಕಿದೆ. ಕೆಲ ವಿಶ್ವವಿದ್ಯಾಲಯಗಳ ಅಧಿಕಾರಿಗಳನ್ನು ಸಂಪರ್ಕಿಸಿದಾಗ ಮುದ್ರಿತ ಪ್ರತಿಯನ್ನು ನೀಡಬೇಡಿ ಎಂಬ ಸೂಚನೆ ಬಂದಿದೆ ಹಾಗಾಗಿಯೇ ನಿಲ್ಲಿಸಿದ್ದೇವೆ ಎಂಬ ಸಬೂಬು ಹಾಗೂ ಡಿಜಿಟಲ್ ಪ್ರತಿಯನ್ನು ಮಾತ್ರ NAD-Digilocker ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ ಹಾಗೂ ಇದು ಮಾನ್ಯವಾಗಿದೆ ಎಂದು ಸಮರ್ಥಿಸಿಕೊಳ್ಳುತ್ತಿದ್ದಾರೆ.

ಏನಿದು ಡಿಜಿ ಲಾಕರ್:

ಅಂಕಪಟ್ಟಿ ಕಳ್ಳತನವನ್ನು ನಿಯಂತ್ರಿಸುವುದಕ್ಕಾಗಿ ಅಂಕಪಟ್ಟಿಯನ್ನು ಬದ್ಧವಾಗಿಸುವ ಕಾರಣದಿಂದ ಡಿಜಿ ಲಾಕರ್ ವ್ಯವಸ್ಥೆ ಜಾರಿಗೆ ಬಂದಿದೆ. ಮನೆಯಲ್ಲಿ ಸಾಕಷ್ಟು ಚಿನ್ನ, ವಜ್ರ ಅಥವಾ ಆಭರಣಗಳಿದ್ದರೆ, ಕಳ್ಳತನವಾಗಬಹುದೆಂಬ ಭಯದಲ್ಲಿ ಬ್ಯಾಂಕ್ ಲಾಕರ್ ಗಳ ಮೊರೆ ಹೋಗುವುದು ಸಾಮಾನ್ಯ. ಅನೇಕ ಬ್ಯಾಂಕುಗಳು ಗ್ರಾಹಕರಿಗೆ ವಾರ್ಷಿಕ ಇಂತಿಷ್ಟು ಶುಲ್ಕ ಪಡೆದು ಲಾಕರ್ ಸೌಲಭ್ಯ ಒದಗಿಸುತ್ತವೆ. ಗ್ರಾಹಕರು ತಮ್ಮ ಅಮೂಲ್ಯ ವಸ್ತುಗಳನ್ನು ಅಲ್ಲಿ ಇರಿಸಲು ಸುರಕ್ಷತೆಯ ಭರವಸೆ ನೀಡುತ್ತಾರೆ. ಡಿಜಿ ಲಾಕರ್ ಯೋಜನೆಗೆ ಬ್ಯಾಂಕ್ ಲಾಕರ್ ವ್ಯವಸ್ಥೆಯೇ ಮೂಲ ಪ್ರೇರಣೆ. ಬ್ಯಾಂಕ್ ಲಾಕರ್‌ನಲ್ಲಿ ಭೌತಿಕ ವಸ್ತುಗಳನ್ನು ಸುರಕ್ಷಿತವಾಗಿ ಇಡಬಹುದು. ಡಿಜಿ ಲಾಕರ್‌ನಲ್ಲಿ ದಾಖಲೆಗಳನ್ನು ಡಿಜಿಟಲ್ ರೂಪದಲ್ಲಿ ಸುರಕ್ಷಿತವಾಗಿರಿಸಬಹುದು.

ನಾಗರಿಕರು ಕೇಂದ್ರ ಸರ್ಕಾರ ಒದಗಿಸಿದ ಸಾರ್ವಜನಿಕ ಕ್ಲೌಡ್‌ನಲ್ಲಿ ಲಭ್ಯವಿರುವ ಎಲ್ಲಾ ದಾಖಲೆಗಳು, ಪ್ರಮಾಣಪತ್ರಗಳನ್ನು ಇಟ್ಟುಕೊಳ್ಳಬಹುದು. ಡಿಜಿ ಲಾಕರ್ ಖಾತೆಗೆ ಸೈನ್ ಅಪ್ ಮಾಡುವ ಎಲ್ಲಾ ಭಾರತೀಯ ನಾಗರಿಕರು ಪ್ರತಿಯೊಬ್ಬರಿಗೆ ಮೀಸಲಾದ ಕ್ಲೌಡ್ ಸ್ಟೋರೇಜ್ ಜಾಗ ಪಡೆಯುತ್ತಾರೆ. ಅಲ್ಲಿಂದ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

ಆದರೆ ಕರ್ನಾಟಕದಲ್ಲಿ ಡಿಜಿ ಲಾಕರ್‌ಗೆ ಒಳಪಟ್ಟ ಕಾಲೇಜುಗಳ ಸಂಖ್ಯೆ ಎಷ್ಟು? ಎಂಬ ಮಾಹಿತಿಯನ್ನು ಬೆನ್ನುಹತ್ತಿದಾಗ ಸಿಕ್ಕ ಉತ್ತರ ನಿಜಕ್ಕೂ ಅಚ್ಚರಿ ಮೂಡಿಸುತ್ತದೆ. ಸೆಪ್ಟೆಂಬರ್ 23 ರ NAD-Digilocker ವರದಿಯ ಪ್ರಕಾರ NAD-Digilocker ಪೋರ್ಟಲ್‌ನಲ್ಲಿ ಕರ್ನಾಟಕದಲ್ಲಿ ಮಾತ್ರ ಪ್ರವೇಶಿಸಬಹುದಾದ ಒಟ್ಟು 904 ಕಾಲೇಜುಗಳಲ್ಲಿ 134 ಕಾಲೇಜುಗಳು ಮಾತ್ರ ತಮ್ಮನ್ನು ನೋಂದಾಯಿಸಿಕೊಂಡಿವೆ ಅದರಲ್ಲಿ 86 ಸಂಸ್ಥೆಗಳು ಮಾತ್ರ ಕೆಲವು ಅಥವಾ ಎಲ್ಲಾ ಡೇಟಾವನ್ನು ಅಪ್‌ಲೋಡ್ ಮಾಡಿವೆ ಮತ್ತು 770 ಸಂಸ್ಥೆಗಳು NAD–ಡಿಜಿಲಾಕರ್ ಪೋರ್ಟಲ್‌ನಲ್ಲಿ ನೋಂದಾಯಿಸಿಲ್ಲ ಎಂಬ ಮಾಹಿತಿ ಲಭ್ಯವಾಗಿದೆ. ಕರ್ನಾಟಕದಲ್ಲಿಯೇ 770 ಸಂಸ್ಥೆಗಳು NAD-Digilocker ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡಿಲ್ಲ ಎಂಬುದು ಯೋಜನೆಗಳ ಜಾರಿಗೆ ಸರಕಾರ ತನ್ನನ್ನು ತಾನು ತೊಡಗಿಸಿಕೊಂಡಿದೆ ಎಂಬುದನ್ನು ತೋರಿಸುತ್ತದೆ. ಮತ್ತು ಕರ್ನಾಟಕದಲ್ಲಿ ನೋಂದಾಯಿಸಲಾದ 86 ಸಂಸ್ಥೆಗಳಲ್ಲಿ ಸಿಬ್ಬಂದಿ ಹಾಗೂ ತರಬೇತಿ ಇತ್ಯಾದಿಗಳ ಕೊರತೆಯಿಂದ ಪ್ರಮಾಣಪತ್ರಗಳನ್ನು ಅಪ್‌ಲೋಡ್ ಮಾಡಿಲ್ಲ ಎಂಬ ಮಾಹಿತಿಯೂ ಲಭ್ಯವಾಗಿದೆ.

ಇಲ್ಲದರ ನಡುವೆ ಪರದಾಟ:

ಇತ್ತ ಮುದ್ರಿತ ಅಂಕಪಟ್ಟಿಯೂ ಇಲ್ಲ, ಅತ್ತ ಸಾಫ್ಟ್ ಕಾಪಿಯ ಅಂಕಪಟ್ಟಿಯ ಲಭ್ಯತೆಯೂ ಇಲ್ಲದೆ ವಿದ್ಯಾರ್ಥಿಗಳು ಪರದಾಡುತ್ತಿದ್ದಾರೆ. ಉಚ್ಚ ನ್ಯಾಯಾಲಯದ ಸ್ಪಷ್ಟ ನಿರ್ದೇಶನವಿದ್ದರೂ ಸಹ, ವಿದ್ಯಾರ್ಥಿಗಳಿಗೆ ಮುದ್ರಿತ ಅಂಕಪಟ್ಟಿ, ಪದವಿ ಪ್ರಮಾಣಪತ್ರ, ಪ್ರತಿಲೇಖನಗಳನ್ನು ಕೊಡಲು ಮತ್ತು NAD–ಡಿಜಿಲಾಕರ್‌ನಲ್ಲಿ ಅಪ್‌ಲೋಡ್ ಪ್ರಕಾರ ನಿರ್ಧಾರ ತೆಗೆದುಕೊಳ್ಳುವ ಬದಲು ಮತ್ತೆ ಮತ್ತೆ ಸಾಫ್ಟ್ ಕಾಪಿ ನೀಡಲು ಮುಂದಾಗುತ್ತಿದೆ. ಮುದ್ರಿತ ಪ್ರತಿಗಳನ್ನು ನೀಡಿದರೆ ಅವರ ಆದಾಯವು ಕುಸಿಯುತ್ತದೆ ಎಂಬ ಕಾರಣದಿಂದ ಪಾವತಿ ಗೇಟ್‌ವೇ ಪಾಲುದಾರ NSDL (ಖಾಸಗಿ ಪಾವತಿ ಗೇಟ್‌ವೇ ಪಾಲುದಾರ) ಲಾಭ ಪಡೆಯಲು ಡಿಜಿಟಲ್ ಮಾರ್ಕ್ಸ್ ಕಾರ್ಡ್/ಪ್ರಮಾಣಪತ್ರವನ್ನು ಮಾತ್ರ ಪ್ರಚಾರ ಮಾಡಲು ಉತ್ಸುಕತನ ತೋರುತ್ತಿರುವುದನ್ನು ನೋಡಿದರೆ ಹಗರಣದ ವಾಸನೆ ಖಂಡಿತಾ ಮೂಗಿಗೆ ಬಡಿಯುತ್ತಿದೆ.

ಮುದ್ರಿತ ಅಂಕಪಟ್ಟಿ ನೀಡಿ:

ವಿದ್ಯಾರ್ಥಿಗಳು ಹಣ ನೀಡಿದ ಮೇಲೆ ಕೈಗೆ ಮುದ್ರಿತ ಅಂಕಪಟ್ಟಿಯನ್ನು ನೀಡಬೇಕು ಎಂದು ಭಾರತ ವಿದ್ಯಾರ್ಥಿ ಫೆಡರೇಷನ್ ಆಗ್ರಹಿಸಿದೆ. ಅಂಕಪಟ್ಟಿ ಪಡೆಯುವುದು ವಿದ್ಯಾರ್ಥಿಗಳ ಮೂಲಭೂತ ಹಕ್ಕಾಗಿದೆ. ಹಣಪಾವತಿ ಮಾಡಿಸಿಕೊಂಡ ಅಂಕಪಟ್ಟಿ ನೀಡದಿರುವುದು ವಿದ್ಯಾರ್ಥಿಗಳಿಗೆ ಮಾಡುತ್ತಿರುವ ವಂಚನೆಯಾಗಿದೆ. ಉದ್ಯೋಗ, ಉನ್ನತ ಶಿಕ್ಷಣ ಇತ್ಯಾದಿಗಾಗಿ ಮೊಬೈಲ್ ಹಿಡುದು ಇದು ನನ್ನ ದಾಖಲೆ ಇದು ನನ್ನ ದಾಖಲೆ ಎಂದು ಡಿಜಿ ಲಾಕರ್ ನಲ್ಲಿರುವ ಅಂಕಪಟ್ಟಿಯನ್ನು ತೋರಿಸುತ್ತಾ ಕೂಡುವುದು ಸಮಂಜಸವಲ್ಲ. ಹಾಗೂ ಅಂಕಪಟ್ಟಿ ಶುಲ್ಕದ ಹೆಸರಿನಲ್ಲಿ ದೊಡ್ಡಮಟ್ಟದ ಭ್ರಷ್ಟಚಾರ ನಡೆದಿದ್ದು ಇದರ ಸಮಗ್ರ ತನಿಖೆಯನ್ನು ನಡೆಸಬೇಕಿದೆ. ಈ ಕುರಿತು ಉನ್ನತ ಶಿಕ್ಷಣ ಇಲಾಖೆಯ ಆಯುಕ್ತರಿಗೆ ದೂರು ಸಲ್ಲಿಸಲಾಗಿದೆ ಎಂದು ಎಸ್‌ಎಫ್‌ಐ ರಾಜ್ಯಕಾರ್ಯದರ್ಶಿ ವಾಸುದೇವರೆಡ್ಡಿ ತಿಳಿಸಿದ್ದಾರೆ.

ಅಂಕಪಟ್ಟಿಗಾಗಿ ಹಣ ನೀಡಿಯೂ ವಿದ್ಯಾರ್ಥಿಗಳ ಕೈಗೆ ಅಂಕಪಟ್ಟಿ ಸಿಗದಿರುವುದು ಶಿಕ್ಷಣದ ಕ್ರೂರ ವ್ಯವಸ್ಥೆಯನ್ನು ತೆರೆದಿಡುತ್ತಿದೆ. ಶಿಕ್ಷಣ ಮೂಲ ಆಶಯ, ವಿದ್ಯಾರ್ಥಿಗಳ ಮೂಲಭೂತಹಕ್ಕಿಗೆ ಕೊಡಲಿಪೆಟ್ಟನ್ನು ನೀಡುವ ಸರಕಾರ ತನ್ನ ನಡೆಯಿಂದ ಎಚ್ಚೆತ್ತುಕೊಂಡು ಶಿಕ್ಷಣ ವ್ಯವಸ್ಥೆ ಹಾಗೂ ವಿದ್ಯಾರ್ಥಿಗಳ ಹಿತ ಕಾಪಡಬೇಕಿದೆ. ಅಂದ ಹಾಗೇ??! ವಿದ್ಯಾರ್ಥಿಗಳಿಂದ ಸಂಗ್ರಹವಾದ ಹಣ ಎಲ್ಲಿ ಹೋಗುತ್ತಿದೆ? ಆಯುಕ್ತರ ಜೇಬು ಸೇರಿತಾ?! ಅಥವ ಉನ್ನತ ಶಿಕ್ಷಣ ಸಚಿವರ ಜೇಬು ಸೇರಿತಾ?!! ಉತ್ತರ ಅವರಿಬ್ಬರೇ ಕೊಡಬೇಕು?!!!

ಮಹಾ ಧರಣಿ ಹೋರಾಟ: ಸುಳ್ಳು ಕೇಸ್ ವಜಾಗೊಳಸಿದ ಕೋರ್ಟ್

ಶಿಕ್ಷಣ ಕ್ಷೇತ್ರಕ್ಕೆ ರಾಜ್ಯ ಸರ್ಕಾರ ಶೇ.30 ರಷ್ಟು ಹಣ ಮೀಸಲಿಡಬೇಕು, ಸರ್ಕಾರಿ ಶಾಲಾ–ಕಾಲೇಜು–ಹಾಸ್ಟೆಲ್ ಮತ್ತು ವಿಶ್ವವಿದ್ಯಾಲಯಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಿ ಬಲಪಡಿಸಲು ಒತ್ತಾಯಿಸಿ, ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಮಾಸಿಕ ಆಹಾರ ಭತ್ಯೆ 3500ರೂ. ಗೆ ಹೆಚ್ಚಿಸಬೇಕು ಹಾಗೂ ಒಟ್ಟಾರೆ ಶಿಕ್ಷಣ ಕ್ಷೇತ್ರದ ಉಳಿವಿಗಾಗಿ ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಎಸ್.ಎಫ್.ಐ 2015ರ ಜನವರಿ 28 ರಿಂದ ಅನಿರ್ದಿಷ್ಟಾವಧಿ ಮಹಾಧರಣಿಯನ್ನು ಹಮ್ಮಿಕೊಂಡಿತ್ತು.

ರಾಜ್ಯದ ಮೂಲೆ ಮೂಲೆಗಳಿಂದ ನೂರಾರು ವಿದ್ಯಾರ್ಥಿಗಳು, ಶಿಕ್ಷಣ ಪ್ರೇಮಿಗಳು ಭಾಗವಹಿಸಿದ್ದರು. ಸರ್ಕಾರ ನಮ್ಮ ಬೇಡಿಕೆಗೆ ಸ್ಪಂದಿಸದಿದ್ದರಿಂದ 30 ಜನವರಿ 2015 ರಂದು ಸಾವಿರಾರು ವಿದ್ಯಾರ್ಥಿಗಳೊಂದಿಗೆ ವಿಧಾನಸೌಧ ಮುತ್ತಿಗೆ ಹಾಕಲು ನಿರ್ಧರಿಸಿತ್ತು. ಅಂದು ಬೆಂಗಳೂರಿನ ಸಿಟಿ ರೈಲ್ವೆ ನಿಲ್ದಾಣದಿಂದ ಮಹಾರಾಣಿ ಕಾಲೇಜಿನ ಮುಂಭಾಗಕ್ಕೆ ವಿದ್ಯಾರ್ಥಿಗಳ ಮೆರವಣಿಗೆ ಬರುತ್ತಿದ್ದಂತೆ ನಮ್ಮ ಪ್ರತಿಭಟನೆಯನ್ನು ಹತ್ತಿಕ್ಕಲು ಲಾಠಿಚಾರ್ಜ್ ಮಾಡಿ, ನೂರಾರು ಜನ ವಿದ್ಯಾರ್ಥಿಗಳನ್ನು ಬಂಧಿಸಿದರು.

ಉಪ್ಪಾರ ಪೇಟೆ ಪೋಲೀಸರು ಕಲಂ – 109, 143, 147, 341, 188, ರೆ.ವಿ 149 ಐ.ಪಿ.ಸಿ. ಅಡಿಯಲ್ಲಿ ರಾಜ್ಯಾಧ್ಯಕ್ಷರಾಗಿದ್ದ ಅಂಬರೀಶ್.ವಿ, ರಾಜ್ಯ ಕಾರ್ಯದರ್ಶಿಯಾಗಿದ್ದ ಗುರುರಾಜ್ ದೇಸಾಯಿ, ರಾಜ್ಯ ಉಪಾಧ್ಯಕ್ಷರಾಗಿದ್ದ ಚಿಕ್ಕರಾಜು. ಎಸ್. ಬಸವರಾಜ ಪೂಜಾರ್ ರವರ ಮೇಲೆ ಸುಳ್ಳು ಪ್ರಕರಣವನ್ನು ದಾಖಲಿಸಿದ್ದರು. 6 ವರ್ಷಗಳ ಕಾಲ ಸುದೀರ್ಘವಾಗಿ ನಡೆದ ಈ ಪ್ರಕರಣದಲ್ಲಿ 43 ಜನ ಸಾಕ್ಷಿಗಳ ವಿಚಾರಣೆ ನಡೆದಿತ್ತು.



ಪ್ರಕರಣದ ಸತ್ಯಾಸತ್ಯತೆ ಯನ್ನು ಆಲಿಸಿದ ಘನ ನ್ಯಾಯಾಲಯವು 19 ನವೆಂಬರ್ 2022 ರಂದು ಎಸ್.ಎಫ್.ಐ. ಮುಖಂಡರ ಮೇಲಿದ್ದ ಸುಳ್ಳು ಪ್ರಕರಣವನ್ನು ವಜಾಗೊಳಿಸಿದೆ.

ನಮ್ಮ ಪರವಾಗಿ ನ್ಯಾಯಾಲಯದಲ್ಲಿ ವಾದ ಮಾಡಿದ ಅಖಿಲ ಭಾರತ ವಕೀಲರ ಸಂಘದ ಮುಖಂಡರಾದ, ಸಂಗಾತಿ ವೆಂಕಟರಮಣ ಬಾಬುರವರಿಗೆ ಹಾಗೂ ವಕೀಲರಾದ ದೇವರಾಜ್ ಸರ್, ಹಾಗೂ ಎರಡು ಬಾರಿ ಸಹಾಯ ಮಾಡಿದ ವೇಗಾನಂದ್ ರವರಿಗೆ, ಬೇಲ್ ಗೆ ಸಹಾಯ ಮಾಡಿದ ನಂಜೇಗೌಡಹಾಗೂಟಿ.ಸುರೇಂದ್ರರಾವ್ ಹಾಗೂ ವಿಮಾ ನೌಕರರ ಸಂಗಾತಿಗಳಿಗೆ, ಈ ಹೋರಾಟದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳಿಗೆ, ಈ ಹೋರಾಟದ ಮೂಲಕ ಕೆಲ ಬೇಡಿಕೆಗಳನ್ನು ಈಡೇರಿಸುವಂತೆ ಸರಕಾರದ ಮೇಲೆ ಒತ್ತಡ ಹೇರಿದ್ದ ಜನಪರ ಸಂಘಟನೆಗಳಿಗೆ ಧನ್ಯವಾದಗಳನ್ನು ಸಲ್ಲಿಸಿದ್ದಾರೆ.

ದಲಿತರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ ವಿರೋಧಿಸಿ: ಫೆಬ್ರವರಿ 28, 2023

ಐಕ್ಯ ಹೋರಾಟಕ್ಕೆ ಕರೆ

ಸಂವಿಧಾನ ಬದ್ಧ ದಲಿತ ಹಕ್ಕುಗಳನ್ನು ರಕ್ಷಿಸಲು ಹಾಗೂ ಅವರ ಮೇಲೆ ಹೆಚ್ಚುತ್ತಿರುವ ಜಾತಿ ತಾರತಮ್ಯ ಮತ್ತು ಅಸ್ಪೃಶ್ಯತೆ ದೌರ್ಜನ್ಯಗಳ ವಿರುದ್ದ ಎಲ್ಲರೂ ಒಗ್ಗೂಡಿ ಜಂಟೀ ಹೋರಾಟ ನಡೆಸಲು ನವೆಂಬರ್ 5 ರಂದು, ನವ ದೆಹಲಿಯ, ಹೆಚ್.ಕೆ. ಸುರ್ಜಿತ್ ಭವನದಲ್ಲಿ 5 ಪ್ರಮುಖ ಸಂಘಟನೆಗಳ ನೇತೃತ್ವದಲ್ಲಿ ನಡೆದ ಜಂಟೀ ಸಮಾವೇಶವು ಒಕ್ಕೊರಲಿನಿಂದ ಕರೆ ನೀಡಿದೆ.

ಈ ಸಮಾವೇಶದಲ್ಲಿ, ದಲಿತ್ ಶೋಷಣ್ ಮುಕ್ತಿ ಮಂಚ್ (DSMM), ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘ (AIAWU), ಅಖಿಲ ಭಾರತ ದಲಿತ ಹಕ್ಕುಗಳ ಆಂದೋಲನ (AIDRM), ಭಾರತೀಯ ಕಿಸಾನ್ ಮಜ್ದೂರ್ ಯೂನಿಯನ್ (BKMU) ಮತ್ತು ಅಖಿಲ ಭಾರತ ಕೃಷಿ ಮತ್ತು ಗ್ರಾಮೀಣ ಕಾರ್ಮಿಕ ಸಂಘ (AIARLA) ಜಂಟಿಯಾಗಿ ಸಮಾವೇಶವನ್ನು ಆಯೋಜಿಸಿದ್ದವು. ಈ ಸಮಾವೇಶದಲ್ಲಿ ಬೇಡಿಕೆಗಳ ಪಟ್ಟಿಯನ್ನು ಅಂಗೀಕರಿಸಲಾಯಿತು. ಹಾಗೆಯೇ ದಲಿತ ಹಕ್ಕುಗಳಿಗಾಗಿ ಹೋರಾಡಲು ಜಂಟಿ ರಾಷ್ಟ್ರೀಯ ವೇದಿಕೆಯ ರಚನೆಗೆ ಕರೆ ನೀಡಲಾಯಿತು. ಫೆಬ್ರವರಿ 28, 2023 ರಂದು ಜಂಟಿಯಾಗಿ ಅಖಿಲ ಭಾರತ ಪ್ರತಿಭಟನೆಯನ್ನು ಆಯೋಜಿಸಲು ನಿರ್ಧರಿಸಲಾಯಿತು.

ವರದಿ: ನಾಗರಾಜ ನಂಜುಂಡಯ್ಯ

ಸಫಾಯಿ ಕರ್ಮಚಾರಿ ಆಂದೋಲನದ ರಾಷ್ಟ್ರೀಯ ಸಂಚಾಲಕ ಬೆಜವಾಡ ವಿಲ್ಸನ್, ಮಾಜಿ ಸಂಸದ ಮತ್ತು ಪಾಶ್ಮಾಂಡ ಮುಸ್ಲಿಂ ಮಹಾಜ್‌ನ ನಾಯಕ ಅಲಿ ಅನ್ವರ್, ದೆಹಲಿ ವಿಶ್ವವಿದ್ಯಾಲಯದ ಪ್ರೊ. ರತನ್ ಲಾಲ್ ಸೇರಿದಂತೆ ದಲಿತ ಮತ್ತು ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಗಾಗಿ ಶ್ರಮಿಸುತ್ತಿರುವ ವಿವಿಧ ಮುಖಂಡರು ಮತ್ತು ಕಾರ್ಯಕರ್ತರು ಈ ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಭಾಗವಹಿಸಿದ್ದ ಆಯಾ ಸಂಘಟನೆಗಳ ನಾಯಕರು, ಸಮಾವೇಶದಲ್ಲಿ ಕೈಗೊಂಡ ನಿರ್ಣಯಗಳನ್ನು ಒಕ್ಕೊರಲಿನಿಂದ ಬೆಂಬಲಿಸಿದರು.

ಸಮಾವೇಶವು ದಲಿತರ ಮೇಲೆ ಹೆಚ್ಚಿರುವ ದೌರ್ಜನ್ಯಗಳ ಬಗ್ಗೆ ವ್ಯಾಪಕವಾಗಿ ಚರ್ಚಿಸಿತು ಮತ್ತು ಬೇಡಿಕೆಗಳ ಸನ್ನದ್ಧು ಹಾಗೂ ಜಂಟೀ ಹೋರಾಟ ನಡೆಸಲು ಅಂಗೀಕರಿಸಿತು.



ಡಿಎಸ್‌ಎಂಎಂ ಉಪಾಧ್ಯಕ್ಷೆ ಮತ್ತು ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯೆ ಸುಭಾಷಿಣಿ ಅಲಿ ಅವರು ಮಂಡಿಸಿದ ನಿರ್ಣಯವು ಭಾರತದಲ್ಲಿ ದಲಿತರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳನ್ನು ವಿವರಿಸಿದೆ. 2014 ರಲ್ಲಿ ಭಾರತೀಯ ಜನತಾ ಪಕ್ಷ (ಬಿಜೆಪಿ) ನೇತೃತ್ವದ ಪ್ರಸ್ತುತ ಕೇಂದ್ರ ಸರ್ಕಾರ ಅಧಿಕಾರಕ್ಕೆ ಬಂದ ನಂತರ ದಲಿತರ ಮೇಲಿನ ದೌರ್ಜನ್ಯಗಳು ಹಲವು ಪಟ್ಟು ಹೆಚ್ಚಾಗಿದೆ ಎಂದು ನಿರ್ಣಯವು ಒತ್ತಿಹೇಳಿದೆ.

ಬಿಜೆಪಿ ನೇತೃತ್ವದ ಪ್ರಧಾನಿ ಮೋದಿ ಸರ್ಕಾರ ಮನುವಾದದ ಸೈದ್ಧಾಂತಿಕ ಕಾರ್ಯಕ್ರಮದ ಮೇಲೆ ಕೆಲಸ ಮಾಡುತ್ತಿದೆ. ಅದರ ಮಾತೃ ಸಂಸ್ಥೆ ಆರ್‌ಎಸ್‌ಎಸ್ ಇದನ್ನು ಶಿಫಾರಸು ಮಾಡಿದೆ. ದಲಿತರ ಸಾಂವಿಧಾನಿಕ ಹಕ್ಕುಗಳ ರಕ್ಷಣೆ ಮತ್ತು ಅವರಿಗೆ ಸಾಮಾಜಿಕ ಭದ್ರತೆ ಮತ್ತು ಕಲ್ಯಾಣವನ್ನು ಹೆಚ್ಚಿಸುವ ಬೇಡಿಕೆಗಳ ಜಾರಿಗಾಗಿ ಐಕ್ಯ ಹೋರಾಟವನ್ನು ನಿರ್ಣಯವು ಪ್ರಸ್ತಾಪಿಸಿದೆ.

ಈ ರಾಷ್ಟೀಯ ಸಮಾವೇಶದ ಅಧ್ಯಕ್ಷ ಮಂಡಳಿಯಲ್ಲಿ, ರಾಮಚಂದ್ರ ಡೋಮ್, ಪ್ರಧಾನ ಕಾರ್ಯದರ್ಶಿ ಡಿಎಸ್‌ಎಂಎಂ ಮತ್ತು ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯರು, ಡಿಎಸ್‌ಎಮ್‌ಎಮ್ ನ ರಾಷ್ಟ್ರೀಯ ಅಧ್ಯಕ್ಷರು ಹಾಗೂ ಕೇರಳದ ಎಡರಂಗ ಸರ್ಕಾರದ ಸಚಿವ ಕೆ ರಾಧಾಕೃಷ್ಣನ್, ಎಐಎಡಬ್ಲ್ಯುಯು ಕಾರ್ಯದರ್ಶಿ ಬಿ. ವೆಂಕಟ್ ಮತ್ತು ಎಐಎಆರ್‌ಎಲ್ ಶ್ರೀ ರಾಮ್ ಚೌಧರಿ ಅವರ ಜಂಟಿ ವೇದಿಕೆಯ ಅಡಿಯಲ್ಲಿ ಸಮಾವೇಶ ಪ್ರಾರಂಭವಾಯಿತು.

ಆರಂಭದಲ್ಲಿ ಇತ್ತೀಚೆಗೆ ನಡೆದ ದಲಿತರ ಹತ್ಯೆಗೆ ಸಂತಾಪ ಸೂಚಿಸಿ ಸಭೆ ಒಂದು ನಿಮಿಷ ಮೌನ ಆಚರಿಸಿತು.

ಸಮಾವೇಶದ ಉದ್ಘಾಟನೆ:

ಮಾತನಾಡಿದ ಬೇಜವಾಡ ವಿಲ್ಸನ್ ರವರು, ಹಸ್ತಚಾಲಿತ ಕಸದ (ಮ್ಯಾನ್ಯೂಲ್ ಸ್ಕ್ಯಾವೆಂಜರ್) ಕೆಲಸ ಮಾಡುವುದು, ಇದು ಕಾನೂನು ಬಾಹಿರವಾಗಿದ್ದರೂ ಮತ್ತು ದೇಶಾದ್ಯಂತ ಇದರ ವಿರುದ್ಧ ಮಾಡಿದ ಹಲವಾರು ಹೋರಾಟಗಳ ಹೊರೆತಾಗಿಯೂ, ಹಾಗೂ ಅಸ್ಪೃಶ್ಯತೆ, ಮತ್ತು ಇತರೆ ಬಗೆಯ ದೌರ್ಜನ್ಯಗಳಿಂದ ಕೊಲ್ಲಲ್ಪಟ್ಟವರ ಹೊರತಾಗಿಯೂ ಅನೇಕ ದಲಿತರು ಈಗಲೂ ಮ್ಯಾನ್ಯೂಲ್ ಸ್ಕ್ಯಾವೆಂಜರ್ ಕೆಲಸವನ್ನು ಬಲವಂತವಾಗಿ ಮಾಡುತ್ತಿರುವುದು ಅಮಾನವೀಯ ಎಂದರು.

ಸಂವಿಧಾನದಲ್ಲಿ ನೀಡಿರುವ ಹಕ್ಕುಗಳನ್ನು ಅರಿತು ಕೊಳ್ಳಬೇಕು. ಪ್ರಸ್ತುತ ದೇಶವು ಸಂವಿಧಾನದ ಪ್ರಕಾರ ಆಡಳಿತ ನಡೆಸುತ್ತಿಲ್ಲವೆಂದು ವಿಷಾದ ವ್ಯಕ್ತಪಡಿಸಿದರು. ಈ ಸರ್ಕಾರ ಬ್ರಾಹ್ಮಣ್ಯಶಾಹಿ ಆಶಯಗಳಂತೆ ಆಡಳಿತ ನಡೆಸುತ್ತಿರುವುದು ಗೋಚರಿಸುತ್ತಿದೆ ಎಂದರು. ಸಮಾಜದಲ್ಲಿ ದಲಿತರ ಮತ್ತು ಶೋಷಿತ ವರ್ಗಗಳ ಹಕ್ಕುಗಳಿಗಾಗಿ ಶ್ರಮಿಸುತ್ತಿರುವ ಸಂಘಟನೆಗಳು ತಮ್ಮಲ್ಲಿರುವ ಭಿನ್ನಾಭಿಪ್ರಾಯಗಳನ್ನು ಮರೆತು ಸಂವಿಧಾನವನ್ನು ಉಳಿಸಲು ಮತ್ತು ಶೋಷಿತ ಜಾತಿಗಳ ಕಲ್ಯಾಣಕ್ಕೆ ಕೈಜೋಡಿಸಬೇಕೆಂದು ಕರೆ ನೀಡಿದರು.

ನಿರ್ಣಯ ಮಂಡನೆ

ಕ್ರಿಯಾ ಯೋಜನೆಯನ್ನು ಒಳಗೊಂಡ ನಿರ್ಣಯವನ್ನು ಸುಭಾಷಿಣಿ ಅಲಿ, ಮಂಡಿಸಿದರು. ಹೆಚ್ಚುತ್ತಿರುವ ದೌರ್ಜನ್ಯಗಳ ಬಗ್ಗೆ ಚರ್ಚಿಸಲು ಸ್ಪೀಕರ್‌ಗಳನ್ನು ಆಹ್ವಾನಿಸಿದರು ಮತ್ತು ವಿಶೇಷವಾಗಿ ಬಿಜೆಪಿ ಆಡಳಿತದಲ್ಲಿರುವ ರಾಜ್ಯಗಳಲ್ಲಿ ದಲಿತರ ಮೇಲಿನ ದೌರ್ಜನ್ಯಗಳ ಸಂಖ್ಯೆ ಹೆಚ್ಚುತ್ತಿದೆ ಎಂದು ಒತ್ತಿ ಹೇಳಿದರು. ಅವರು ಗುಜರಾತ್‌ನ ಉನಾ ಮತ್ತು ಉತ್ತರ ಪ್ರದೇಶದ ಹತ್ರಾಸ್‌ನ ಉದಾಹರಣೆಗಳನ್ನು ನೀಡುತ್ತಾ, ದಾಖಲಿಸಿರುವ ದೌರ್ಜನ್ಯಕ್ಕಿಂತ ನಿಜವಾದ ದೌರ್ಜನ್ಯಗಳ ಸಂಖ್ಯೆ ತುಂಬಾ ಹೆಚ್ಚಾಗಿದೆ ಎಂದರು. ದಲಿತರ ವಿರುದ್ಧ ಇಂತಹ ಕೃತ್ಯಗಳನ್ನು ಎಸೆಗುವ ಕ್ರಿಮಿನಲ್‌ಗಳಿಗೆ ಬಿಜೆಪಿ ನೇತೃತ್ವದ ಸರ್ಕಾರಗಳು ಸಕ್ರಿಯ ರಕ್ಷಣೆ ನೀಡುವುದರಿಂದ ದೌರ್ಜನ್ಯಗಳು ಹೆಚ್ಚುತ್ತಿವೆ ಎಂದು ಉನಾ ಮತ್ತು ಹತ್ರಾಸ್ ಪ್ರಕರಣಗಳನ್ನು ಅವರು ಎತ್ತಿ ತೋರಿಸಿದರು. ದೇಶದಲ್ಲಿ ಆಡಳಿತಾರೂಢ ಪಕ್ಷಗಳು ಮತ್ತು ಊಳಿಗಮಾನ್ಯ ಮತ್ತು ಬ್ರಾಹ್ಮಣಶಾಹಿ ಅಂಶಗಳ ನಡುವಿನ ಈ ಸಂಬಂಧದ ವಿರುದ್ಧ ಸುದೀರ್ಘವಾದ ಐಕ್ಯ ಹೋರಾಟದ ಅಗತ್ಯವಿದೆ ಎಂದು ಅವರು ಪ್ರತಿಪಾದಿಸಿದರು.

ನಿರ್ಣಯದ ಅಂಶಗಳನ್ನು ಎತ್ತಿ ಹಿಡಿದ ಚರ್ಚೆ

ದಲಿತ ಅಧ್ಯಯನ ಕೇಂದ್ರದ ಪ್ರೊ.ಲಕ್ಷ್ಮಯ್ಯ, ಪ್ರೊ.ರತನ್ ಲಾಲ್, ಅಲ್ ಅನ್ವರ್ ಭಾಗವತ್ ಮಾನ್ (ಬಿಕೆಎಂಯು ಪಂಜಾಬ್), ಮನೋಜ್ ಮಂಜಿಲ್ (ಬಿಹಾರದ ಶಾಸಕ) ಮತ್ತು ಇತರರು ನಿರ್ಣಯದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ, ನಿರ್ಣಯಕ್ಕೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದರು ಮತ್ತು ಅದಕ್ಕೆ ಕೆಲವು ಸಲಹೆಗಳು ಮತ್ತು ಸೇರ್ಪಡೆಗಳನ್ನು ಮಂಡಿಸಿದರು.

ಎಡಪಂಥೀಯರು ಎಲ್ಲೆಲ್ಲಿ ಪ್ರಬಲವಾಗಿದ್ದಾರೋ ಅಥವಾ ಅಧಿಕಾರದಲ್ಲಿದ್ದರೋ, ಅಂತಹ ಕಡೆ ದಲಿತರ ಮೇಲಿನ ದೌರ್ಜನ್ಯಗಳು ಗಣನೀಯವಾಗಿ ಕಡಿಮೆಯಾಗಿವೆ ಎಂದು ಪ್ರೊ.ಲಕ್ಷ್ಮಯ್ಯ ಒತ್ತಿ ಹೇಳಿದರು. ಆಂಧ್ರಪ್ರದೇಶದ ಕಮ್ಯೂನಿಸ್ಟರು ತಮ್ಮ ಚಳುವಳಿಗಳ ಮೂಲಕ ದಲಿತ ಕಾರ್ಮಿಕರ ಹಿತಾಸಕ್ತಿಗಳನ್ನು ಉಳಿಸಲು ಸಾಧ್ಯವಾಗಿದೆ ಎಂದು ಅವರು ಉದಾಹರಣೆಗಳ ಸಹಿತ ವಿವರಣೆ ನೀಡಿದರು.

AIAWU ನಿಂದ ವಿಕ್ರಮ್ ಸಿಂಗ್ ಅವರು ಮಾತನಾಡಿ, ಭಾರತದಲ್ಲಿ ತುಳಿತಕ್ಕೊಳಗಾದವರಲ್ಲಿ ಹೆಚ್ಚಿನವರು ದಲಿತರು, ಇವರಿಗೆ ಶಿಕ್ಷಣದ ಹೆಚ್ಚಿನ ಅಗತ್ಯತೆಯ ಬಗ್ಗೆ ಸಿಂಗ್ ಮಾತನಾಡಿದರು, ಅವರು ತಮಗಾಗುತ್ತಿರುವ ಶೋಷಣೆಯ ಸ್ವರೂಪ ಮತ್ತು ವ್ಯಾಪ್ತಿಯನ್ನು ಅರ್ಥಮಾಡಿಕೊಳ್ಳಲು ವಿಫಲರಾಗುತ್ತಾರೆ. ಏಕೆಂದರೆ ಅದು ಸಾಮಾನ್ಯವಾಗಿ ಧರ್ಮ ಅಥವಾ ಜಾತಿ ವ್ಯವಸ್ಥೆ, ಬ್ರಾಹ್ಮಣ ಧರ್ಮದ ಸಾಧನವಾಗಿದೆ.

ಫೆಬ್ರವರಿ 28 ರಂದು– ರಾಷ್ಟವ್ಯಾಪಿ ಪ್ರತಿಭಟನೆಗೆ ಕರೆ ನೀಡಲಾಯಿತು

ಮುಂಬರುವ ತಿಂಗಳುಗಳಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ (SKM) ಮಾದರಿಯಲ್ಲಿ ದಲಿತ ಹಕ್ಕುಗಳಿಗಾಗಿ ಜಂಟಿ ರಾಷ್ಟ್ರೀಯ ವೇದಿಕೆಯನ್ನು ರಚಿಸಲು ಪ್ರಯತ್ನಿಸಲಾಗುವುದು ಎಂದು ವೆಂಕಟ್ (AIAWU) ಪ್ರಸ್ತಾಪಿಸಿದರು. ಜಂಟಿ ರಾಷ್ಟ್ರೀಯ ವೇದಿಕೆಯು ಈ ಸಮಾವೇಶದಲ್ಲಿ ಈಗಾಗಲೇ ಇರುವ ಗುಂಪುಗಳನ್ನು ಒಳಗೊಂಡಿರುತ್ತದೆ. ಆದರೆ ಇವುಗಳಿಗೆ ಮಾತ್ರ ಸೀಮಿತವಾಗಿರುವುದಿಲ್ಲ ಇದರೊಂದಿಗೆ, ಪ್ರಗತಿ ಪರ ವ್ಯಕ್ತಿಗಳು, ಚಿಂತಕರು ಮತ್ತು ಒಕ್ಕೂಟಗಳನ್ನು ಆ ಜಂಟೀ ವೇದಿಕೆ ಒಳಗೊಂಡಿರುತ್ತದೆ. ಮುಂಬರುವ ಜನವರಿಯಲ್ಲಿ ಇದೇ ಮಾದರಿಯಲ್ಲಿ ರಾಜ್ಯ ಮಟ್ಟದಲ್ಲಿ ಸಮಾವೇಶಗಳನ್ನು ಆಯೋಜಿಸಲು ನಿರ್ಣಯಿಸಲಾಗಿದೆ.

ದಲಿತರ ಮೇಲಿನ ದಬ್ಬಾಳಿಕೆ ಮತ್ತು ಶೋಷಣೆಯ ವಿರುದ್ಧ ಹೋರಾಟದಲ್ಲಿ ಕೈಜೋಡಿಸುವಂತೆ ಎಲ್ಲಾ ಪ್ರಜಾಸತ್ತಾತ್ಮಕ ಪ್ರಗತಿಪರ ಶಕ್ತಿಗಳಿಗೆ ಸಮಾವೇಶವು ಮನವಿ ಮಾಡಿಕೊಂಡಿತು.. ಈ ಸಮಾವೇಶದಲ್ಲಿ ಭಾಗವಹಿಸುವ ಎಲ್ಲಾ ಸಂಘಟನೆಗಳು, ಗುಂಪುಗಳು ಮತ್ತು ವ್ಯಕ್ತಿಗಳು ಮತ್ತು ದಲಿತರು ಮತ್ತು ಸಮಾಜದ ಇತರ ತುಳಿತಕ್ಕೊಳಗಾದ ವರ್ಗಗಳ ಸಬಲೀಕರಣಕ್ಕಾಗಿ ಶ್ರಮಿಸುತ್ತಿರುವ ಎಲ್ಲರೂ ಒಗ್ಗೂಡಿ ಕೇಂದ್ರ ಸರ್ಕಾರದ ಮನುವಾದಿ, ನವ–ಉದಾರವಾದಿ ಮತ್ತು ಕೋಮುವಾದಿ ನೀತಿಗಳ ವಿರುದ್ಧ ಹೋರಾಟಗಳನ್ನು ನಡೆಸಬೇಕು.



ಬೇಡಿಕೆಗಳ ಸನ್ನದನ್ನು ಸಮಾವೇಶ ಕೈಗೊಂಡಿತು. ಪ್ರಮುಖವಾಗಿ

1) ಎಸ್.ಸಿ, ಎಸ್.ಟಿ. ದೌರ್ಜನ್ಯ ತಡೆ ಕಾಯಿದೆಯನ್ನು ಬಲಪಡಿಸಿ;

➚

ಕೇರಳ ಪರ್ಯಾಯ

ಕೇರಳದ ಸಚಿವರಾದ, ಕೆ. ರಾಧಾಕೃಷ್ಣನ್ ಅವರು ಮಾತನಾಡುತ್ತಾ, ದಲಿತರು ಮತ್ತು ಆದಿವಾಸಿಗಳ ಕಲ್ಯಾಣಕ್ಕಾಗಿ ಕೇರಳದಲ್ಲಿ ಎಡ ರಂಗದ ಸರ್ಕಾರ ಮಾಡಿದ ಸಕಾರಾತ್ಮಕ ಕೆಲಸಗಳ ಬಗ್ಗೆ ತಿಳಿಸಿದರು. ಇತ್ತೀಚಿನ ವರ್ಷಗಳಲ್ಲಿ ದಲಿತರು ಮತ್ತು ಆದಿವಾಸಿಗಳ ಕಲ್ಯಾಣಕ್ಕಾಗಿ ಕೇಂದ್ರ ಸರ್ಕಾರವು ಹಣ ಹಂಚಿಕೆಯನ್ನು ಕಡಿಮೆ ಮಾಡಲು ಪ್ರಯತ್ನಿಸಿದರೆ, ಕೇರಳ ಸರ್ಕಾರವು ಕೇಂದ್ರದ ಅಸಹಕಾರದ ಹೊರತಾಗಿಯೂ ಆ ವೆಚ್ಚವನ್ನು ಕೇರಳದಲ್ಲಿ ಹೆಚ್ಚಿಸಲಾಗಿದೆ ಎಂದು ಅವರು ಒತ್ತಿ ಹೇಳಿದರು.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಕೇರಳದಲ್ಲಿ ಎಡ ಸರ್ಕಾರ ಮಾಡಿದ ಉತ್ತಮ ಕೆಲಸಗಳನ್ನು ಗುರುತಿಸಲು ವಿಫಲವಾಗಿದೆ ಮಾತ್ರವಲ್ಲದೆ, ಅಸಂತೋಷ ವ್ಯಕ್ತಪಡಿಸುತ್ತಿದೆ. ರಾಜ್ಯಪಾಲರ ಹುದ್ದೆಯಂತಹ ಸಾಂವಿಧಾನಿಕ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಂಡು ಅದನ್ನು ಅಸ್ಥಿರಗೊಳಿಸಲು ಸಾಧ್ಯವಿರುವ ಎಲ್ಲ ರೀತಿಯಲ್ಲಿ ಪ್ರಯತ್ನಿಸುತ್ತಿದೆ ಎಂದು ರಾಧಾಕೃಷ್ಣನ್ ಪ್ರಸ್ತಾಪಿಸಿದರು. ಇಂತಹ ಎಲ್ಲಾ ಸವಾಲುಗಳ ಹೊರತಾಗಿಯೂ, ಕೇರಳದ ಎಲ್‌ಡಿಎಫ್ ಸರ್ಕಾರವು ತನ್ನ ಬಜೆಟ್ ನ ಸುಮಾರು ಪ್ರತಿಶತ ಶೇ.12.5 ರಷ್ಟು ಹಣವನ್ನು ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡಾ 10 ರಷ್ಟಿರುವ ದಲಿತರು ಮತ್ತು ಆದಿವಾಸಿಗಳ ಕಲ್ಯಾಣಕ್ಕಾಗಿ ಖರ್ಚು ಮಾಡುತ್ತಿದೆ. ದಲಿತರು ಮತ್ತು ಆದಿವಾಸಿಗಳಿಗೆ ಪಕ್ಕಾ–ಚೊಕ್ಕ ಮನೆಗಳು, ದೂರದ ಪ್ರದೇಶಗಳಲ್ಲಿಯೂ ಉತ್ತಮ ಸರ್ಕಾರಿ ಶಾಲೆಗಳು ಮತ್ತು ಸರ್ಕಾರ ಕೈಗೊಂಡ ಇತರ ಕ್ರಮಗಳ ಉದಾಹರಣೆಗಳನ್ನು ರಾಧಕೃಷ್ಣನ್ ರವರು ನೀಡಿದರು. ಜನರ ಕಲ್ಯಾಣ ಮತ್ತು ಅಭಿವೃದ್ಧಿಗಾಗಿ ಕೆಲಸ ಮಾಡುವ ವಿಷಯಕ್ಕೆ ಬಂದಾಗ, ದೇಶದಲ್ಲಿ ಕೇರಳ ಸರ್ಕಾರ ಮಾತ್ರ ಇದಕ್ಕೆ ಹೊರತಾಗಿದೆ ಎಂದು ಅವರು ಒತ್ತಿ ಹೇಳಿದರು.



ಜನತೆಗೆ ರಾಜಕೀಯ ಪಕ್ಷಗಳು ಕೊಡುವ ಆಶ್ವಾಸನೆಯಲ್ಲಿ ಆಯೋಗದ ಈ ಹಸ್ತಕ್ಷೇಪವು ರಾಜಕೀಯ ಪಕ್ಷವೊಂದರ ನೀತಿಯನ್ನು ನಿಯಂತ್ರಿಸುವ ಸ್ಪಷ್ಟ ಪ್ರಯತ್ನವಾಗಿದೆ. ಕೆಲವೇ ತಿಂಗಳ ಹಿಂದೆ ತಳೆದಿದ್ದ ನಿಲುವಿಗೆ ಪೂರ್ಣ ವಿರುದ್ಧ ಧೋರಣೆ ತಾಳುವ ಮೂಲಕ ಚುನಾವಣೆ ಆಯೋಗ, ಪ್ರಧಾನ ಮಂತ್ರಿಯ ಆದೇಶಗಳನ್ನು ಪಾಲಿಸುವ ಸಂಸ್ಥೆ ಎಂಬ ಆರೋಪಕ್ಕೆ ತನ್ನನ್ನು ತಾನು ಒಡ್ಡಿಕೊಂಡಿದೆ. 2000 ರೂಪಾಯಿಗಿಂತ ಕಡಿಮೆ ಮೊತ್ತದ ದೇಣಿಗೆಯ ಅನಾಮಿಕ ಮೂಲದ ಬಗ್ಗೆ ಅತೀವ ಆಸಕ್ತಿ ತಳೆದಿರುವ ಆಯೋಗ, ಚುನಾವಣಾ ಬಾಂಡ್‌ನಿಂದ ಅನಾಮಿಕ ದೇಣಿಗೆಗಳಿಂದ ಬರುವ ಕೋಟ್ಯಂತರ ರೂಪಾಯಿಗಳ ಬಗ್ಗೆ ಜಾಣ ಕುರುಡು ನಿಲುವು ತಳೆದಿದೆ.

ಪ್ರಕಾಶ್ ಕಾರತ್

ಆಗಬೇಕಿದೆ ಚುನಾವಣಾ ಆಯೋಗದ್ದೇ ಸುಧಾರಣೆ

ಭಾರತ ಚುನಾವಣೆ ಆಯೋಗ (ಇಸಿಐ) ಇತ್ತೀಚೆಗೆ ಕೈಗೊಂಡ ಕೆಲವು ನಿರ್ಧಾರಗಳು ಮತ್ತು ಕ್ರಮಗಳು ಇದೊಂದು ನಿಷ್ಪಕ್ಷಪಾತ ಸಂಸ್ಥೆ ಹಾಗೂ ಭಾರತೀಯ ಸಂವಿಧಾನ ಕೊಡಮಾಡಿರುವ ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ನಡೆಸುವ ಪಾತ್ರ ವಹಿಸುವ ಸಂಸ್ಥೆಯೆಂಬ ಗೌರವಕ್ಕೆ ತಕ್ಕುದಾಗಿಲ್ಲ. ಕಳೆದ ಕೆಲವು ವರ್ಷಗಳಲ್ಲಿ, ಅದರಲ್ಲೂ ಮೋದಿ ಸರಕಾರ ಎರಡನೇ ಬಾರಿಗೆ ಅಧಿಕಾರಕ್ಕೆ ಬಂದ ನಂತರ, ಆಯೋಗವು ಹೆಚ್ಚೆಚ್ಚಾಗಿ ಸರಕಾರದ ಇಷ್ಟಾನಿಷ್ಟಗಳಿಗೆ ಅನುಗುಣವಾಗಿ ವರ್ತಿಸುತ್ತಿದೆ ಹಾಗೂ ಈ ಹಿಂದೆ ಅನುಸರಿಸುತ್ತಿದ್ದ ಸ್ವತಂತ್ರ ಧೋರಣೆಗಳಿಂದ ಹಿಂದೆ ಸರಿದಿದೆ. ಈಚಿನ ಕೆಲವು ಪ್ರಕರಣಗಳು ಈ ದುರದೃಷ್ಟಕರ ಪ್ರವೃತ್ತಿಯನ್ನು ಎತ್ತಿ ತೋರಿಸುತ್ತದೆ. ಚುನಾವಣಾ ಆಶ್ವಾಸನೆಗಳು ಮತ್ತು ಚುನಾವಣೆ ಸಂದರ್ಭದಲ್ಲಿ ಉಚಿತ ಕೊಡುಗೆಗಳ (ಫ್ರೀಬೀ) ಆಫರ್ ನೀಡಬಹುದೇ ಎಂಬ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಮುಂದೆ ಆಯೋಗ ಒಂದು ನಿಲುಮೆಯನ್ನು ತಾಳಿತ್ತು. ಇದು ತನ್ನ ವ್ಯಾಪ್ತಿಗೆ ಬರುವುದಿಲ್ಲ ಎಂದು ಆಯೋಗ ಹೇಳಿತ್ತು. ರಾಜಕೀಯ ಪಕ್ಷಗಳು ಮತ್ತು ಮತದಾರರಿಗೆ ಸಂಬಂಧಿಸಿದ ಈ ವಿಷಯದಲ್ಲಿ ಹಸ್ತಕ್ಷೇಪ ಮಾಡುವ ಯಾವುದೇ ಪ್ರಯತ್ನವು 'ಅಧಿಕಾರದ ಹದ್ದು ಮೀರಿದಂತಾಗುತ್ತದೆ' ಎಂದು ಆಯೋಗ ಹೇಳಿತ್ತು.

ಈ ವರ್ಷದ ಏಪ್ರಿಲ್‌ನಲ್ಲಿ ಈ ಮಹತ್ವದ ನಿಲುವು ತಳೆದಿದ್ದ ಚುನಾವಣೆ ಆಯೋಗ, ಪ್ರಧಾನಿ ಮೋದಿ ಜುಲೈನಲ್ಲಿ 'ರೇವ್ಡಿ' ಸಂಸ್ಕೃತಿಯನ್ನು ಟೀಕಿಸಿ ಜನರಿಗೆ ಫ್ರೀಬೀ ಆಫರ್ ಮಾಡುವುದಕ್ಕೆ ವಿರೋಧ ವ್ಯಕ್ತಪಡಿಸಿದ ನಂತರ ತನ್ನ ನಿಲುವನ್ನು ಬದಲಾಯಿಸಿಕೊಂಡಿತು. ಮಾದರಿ ನೀತಿ ಸಂಹಿತೆಗೆ ತಿದ್ದುಪಡಿ ತರುವುದಾಗಿ ಹಾಗೂ ಚುನಾವಣೆ ಆಶ್ವಾಸನೆಗಳ ವಿವರ ಹಾಗೂ ಅವುಗಳ ಆರ್ಥಿಕ ಪರಿಣಾಮಗಳಿಗೆ ಸಂಬಂಧಿಸಿದ ವಿವರಗಳ ಮಾದರಿ ಪತ್ರವೊಂದನ್ನು (ಪ್ರೊಫಾರ್ಮಾ) ಜಾರಿಗೆ ತರುವುದಾಗಿ ಅಕ್ಟೋಬರ್‌ನಲ್ಲಿ ಆಯೋಗ ಹೇಳಿದೆ. ಜನತೆಗೆ ರಾಜಕೀಯ ಪಕ್ಷಗಳು ಕೊಡುವ ಆಶ್ವಾಸನೆಯಲ್ಲಿ ಆಯೋಗದ ಈ ಹಸ್ತಕ್ಷೇಪವು ರಾಜಕೀಯ ಪಕ್ಷವೊಂದರ ನೀತಿಯನ್ನು ನಿಯಂತ್ರಿಸುವ ಸ್ಪಷ್ಟ ಪ್ರಯತ್ನವಾಗಿದೆ. ಕೆಲವೇ ತಿಂಗಳ ಹಿಂದೆ ತಳೆದಿದ್ದ ನಿಲುವಿಗೆ ಪೂರ್ಣ ವಿರುದ್ಧ ಧೋರಣೆ ತಾಳುವ ಮೂಲಕ ಚುನಾವಣೆ ಆಯೋಗ, ಪ್ರಧಾನ ಮಂತ್ರಿಯ ಆದೇಶಗಳನ್ನು ಪಾಲಿಸುವ ಸಂಸ್ಥೆ ಎಂಬ ಆರೋಪಕ್ಕೆ ತನ್ನನ್ನು ತಾನು ಒಡ್ಡಿಕೊಂಡಿದೆ.

ಇದೇ ಸರ್ಕಾರ ಮೊದಲ ಬಾರಿಗೆ ಚುನಾವಣಾ ಬಾಂಡ್ ವಿಚಾರ ಪ್ರಸ್ತಾಪಿಸಿದಾಗ ಆಯೋಗ ಅದನ್ನು ದೃಢವಾಗಿ ವಿರೋಧಿಸಿತ್ತು. ಈ ಅಪಾರದರ್ಶಕ ವ್ಯವಸ್ಥೆ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿತ್ತು. ಇಂಥ ಅನಾಮಿಕವಾದ ನಿಧಿ ಸಂಗ್ರಹ ವಿಧಾನವು ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ನಡೆಸುವುದಕ್ಕೆ ಅಡ್ಡಿಯಾಗಲಿದೆ ಎಂದು ಹೇಳಿತ್ತು. ಅದು 2018ರಲ್ಲಿ ಹೇಳಿದ್ದ ವಿಚಾರವಾಗಿದೆ. ಅದಾದ ನಂತರ ಆಯೋಗ ಇದುವರೆಗೂ ಈ ವಿಷಯದಲ್ಲಿ ಗಂಭೀರವಾದ ಫಾಲೋಅಪ್ ಮಾಡಿಲ್ಲ. ಚುನಾವಣೆ ಬಾಂಡ್ ವಿರೋಧಿಸಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆ ಸುಪ್ರೀಂ ಕೋರ್ಟ್ ಮುಂದೆ ಬಂದಾಗ ಕೇಂದ್ರ ಸರಕಾರ ಅದನ್ನು ಗಂಭೀರವಾಗಿ ಪರಿಗಣಿಸುತ್ತಲೇ ಇಲ್ಲ. ಚುನಾವಣೆಗಳಿಗೆ ಅನಾಮಿಕ ಮೂಲಗಳಿಂದ ಹಣ ಹರಿದು ಬರುವುದನ್ನು ತಡೆಯಲು ಗಂಭೀರ ಮಾರ್ಗೋಪಾಯ ಹುಡುಕುವ ಬದಲು ಆಯೋಗವು ರಾಜಕೀಯ ಪಕ್ಷಗಳು ಪಡೆಯುವ ಸಣ್ಣ ದೇಣಿಗೆಗಳನ್ನು ಪತ್ತೆ ಮಾಡುವಲ್ಲಿಯೇ ಹೆಚ್ಚು ಉತ್ಸುಕವಾಗಿದೆ. ಪ್ರಸಕ್ತ ಕಾನೂನಿನ ಪ್ರಕಾರ, 20000 ರೂಪಾಯಿಗಿಂತ ಹೆಚ್ಚಿನ ದೇಣಿಗೆಯ ಮೂಲವನ್ನು ರಾಜಕೀಯ ಪಕ್ಷಗಳು ತಿಳಿಸಬೇಕಾಗುತ್ತದೆ. ಆಯೋಗ ಇದೇ ವರ್ಷ ಸೆಪ್ಟೆಂಬರ್‌ನಲ್ಲಿ ಕಾನೂನು ಸಚಿವಾಲಯಕ್ಕೆ ಪತ್ರ ಬರೆದು 2000 ರೂಪಾಯಿ ದೇಣಿಗೆಯನ್ನೂ ಪಕ್ಷಗಳು ಘೋಷಿಸಬೇಕೆಂದು ಕಾಯ್ದೆಗೆ ತಿದ್ದುಪಡಿ ತರುವ ಮಾತನಾಡಿದೆ. 2000 ರೂಪಾಯಿಗಿಂತ ಕಡಿಮೆ ಮೊತ್ತದ ದೇಣಿಗೆಯ ಅನಾಮಿಕ ಮೂಲದ ಬಗ್ಗೆ ಅತೀವ ಆಸಕ್ತಿ ತಳೆದಿರುವ ಆಯೋಗ, ಚುನಾವಣಾ ಬಾಂಡ್‌ನಿಂದ ಅನಾಮಿಕ ದೇಣಿಗೆಗಳಿಂದ ಬರುವ ಕೋಟ್ಯಂತರ ರೂಪಾಯಿಗಳ ಬಗ್ಗೆ ಜಾಣ ಕುರುಡು ನಿಲುವು ತಳೆದಿದೆ. ಈ ವರ್ಷ ಅಕ್ಟೋಬರ್‌ನಲ್ಲಿ ಚುನಾವಣಾ ಬಾಂಡ್‌ನ 22ನೇ ಕಂತು ಬಿಡುಗಡೆ ಮಾಡಿದ ನಂತರ, ಈ ಅನಾಮಿಕ ಮಾರ್ಗದಿಂದ ಒಟ್ಟು 10,791 ಕೋಟಿ ರೂಪಾಯಿ ಹರಿದು ಬಂದಿದೆ. ಅದರಲ್ಲಿ ಸಿಂಹಪಾಲು ಬಂದಿರುವುದು ಆಳುವ ಬಿಜೆಪಿ ಪಕ್ಷಕ್ಕೇ. ಆಳುವ ಪಕ್ಷದ ಪ್ರತೀ ಮಾತಿಗೆ ತಲೆದೂಗುವ ಕಾರ್ಪೊರೇಟ್ ಮತ್ತು ಶಂಕಾಸ್ಪದ ವರ್ತಕರಿಂದ ಅಪಾರ ಪ್ರಮಾಣದ ಹಣ ಮಾಡಿಕೊಳ್ಳ ಬಹುದೆಂಬುದು ಬಿಜೆಪಿಯ ಅಭಿಪ್ರಾಯವಾಗಿದೆ.

ಚುನಾವಣಾ ಬಾಂಡ್ ಯೋಜನೆಯನ್ನು ರದ್ದುಪಡಿಸದಿದ್ದರೆ ಚುನಾವಣೆಗಳಲ್ಲಿ ಸಮಾನವಾಗಿ ಸ್ಪರ್ಧಿಸಲು ಅವಕಾಶ ಸಿಗುವುದಿಲ್ಲ ಮತ್ತು ಲೆಕ್ಕವಿಲ್ಲದ ಹಣವನ್ನು ಚುನಾವಣೆ ಉದ್ದೇಶಕ್ಕೆ ಬಳಸುವುದಕ್ಕೆ ಕಡಿವಾಣ ಹಾಕಲೂ ಆಗುವುದಿಲ್ಲ. ಆದರೆ, 2000 ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಿನ ಮೊತ್ತದ ಸಣ್ಣ ಡೊನೇಶನ್‌ಗಳಿಗೆ ಹೊಣೆಗಾರಿಕೆ ನಿಗದಿಪಡಿಸುವಲ್ಲಿ ಆಯೋಗ ಸಮಾಧಾನ ಪಡುತ್ತಿದೆ.

ಗುಜರಾತ್ ಅಸೆಂಬ್ಲಿ ಚುನಾವಣೆ ನಡೆಸುವಲ್ಲಿ ಹೊಸ ಮಾನದಂಡಗಳನ್ನೇ ಸ್ಥಾಪಿಸಲು ಚುನಾವಣೆ ಆಯೋಗ ಹೊರಟಂತಿದೆ. ಮೊದಲನೆಯದಾಗಿ, ಹಿಮಾಚಲ ಪ್ರದೇಶ ವಿಧಾನಸಭೆ ಚುನಾವಣೆಗಳನ್ನು ಪ್ರಕಟಿಸಿದ ನಂತರ ತುಂಬಾ ವಿಳಂಬವಾಗಿ ಗುಜರಾತ್ ಚುನಾವಣೆಗಳನ್ನು ಆಯೋಗ ಘೋಷಿಸಿತು. ಈ ಹೆಚ್ಚುವರಿ ದಿನಗಳನ್ನು ಗುಜರಾತ್‌ನಲ್ಲಿ ಯೋಜನೆಗಳನ್ನು ಉದ್ಘಾಟಿಸಲು ಅಥವಾ ಆರಂಭಿಸಲು ಪ್ರಧಾನ ಮಂತ್ರಿ ಹೇಗೆ ಬಳಸಿಕೊಂಡರು ಎನ್ನುವುದನ್ನು ಎಲ್ಲರೂ ನೋಡಿದ್ದೇವೆ.

ಗುಜರಾತ್‌ನ ಸಾವಿರಕ್ಕೂ ಅಧಿಕ ಕಾರ್ಪೊರೇಟ್ ಸಂಸ್ಥೆಗಳ ಜೊತೆ ಚುನಾವಣೆ ಆಯೋಗ ಒಪ್ಪಂದವೊಂದಕ್ಕೆ ಸಹಿ ಹಾಕಿದ ಅಸಹಜ ಕ್ರಮವನ್ನೂ ದೇಶ ಗಮನಿಸಿದೆ. ಈ ಕಂಪನಿಗಳ ಉದ್ಯೋಗಿಗಳು ಚುನಾವಣೆಯಲ್ಲಿ ಪಾಲ್ಗೊಳ್ಳುವುದರ ಮೇಲೆ ಕಣ್ಗಾವಲು ಇಡುವುದು ಹಾಗೂ ಚುನಾವಣೆಯಲ್ಲಿ ಮತದಾನ ಮಾಡದ ನೌಕರರ ಹೆಸರುಗಳನ್ನು ತಮ್ಮ ವೆಬ್‌ಸೈಟ್‌ಗಳು ಅಥವಾ ನೋಟಿಸ್ ಬೋರ್ಡ್‌ನಲ್ಲಿ ಪ್ರಕಟಿಸುವ ಯೋಜನೆ ಇದಾಗಿದೆ. ಇದು ಹೆಚ್ಚುಕಮ್ಮಿ ಬಲವಂತದಿಂದ ಮತದಾನ ಮಾಡಿಸುವ ಅಪಾಯಕ್ಕೆ ಸನಿಹವಾಗಿದೆ. ಆಯಾ ಕಂಪನಿಗಳ ದುಡಿಯಯುವ ವರ್ಗ ಮತದಾನ ಮಾಡುವುದನ್ನು ಖಾತರಿಪಡಿಸುವ ಜವಾಬ್ದಾರಿಯನ್ನು ಕಂಪನಿಗಳ ಆಡಳಿತ ವರ್ಗಗಳ ಮೇಲೆ ಹೊರಿಸಲಾಗಿದೆ. ಹೇಗೆ ಮತದಾನ ಮಾಡಬೇಕೆಂದು ಕಾರ್ಮಿಕರಿಗೆ ಸಲಹೆ ನೀಡುವುದು ಬಹುಶಃ ಮುಂದಿನ ಹೆಜ್ಜೆಯಾಗಿದೆ.

ಚುನಾವಣೆ ಆಯೋಗ ತುಂಬಾ ಅಮೂಲ್ಯವಾದುದು. ನಮ್ಮ ಪ್ರಜಾಪ್ರಭುತ್ವಕ್ಕೆ ಮಹತ್ವದ ಸಂಸ್ಥೆಯಾಗಿದೆ. ಒಂದು ಸರ್ವಾಧಿಕಾರಿ ಸರಕಾರದಿಂದ ಅದರ ಸ್ವಾತಂತ್ರ್ಯ ಮತ್ತು ವಿಶ್ವಾಸಾರ್ಹತೆ ಕುಸಿಯಲು ಬಿಡಬಾರದು. ಚುನಾವಣೆ ಆಯೋಗದಲ್ಲಿ ಸುಧಾರಣೆ ತರಲು ಇದು ಸಕಾಲವಾಗಿದೆ. ಭಾರತದ ಮುಖ್ಯ ನ್ಯಾಯಮೂರ್ತಿ ಮತ್ತು ಲೋಕಸಭೆಯ ಪ್ರತಿಪಕ್ಷ ನಾಯಕರನ್ನೂ ಒಳಗೊಂಡ ಸಮಿತಿಯೊಂದು ಚುನಾವಣಾ ಆಯುಕ್ತರನ್ನು ಆಯ್ಕೆ ಮಾಡುವ ವ್ಯವಸ್ಥೆಯೊಂದಿಗೆ ಈ ಸುಧಾರಣೆ ಆರಂಭವಾಗಬೇಕಿದೆ. ಹಾಲಿ, ಚುನಾವಣಾ ಆಯುಕ್ತರನ್ನು ಆಯ್ಕೆ ಮಾಡುವುದು ಸಂಪೂರ್ಣವಾಗಿ ಕಾರ್ಯಾಂಗದ, ಅಂದರೆ ಸರಕಾರದ ಕೈಯಲ್ಲಿದೆ. ಎರಡನೆಯದಾಗಿ, ಆಯುಕ್ತರು ನಿವೃತ್ತರಾದ ನಂತರ ಯಾವುದೇ ಅಧಿಕೃತ ಹುದ್ದೆ ಹೊಂದಬಾರದು ಅಥವಾ ಯಾವುದೇ ರಾಜಕೀಯ ಪಕ್ಷದಿಂದ ಸಂಸತ್ತು ಅಥವಾ ರಾಜ್ಯ ಶಾಸನಸಭೆಗಳ ಸದಸ್ಯರಾಗಿ ನೇಮಕಗೊಳ್ಳಬಾರದು.

ಅನು: ವಿಶ್ವ

---

2) ಸಾರ್ವಜನಿಕ ವಲಯದ ಖಾಸಗೀಕರಣ ನಿಲ್ಲಿಸಿ;
3) ಎಲ್ಲಾ ಗುತ್ತಿಗೆ ಮತ್ತು ಹಂಗಾಮಿ ಕಾರ್ಮಿಕರನ್ನು ಕಾಯಂಗೊಳಿಸುವುದು;
4) ಖಾಸಗಿ ವಲಯದ ಉದ್ಯೋಗಗಳಲ್ಲಿ ಕಡ್ಡಾಯ ಮೀಸಲಾತಿಯನ್ನು ಪರಿಚಯಿಸುವುದು;
5) ದಲಿತ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರಿಗೆ ಮೀಸಲಾತಿಯನ್ನು ಕಡಿತ ಮಾಡದೆ, ವಿಸ್ತರಿಸುವುದು.
6) ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಉಪ ಯೋಜನೆಯನ್ನು ಮರುಸ್ಥಾಪಿಸಿ; ಮತ್ತು ಶಿಕ್ಷಣ ಮತ್ತು ಉದ್ಯೋಗ, ವಸತಿಗಳಿಗೆ ಆದ್ಯತೆಯಾಗಲಿ;
7) ಎನ್.ಇ.ಪಿ.–ಹೊಸ ಶಿಕ್ಷಣ ನೀತಿಯನ್ನು ರದ್ದುಗೊಳಿಸಿ;
8) ಸಾಂಸ್ಥಿಕ ಕೊಲೆಯ ವಿರುದ್ಧ ಕಾನೂನನ್ನು ಜಾರಿಗೊಳಿಸಿ;
9) ಭೂ ಸೀಲಿಂಗ್ ಕಾಯ್ದೆಗಳನ್ನು ಜಾರಿಗೊಳಿಸಿ ಮತ್ತು ಭೂರಹಿತರಿಗೆ ಭೂಮಿಯನ್ನು ವಿತರಿಸಿ;

ಕ್ರಿಯಾ ಯೋಜನೆಯನ್ನು ಅಂಗೀಕರಿಸುವ ಮೂಲಕ ಸಮಾವೇಶವು ಮುಕ್ತಾಯಗೊಂಡಿತು.

ಹಾಲಿನ ದರ ಹೆಚ್ಚಳದ ಹೇಳಿಕೆ ಮತ್ತು ಅದರ ಜಾರಿಗೆ ತಡೆ.... ಪುಟ 3 ರಿಂದ

ರೂಪಾಯಿಗಳಷ್ಟೇ ಸಿಗುತ್ತದೆ. ಅಥವಾ ಐನೂರು, ಸಾವಿರ ವೆಚ್ಚ ಮಾಡಿ ಹತ್ತು ಕಿಮೀ ದೂರದಲ್ಲಿರುವ ಗೋಶಾಲೆಗೆ ಉಚಿತವಾಗಿ ಬಿಟ್ಟು ಬರಬೇಕು. ಮತ್ತೊಂದು ಹಸು ಖರೀದಿಸಲು ಮತ್ತೆ ಸಾಲ ಮಾಡಬೇಕು. ಇದರಿಂದ ರೈತರು ಮತ್ತಷ್ಟು ಸಂಕಷ್ಟಗಳಿಗೆ ಸಿಲುಕುವಂತಾಗಿದೆ. ಇದರಿಂದ ಬೇಸತ್ತು ಹಸು ಸಾಕಾಣಿಕೆಯಿಂದ ದೂರ ಸರಿದ ರೈತರೂ ಇದ್ದಾರೆ" ಎನ್ನುತ್ತಾರೆ ಅವರು.

ಹಾಲಿನ ದರ ಹೆಚ್ಚಳ ಮಾಡಬೇಕು, ಆದರೆ...

ನಿಜ. ಹಾಲು, ಮೊಸರು ಮತ್ತು ಹಾಲಿನ ಉತ್ಪನ್ನಗಳ ಬೆಲೆ ಹೆಚ್ಚಾದಲ್ಲಿ ಇದು ಗ್ರಾಹಕರಿಗೆ ಹೊರೆಯಾಗುತ್ತದೆ. ರಾಜ್ಯದಲ್ಲಿ ಈಗಾಗಲೇ ಒಂದೂವರೆ ಕೋಟಿಯಷ್ಟು ಬಿಪಿಎಲ್ ಹಾಗೂ ಎಪಿಎಲ್ ಕಾರ್ಡದಾರ ಕುಟುಂಬಗಳಿದ್ದು ಇವರು ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ತತ್ತರಿಸಿದ್ದಾರೆ. ಯಾವುದೇ ಬೆಲೆ ಏರಿಕೆಯ ಹೊರೆಯನ್ನು ಭರಿಸುವಂತಹ ಪರಿಸ್ಥಿತಿ ಇವರಿಗೆ ಇಲ್ಲವಾಗಿದೆ.

ಮತ್ತೊಂದು ಕಡೆ ಹಾಲಿನ ಬೆಲೆ ಹೆಚ್ಚಳ ಆಗದಿದ್ದರೆ ಮಿಲಿಯಾಂತರ ರೈತರು ನಷ್ಟ ಅನುಭವಿಸುತ್ತಾರೆ. ರೈತರಿಗೆ ನಷ್ಟವಾಗದಂತೆ ಮತ್ತು ಗ್ರಾಹಕರಿಗೆ ಹೊರೆಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಸರ್ಕಾರದ್ದು. ಇದಕ್ಕೆ ಪರಿಹಾರ ಎಂದರೆ ಹೆಚ್ಚಿನ ದರವನ್ನು ಸರ್ಕಾರವೇ ತುಂಬುವುದು. ಹೀಗೆ ಸರ್ಕಾರ ರೈತರಿಗೆ 5 ರೂ ಧನಸಹಾಯ ಕೊಡುತ್ತಿದೆ. ದರ ಹೆಚ್ಚಳ ಮಾಡಿ, ಸರ್ಕಾರ ಈಗಿನ ಧನಸಹಾಯಕ್ಕೆ 3 ರೂ ಸೇರಿಸಿ ರೈತರಿಗೆ ಕೊಡುವುದರಿಂದ ರೈತರು ಮತ್ತು ಗ್ರಾಹಕರ ಹೊರೆಯನ್ನು ಕಡಿಮೆ ಮಾಡಲು ಸಾಧ್ಯವಿದೆ.

ಸಹಾಯಧನವನ್ನು 15 ರೂಗಳಿಗೆ ಹೆಚ್ಚಿಸಿ:

ಹಾಲು ದರ ಏರಿಕೆಯ ಬರೆಯಿಂದ ಜನತೆಯನ್ನು ಮುಕ್ತಗೊಳಿಸುವ ಮತ್ತು ಹಾಲು ಉತ್ಪಾದಕರಿಗೆ ನೀಡುವ ಸಹಾಯಧನವನ್ನು 15 ರೂಗಳಿಗೆ ಹೆಚ್ಚಿಸುವ ಮೂಲಕ ಈರ್ವರನ್ನು ರಕ್ಷಿಸುವ ಅಗತ್ಯವಿದೆ ಎನ್ನುತ್ತಾರೆ ಮಾರ್ಕ್ಸ್ ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡರಾದ ಯು. ಬಸವರಾಜು.

ಮಿಲಿಯಾಂತರ ಹಾಲು ಉತ್ಪಾದಕರು ಹಾಲು ಉತ್ಪಾದನೆಯ ವೆಚ್ಚವನ್ನು, ಅವರು ಪಡೆಯುವ ಹಾಲಿನ ದರದಿಂದ ಸರಿ ದೂಗಿಸಲಾಗದೇ ನಷ್ಟವನ್ನು ಅನುಭವಿಸುತ್ತಿದ್ದಾರೆ. ಇದರಿಂದಾಗಿ ಅವರು ಸಾಲಬಾಧಿತರಾಗುತ್ತಿದ್ದಾರೆ. ಪಶು ಆಹಾರದ ಬೆಲೆಗಳು ಮತ್ತು ಅಗತ್ಯ ವಸ್ತುಗಳ ಬೆಲೆಗಳು ಹಾಲು ಉತ್ಪಾದಕರನ್ನು ತೀವ್ರವಾಗಿ ಬಾಧಿಸುತ್ತಿವೆ. ಪರಿಣಾಮವಾಗಿ ಹಾಲು ಉತ್ಪಾದಕರ ನಷ್ಟವನ್ನು ಸರಿದೂಗಿಸಲು ರಾಜ್ಯ ಸರ್ಕಾರ ಹಾಲಿನ ದರ ಏರಿಕೆ ಮಾಡಿ ಗ್ರಾಹಕರಿಗೆ ಬರೆ ಎಳೆಯುವ ಕ್ರಮ ಸರಿಯಾದುದಲ್ಲ. ಬದಲಿಗೆ ಹಾಲು ಉತ್ಪಾದಕರಿಗೆ ನೀಡುತ್ತಿರುವ ಸಹಾಯಧನವನ್ನು ಲೀಟರ್ ಗೆ 15 ರೂಗಳಿಗೆ ಹೆಚ್ಚಿಸುವ ಮೂಲಕ ಅದನ್ನು ಸರಿದೂಗಿಸುವುದು ಮಾತ್ರವೇ ಸರಿಯಾದ ಕ್ರಮವಾಗಿದೆ. ಈ ಕ್ರಮದ ಮೂಲಕ ಹಾಲು ಉತ್ಪಾದಕರು ಹಾಗೂ ಗ್ರಾಹಕರನ್ನು ಸಂರಕ್ಷಿಸಿ ಹೈನು ಉದ್ಯಮವನ್ನು ಉಳಿಸಲು ಸರ್ಕಾರ ಮುಂದಾಗಬೇಕು. ಯಾವುದೇ ಮಾನದಂಡಗಳಿಲ್ಲದೆ ಬೆಲೆ ಏರುತ್ತಿರುವ ಪಶು ಆಹಾರ ಬೆಲೆಗಳಿಗೆ ಕಡಿವಾಣ ಹಾಕಬೇಕು. ರಿಯಾಯಿತಿ ದರದಲ್ಲಿ ಪಶು ಆಹಾರ ನೀಡಬೇಕು. ಹೈನುಗಾರಿಕೆಯನ್ನು ಪ್ರೋತ್ಸಾಹಿಸಲು ಪ್ರತಿವರ್ಷ ಲೀಟರ್ ಹಾಲಿಗೆ ಸಹಾಯಧನ ಹೆಚ್ಚಿಸಬೇಕು. ಸಹಕಾರ ಸಂಘಗಳನ್ನು ಮತ್ತಷ್ಟು ಬಲಪಡಿಸಬೇಕು ಎನ್ನುತ್ತಾರೆ ಸಿಪಿಐ(ಎಂ) ಪಕ್ಷದ ಮುಖಂಡರು.





ಕುಂದಾಪುರದಲ್ಲಿ ಯಶಸ್ವಿ ಸಿಐಟಿಯು 15 ನೇ ರಾಜ್ಯ ಸಮ್ಮೇಳನ

ಕಾರ್ಪೋರೇಟ್ ಪ್ರೇರಿತ ನೀತಿಗಳ ವಿರುದ್ಧ ವಿಶಾಲ ಹಾಗೂ ಐಕ್ಯ ಚಳವಳಿ

ಹೊಸ ಸವಾಲುಗಳಿಗೆ ತಕ್ಕಂತೆ ಸಮರ್ಥ ಸಂಘಟನಾ ಜಾಲ ಬಲವರ್ಧನೆಗೆ ನಿರ್ಧಾರ

ಕೆ. ಮಹಾಂತೇಶ್

ಕೇಂದ್ರ ಹಾಗೂ ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ ನೇತೃತ್ವದ ಡಂಬಲ್ ಇಂಜಿನ್ ಸರ್ಕಾರಗಳು ಜಾರಿ ಮಾಡುತ್ತಿರುವ ಕಾರ್ಪೋರೇಟ್ ಪ್ರೇರಿತ ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕ ನೀತಿಗಳು ದೇಶದ ಹಾಗೂ ರಾಜ್ಯದ ಕಾರ್ಮಿಕ ವರ್ಗ ಸೇರಿ ಇತರೆ ದುಡಿಯುವ ವರ್ಗದ ಬದುಕಿನ ಮೇಲೆ ಗಂಭೀರ ಪರಿಣಾಮ ಉಂಟು ಮಾಡುತ್ತಿವೆ. ಇಂತಹ ನೀತಿಗಳ ವಿರುದ್ಧ ಹಾಗೂ ಕಾರ್ಮಿಕ, ರೈತ ಹಗೂ ಜನಸಾಮಾನ್ಯರ ಬದುಕನ್ನು ರಕ್ಷಿಸುವ ಪರ್ಯಾಯ ನೀತಿಗಳ ಜಾರಿಗಾಗಿ ರಾಜ್ಯದಲ್ಲಿ ವಿಶಾಲ ತಳಹದಿಯ ದುಡಿಯುವ ವರ್ಗದ ಐಕ್ಯ ಚಳವಳಿಯನ್ನು ಬೆಳೆಸುವ ನಿರ್ಧಾರವನ್ನು ಕುಂದಾಪುರದಲ್ಲಿ ಮುಕ್ತಾಯಗೊಂಡ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) 15 ನೇ ರಾಜ್ಯ ಸಮ್ಮೇಳನ ನಿರ್ಧರಿಸಿದೆ.

ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ ನವೆಂಬರ್ 15 ರಿಂದ 17 ರವರೆಗೆ ನಡೆದ ರಾಜ್ಯ ಸಮ್ಮೇಳನವನ್ನು ನವೆಂಬರ್ 15 ರ ಬೆಳೆಗ್ಗೆ ಸಿಐಟಿಯು ರಾಷ್ಟ್ರೀಯ ಅಧ್ಯಕ್ಷರಾದ ಕಾಮ್ರೇಡ್ ಡಾ.ಕೆ.ಹೇಮಲತಾ ಉದ್ಘಾಟಿಸಿ ಮಾತನಾಡಿ ಕಳೆದ ಮೂರು ವರ್ಷಗಳು ಅತ್ಯಂತ ಸವಾಲಿನ ದಿನಗಳನ್ನು ದೇಶದ ಸಾಮಾನ್ಯ ಜನ ಹಾಗೂ ಶ್ರಮಜೀವಿ ವರ್ಗ ಕಂಡಿದೆ. ಕೋವಿಡ್ ಸಾಂಕ್ರಾಮಿಕ ವಿಶ್ವವನ್ನು ಹಿಂಡಿ, ಹಿಪ್ಪೆ ಮಾಡಿತ್ತು. ಆದರೆ ಕಾರ್ಪೋರೇಟ್ ಬಂಡವಾಳದಾರರು ಈ ಸಂದರ್ಭವನ್ನೂ ತಮ್ಮ ಲಾಭಕ್ಕಾಗಿ ಬಳಸಿಕೊಂಡಿದ್ದನ್ನು ತೀವ್ರವಾಗಿ ಟೀಕಿಸಿದರು.

ಕಾರ್ಪೋರೇಟ್ ಬಂಡವಾಳದಾರರನ್ನು ಸಂತುಷ್ಟಗೊಳಿಸಲು ಜನರ ವಿರೋಧದ ನಡುವೆಯೂ ಉದಾರವಾದಿ ನೀತಿಗಳನ್ನು ಶತಾಯಗತಾಯ ಜಾರಿ ಮಾಡಲು ಕೇಂದ್ರದ ಪ್ರಯತ್ನ ಮುಂದುವರಿದಿದೆ. ಇದರ ವಿರುದ್ಧ ಪ್ರಬಲ ಪ್ರತಿರೋಧ ಎದ್ದು ಬರದಂತೆ ಜಾತಿ, ಧರ್ಮದ ಆಧಾರದಲ್ಲಿ ಜನತೆಯನ್ನು ಒಡೆಯಲು ಪ್ರಯತ್ನಿಸುತ್ತಿದೆ. ಲವ್ ಜಿಹಾದ್, ಹಲಾಲ್, ಸೇರಿದಂತೆ ಎಲ್ಲವನ್ನೂ ಕೋಮುವಾದಿ ನೆಲೆಯಲ್ಲಿ ನೋಡುತ್ತಾ, ಜನರ ಮನಸ್ಸನ್ನು ನೈಜ ಸಮಸ್ಯೆಗಳಿಂದ ಮರೆಸುವ ಪ್ರಯತ್ನ ನಡೆಸುತ್ತಿದೆ. ಹೀಗಾಗಿ ನಾವು ಕಾರ್ಪೊರೇಟ್ ಬಂಡವಾಳವಾದದ ಶೋಷಣೆ ವಿರುದ್ಧ ಹೋರಾಟ ನಡೆಸುವಾಗಲೇ ಕೋಮುವಾದ, ಮತೀಯತೆ, ಫ್ಯಾಸಿಸ್ಟ್ ವಾದದ ಅಪಾಯದ ವಿರುದ್ಧ ನಮ್ಮ ಚಳುವಳಿಯನ್ನು ಹುರಿಗೊಳಿಸಬೇಕಿದೆ ಎಂದು ಅವರು ಕರೆ ನೀಡಿದರು.

ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾಜಿ ರಾಜ್ಯಸಭಾ ಸದಸ್ಯರು ಹಾಗೂ ಸಿಐಟಿಯು ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ತಪನ್ ಸೇನ್, ರಾಷ್ಟ್ರೀಯ ಉಪಾಧ್ಯಕ್ಷ ಎ.ಕೆ. ಪದ್ಮನಾಭನ್, ರಾಷ್ಟ್ರೀಯ ಕಾರ್ಯದರ್ಶಿ ಕೆ.ಎನ್ ಉಮೇಶ್, ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷೀ ಸುಂದರಂ,ಸ್ವಾಗತ ಸಮಿತಿ ಗೌರವಧ್ಯಕ್ಷ ಕೆ.ಶಂಕರ್,ಅಧ್ಯಕ್ಷರಾದ ಬಾಲಕೃಷ್ಣಶೆಟ್ಟಿ, ಪ್ರಧಾನ ಕಾರ್ಯದರ್ಶೀ ಸುರೇಶ ಕಲ್ಲಾಗಾರ್ ಖಜಾಂಚಿ ಹೆಚ್ ನರಸಿಂಹ ಉಪಸ್ಥಿತರಿದ್ದರು. ಸಮ್ಮೇಳನಕ್ಕೆ ಶುಭಕೋರಿ ಹಾಗೂ ರೈತ ಕಾರ್ಮಿಕರ ಸಖ್ಯತೆ ಭಾಗವಾಗಿ ಕರ್ನಾಟಕ ಪ್ರಾಂತ ರೈತ ಸಂಘದ ಉಪಾಧ್ಯಕ್ಷ ಯು ಬಸವರಾಜ್ ಮಾತನಾಡಿದರು.

ಸೌಹಾರ್ದ ಶುಭಾಶಯಗಳು:

ಸಮ್ಮೇಳನಕ್ಕೆ ಶುಭಕೋರಿ ಎಐಸಿಸಿಟಿಯು ರಾಜ್ಯ ಕಾರ್ಯದರ್ಶಿ ಅಪ್ಪಣ್ಣ, ಎಐಯುಟಿಯುಸಿ ಮುಖಂಡರಾದ ಕೆ.ವಿ.ಭಟ್ ಮಾತನಾಡಿದರು. ಟಿಯುಸಿಸಿ ರಾಜ್ಯ ಅಧ್ಯಕ್ಷರಾದ ಜಿ.ಆರ್. ಶಿವಶಂಕರ್ ಶುಭಾಶಯ ಸಂದೇಶ ಕಳಿಸಿದ್ದರು. ಜತೆಗೆ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ರಾಜ್ಯ ಉಪಾಧ್ಯಕ್ಷ ಜಿ. ಎನ್.ನಾಗರಾಜ್, ಆದಿವಾಸಿ ಹಕ್ಕುಗಳ ಸಮಿತಿಯ ಸಹ ಸಂಚಾಲಕ ಎಸ್.ವೈ ಗುರುಶಾಂತ್, ಜನವಾದಿ ಮಹಿಳಾ ಸಂಘದ ರಾಜ್ಯ ಕಾರ್ಯದರ್ಶೀ ದೇವಿ, ಎಸ್,ಎಫ್ಐ ರಾಜ್ಯ ಕಾರ್ಯದರ್ಶಿ ವಾಸುದೇವರೆಡ್ಡಿ ಹಾಗೂ ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಬಸವರಾಜ್ ಪೂಜಾರ್ ಸೌಹಾರ್ದ ಪ್ರತಿನಿಧಿಗಳಾಗಿ ಭಾಗವಹಿಸಿ ಶುಭ ಕೋರಿದರು.



ಪ್ರಧಾನ ಕಾರ್ಯದರ್ಶಿ ವರದಿ ಮೇಲೆ ಚರ್ಚೆ:

ಮಧ್ಯಾಹ್ನದ ಬಳಿಕ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಆಗಲಿದವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಬಳಿಕ ರಾಜ್ಯ ಅಧ್ಯಕ್ಷರಾದ ಎಸ್. ವರಲಕ್ಷ್ಮೀ ಅಧ್ಯಕ್ಷೀಯ ಭಾಷಣ ಮಾಡಿ ಕೇಂದ್ರ ಮತ್ತು ರಾಜ್ಯದ ಬಿಜೆಪಿ ಸರ್ಕಾರದ ನೀತಿಗಳು ಹೇಗೆ ಕಾರ್ಮಿಕ ವರ್ಗದ ಬದುಕನ್ನು ಅಸಹನೀಯಗೊಳಿಸಿವೆ ಮತ್ತು ರಾಜ್ಯದಲ್ಲಿ ಆರ್ಥಿಕ ಅಸಮಾತೋಲನ ಸೃಷ್ಟಿಸಿವೆ ಎಂದರು. ಇದಾದ ಬಳಿಕ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ರಾಜ್ಯದ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸ್ಥಿತಿಗತಿಗಳು ಹಾಗೂ ದುಡಿಯುವ ವರ್ಗದ ಪರಿಸ್ಥಿತಿ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಕಾರ್ಮಿಕ ವಿರೋಧಿ ಕಾನೂನುಗಳು, ನಮ್ಮ ಮಧ್ಯ ಪ್ರವೇಶ ಹಾಗೂ ಸಂಘಟಿಸಿದ ಹೋರಾಟಗಳ ವಿವರಗಳನ್ನು ಒಳಗೊಂಡ ವರದಿಯನ್ನು ಸಮ್ಮೇಳನದಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳ ಮುಂದೆ ಚರ್ಚೆಗಾಗಿ ಮಂಡಿಸಿದರು.

ಪ್ರಧಾನ ಕಾರ್ಯದರ್ಶಿ ವರದಿ ಮೇಲೆ 31 ಜಿಲ್ಲೆಗಳು ಹಾಗೂ ಅಂಗನವಾಡಿ, ಗ್ರಾಮಪಂಚಾಯತ್, ಕಟ್ಟಡ, ಬಿಸಿಯೂಟ, ಅಕ್ಷರದಾಸೋಹ, ಹಮಾಲಿ, ಆಟೋ, ಬೀಡಿ, ಪೌರಕಾರ್ಮಿಕ,ವಿಮಾ ಪ್ರತಿನಿಧಿಗಳು, ರಸ್ತೆ ಸಾರಿಗೆ ಸೇರಿದಂತೆ ವಿವಿಧ ವಿಭಾಗಗಳನ್ನು ಪ್ರತಿನಿಧಿಸಿ ಭಾಗವಹಿಸಿದ್ದ 371 ಪ್ರತಿನಿಧಿಗಳ ಪರವಾಗಿ 61 ಜನರು 360 ನಿಮಿಷಗಳ ಕಾಲ ಪ್ರಧಾನ ಕಾರ್ಯದರ್ಶಿ ವರದಿ ಮೇಲೆ ಚರ್ಚೆ ನಡೆಸಿದರು. ಚರ್ಚೆಯಲ್ಲಿ ಬಂದ ಪ್ರಶ್ನೆಗಳಿಗೆ ಪ್ರಧಾನ ಕಾರ್ಯದರ್ಶಿ ಉತ್ತರಿಸಿದ ಬಳಿಕ ವರದಿಯನ್ನು ಸಮ್ಮೇಳನ ಸರ್ವಾನುಮತದಿಂದ ಅಂಗೀಕರಿಸಿತು. ಮೂರು ದಿನಗಳ ಕಾಲ ಸಮ್ಮೇಳನ ನಡೆದ ಕಲಾಪಗಳ ನಿರ್ವಹಣೆಯನ್ನು ರಾಜ್ಯ ಅಧ್ಯಕ್ಷರಾದ ಎಸ್. ವರಲಕ್ಷ್ಮೀ ನೇತೃತ್ವದ ಅಧ್ಯಕ್ಷೀಯ ಮಂಡಳಿ ನಡೆಸಿತು. ಇದರ ಜತೆಗೆ ರಾಜ್ಯ ಪದಾಧಿಕಾರಿಗಳಾದ ರಾಘವೇಂದ್ರ, ವಸಂತ ಆಚಾರಿ, ಯಮುನಾ ಗಾಂವ್ಕರ್,ಪ್ರತಾಪಸಿಂಹ, ಮಹೇಶ್ ಪತ್ತಾರ್ ನೇತೃತ್ವದ ಕಲಾಪ ದಾಖಲಾತಿ, ಪರಿಚಯ ಪತ್ರ, ನಿರ್ಣಯ,ಭಾಷಾಂತರ ಹಾಗೂ ಸಾಮಾಜಿಕ ಮಾಧ್ಯಮ ಸಮಿತಿಗಳು ಕಾರ್ಯನಿರ್ವಹಿಸಿದವು.

ವೈವಿಧ್ಯಮಯ ಕಾರ್ಯಕ್ರಮಗಳು:

ವಿಡಿಯೋ ಸ್ಪರ್ಧೆ ಪೋಸ್ಟರ್ ಬಿಡುಗಡೆ:

ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಬೆಂಗಳೂರಿನಲ್ಲಿ 2023 ರ ಜನವರಿಯಲ್ಲಿ ನಡೆಯುವ ಸಿಐಟಿಯುವಿನ 17 ನೇ ಅಖಿಲ ಭಾರತ ಸಮ್ಮೇಳನ ಅಂಗವಾಗಿ ಸಾಂಸ್ಕೃತಿಕ ಉಪ ಸಮಿತಿ ಆಯೋಜಿಸಿರುವ 7 ನಿಮಿಷಗಳ ವಿಡಿಯೋ ಸ್ಪರ್ಧೆ ಕುರಿತಾದ ಪೋಸ್ಟರ್‌ನ್ನು ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಬಿಡುಗಡೆಗೊಳಿಸಿದರು. ದೇಶದ ಸಾರ್ವಭೌಮತ್ವ, ಆರ್ಥಿಕ ಸಂಕಷ್ಟಗಳು,ವಿವಿಧ ವಿಭಾಗಗಳು ನಡೆಸುವ ಹೋರಾಟಗಳು ಅವರ ಬದುಕು ಕುರಿತು ವಿಡಿಯೋ ಸ್ಪರ್ಧೆಯ ವಿಷಯವಾಗಿದೆ.

ಕಾರ್ಮಿಕ ಚರಿತ್ರೆ ಬಿಡುಗಡೆ:

ದೇಶದ ಕಾರ್ಮಿಕ ಹಾಗೂ ನೌಕರರ ಚಳವಳಿಯ ಹಿರಿಯ ನಾಯಕ ಹಾಗೂ ಮಾಜಿ ಸಂಸದ ಸುಕುಮಾಲ್ ಸೇನ್ ಅವರು ಇಂಗ್ಲೀಷ್‌ನಲ್ಲಿ ಬರೆದಿದ್ದ 'ಭಾರತದ ಕಾರ್ಮಿಕ ಚಳವಳಿಯ ಚರಿತ್ರೆ" ಕುರಿತಾದ ಕನ್ನಡ ಅನುವಾದದ ಕೃತಿಯನ್ನು ರಾಷ್ಟ್ರೀಯ ಉಪಾಧ್ಯಕ್ಷ ಎ.ಕೆ. ಪದ್ಮಾನಾಭನ್ ಬಿಡುಗಡೆಗೊಳಿಸಿದರು. ಈ ಪುಸ್ತಕಕ್ಕೆ







ಮುನ್ನುಡಿಯನ್ನು ಬರೆದಿರುವ ಸಿಐಟಿಯು ರಾಜ್ಯ ಉಪಾಧ್ಯಕ್ಷ ವಿಜೆಕೆ ನಾಯರ್ ಪುಸ್ತಕ ಪರಿಚಯಿಸಿದರು.

ಬುದ್ದ ಪ್ರಬುದ್ದ ನಾಟಕ ಪ್ರದರ್ಶನ:

ಎರಡನೇ ದಿನದ ರಾತ್ರಿ ಧಾರವಾಡ ಸಮುದಾಯ ತಂಡದ ಕಲಾವಿದರು ಅಭಿನಹಿಸಿರುವ, ಶ್ರೀ ಶೈಲಾಹುದ್ದಾರ್ ರಚಿಸಿರುವ ಹಾಗೂ ವಾಸುದೇವ್ ಬಂಗೇರಾ ನಿರ್ದೇಶಿಸಿದ 'ಬುದ್ದ ಪ್ರಬುದ್ದ' ನಾಟಕ ಪ್ರದರ್ಶನವು ಪ್ರೇಕ್ಷಕರ ಮನಗೆಲ್ಲುವಲ್ಲಿ ಯಶಸ್ವಿಯಾಯಿತು.

ನಿರ್ಣಯಗಳು ಅಂಗೀಕಾರ

ಸಮ್ಮೇಳನದಲ್ಲಿ ಬೆಂಗಳೂರಿನಲ್ಲಿ ನಡೆಯುವ ಅಖಿಲ ಭಾರತ ಸಮ್ಮೇಳನ ಯಶಸ್ವಿ ಮಾಡುವುದು, ಕನಿಷ್ಟವೇತನ, ಅಂಗನವಾಡಿ ನೌಕರರಿಗೆ ಉಪಧನ(ಗ್ರಾಚೂಟಿ) ಜಾರಿ, ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ, ಗ್ರಾಮಪಂಚಾಯತ್ ನೌಕರರ ಬೇಡಿಕೆಗಳು, ಕಟ್ಟಡ ಕಾರ್ಮಿಕರು, ಅಕ್ಷರ ದಾಸೋಹ, ಸಾರಿಗೆ ನೌಕರರು, ಮಹಿಳೆಯರು,ದಲಿತರ ಮೇಲಿನ ದೌರ್ಜನ್ಯಗಳ ವಿರುದ್ದ, ನವ ಉದಾರವಾದಿ ನೀತಿಗಳು ಹಾಗೂ ಕಾರ್ಮಿಕ ಕಾನೂನುಗಳ ವಿರುದ್ದ ಹಾಗೂ ಸೌಹಾರ್ದ ಕರ್ನಾಟಕಕ್ಕಾಗಿ ನಿರ್ಣಯಗಳನ್ನು ಕೈಗೊಂಡಿತು.

ಆಕರ್ಷಕ ಪಥ ಸಂಚಲನ–ಮೆರವಣಿಗೆ ಬಹಿರಂಗ ಸಭೆ:

ರಾಜ್ಯ ಸಮ್ಮೇಳನ ಕೊನೆ ದಿನವಾದ ನವೆಂಬರ್ 17 ರ ಮಧ್ಯಾನ್ನ ಕುಂದಾಪುರದ ಶಾಸ್ತ್ರೀ ವೃತ್ತದಿಂದ ಆಕರ್ಷಕ ಬ್ಯಾಂಡ್, ಕಹಳೆ, ತಾಳಮದ್ದಲೆ ಪ್ರದರ್ಶನದೊಂದಿಗೆ ಆರಂಭಗೊಂಡ ಕೆಂಪುಸ್ವಯಂ ಸೇವಕರು ಪಥ ಸಂಚಲನವು ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಜನಮನ ಸೆಳೆದು ಬಳಿಕ ಬಹಿರಂಗ ಸಭೆ ನಡೆದ ಕುಂದಾಪುರದ ನೆಹರು ಮೈದಾನ ತಲುಪಿತು ಮೆರವಣಿಗೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜಿಲ್ಲೆಯ ಉಡುಪಿ,ಕಾರ್ಕಳ,ಬ್ರಹ್ಮಾವರ, ಕಾಪು, ಬೈಂದೂರು ಮೊದಲಾದ ಪ್ರದೇಶಗಳಿಂದ ಕಟ್ಟಡ ನಿರ್ಮಾಣ ಕಾರ್ಮಿಕರು, ಬೀಡಿ, ಹೆಂಚು, ಅಂಗನವಾಡಿ, ಅಕ್ಷರದಾಸೋಹ, ಉದ್ಯೋಗಖಾತ್ರಿ ಹಾಗೂ ವಿವಿಧ ಕೈಗಾರಿಕೆಗಳು ಮತ್ತು ಮಧ್ಯಮ ವರ್ಗದ ನೌಕರರು ಭಾಗವಹಿಸಿದ್ದರು. ಬಹಿರಂಗ ಸಭೆಯಲ್ಲಿ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ತಪನ್ ಸೇನ್, ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷೀ ಸುಂದರಂ, ಅಧ್ಯಕ್ಷರಾದ ಎಸ್. ವರಲಕ್ಷ್ಮೀ, ಸ್ವಾಗತ ಸಮಿತಿ ಅಧ್ಯಕ್ಷರಾದ ಬಾಲಕೃಷ್ಣ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ಸುರೇಶ ಕಲ್ಲಾಗಾರ್ ಮಾತನಾಡಿದರು. ವೇದಿಕೆಯಲ್ಲಿ ಸಿಐಟಿಯು ಅಖಿಲ ಭಾರತ ಕಾರ್ಯದರ್ಶಿ ಕೆ. ಎನ್. ಉಮೇಶ್, ಜಿಲ್ಲಾ ಪದಾಧಿಕಾರಿಗಳಾದ ಕೆ. ಶಂಕರ್, ಹೆಚ್.ನರಸಿಂಹ,ವಿ ಚಂದ್ರಶೇಖರ್, ಶಶಿಧರ್ ಗೊಲ್ಲ, ಮಹಾಬಲ ವಡೇರ್ ಹೋಬಳಿ, ಬಲ್ಕೀಶ್, ಶೇಖರ್ ಬಂಗೇರಾ, ರಾಜೀವ ಪಡುಕೋಣೆ, ರೋನಾಲ್ಡ್ ರಾಜೇಶ್, ರಮೇಶ್ ಗುಲ್ವಾಡಿ, ಮಾಜಿ ಪುರಸಭೆ ಅಧ್ಯಕ್ಷರಾದ ವಿ,ನರಸಿಂಹ, ಉಪಾಧ್ಯಕ್ಷೆ ಗುಣವಂತೆ, ಮೋಹನ್, ಸಂತೋಷ ಹೆಮ್ಮಾಡಿ, ರಾಮುಕರ್ಕಡ ಮೊದಲಾದವರು ಉಪಸ್ಥಿತರಿದ್ದರು.

ಮನೆ ಮನೆಗೆ ತೆರಳಿ ವ್ಯಾಪಕ ಪ್ರಚಾರ:

ಸಮ್ಮೇಳನದ ಪ್ರಚಾರವನ್ನು ಜಿಲ್ಲೆಯ 10 ಸಾವಿರಕ್ಕೂ ಅಧಿಕ ಮನೆಗಳಿಗೆ ನೂರಾರು ಸಂಖ್ಯೆಯ ಕಾರ್ಯಕರ್ತರು ತೆರೆಳಿ ಕೇಂದ್ರ ರಾಜ್ಯ ಸರ್ಕಾರದ ಜನವಿರೋಧಿ, ಕಾರ್ಮಿಕ ವಿರೋಧಿ, ರೈತವಿರೋಧಿ ನೀತಿಗಳು ಹಾಗೂ ದುಡಿಯುವ ಜನರು ಸೇರಿ ಜನಸಾಮಾನ್ಯ ಜನರ ಮೇಲೆ ಆಗುತ್ತಿರುವ ದುಷ್ಪಾರಿಣಾಮಗಳು ಕುರಿತು ವ್ಯಾಪಕ ಪ್ರಚಾರ ನಡೆಸಿದ್ದಲ್ಲದೆ, ನಾರಯಣ ಗುರು ಚಿಂತನೆಗಳು ಹಾಗೂ ಕಾರ್ಮಿಕ ವರ್ಗ ಹಾಗೂ ಉಡುಪಿ ಜಿಲ್ಲೆಯ ಅಭಿವೃದ್ದಿ ಪ್ರಶ್ನೆಗಳು ಮತ್ತು ಸೌಹಾರ್ಧತೆ ಕುರಿತಾಗಿ ಬೈಂದೂರು ಹಾಗೂ ಉಡುಪಿಯಲ್ಲಿ ಸಮ್ಮೇಳನ ಪೂರ್ವದಲ್ಲಿ ವಿಚಾರ ಸಂಕಿರಣ ಆಯೋಜಿಸಲಾಗಿತ್ತು ಜತೆಗೆ ಸಮ್ಮೇಳನ ಯಶಸ್ವಿಗೆ ನಿಧಿ ಕೂಡ ಸಂಗ್ರಹಿಸಲಾಯಿತು. ಹೀಗಾಗಿ ಕುಂದಾಪುರ ಹಾಗೂ ಉಡುಪಿ ಜಿಲ್ಲೆಯಾದ್ಯಂತ ಸಿಐಟಿಯು ರಾಜ್ಯ ಸಮ್ಮೇಳನ ಕುರಿತು ಒಳ್ಳೆಯ ಅಭಿಪ್ರಾಯಗಳು ಸಾರ್ವಜನಿಕರಿಂದ ವ್ಯಕ್ತವಾದವು. ಇತ್ತೀಚಿನ ವರ್ಷಗಳಲ್ಲೇ ಕುಂದಾಪುರದಲ್ಲಿ ನಡೆದ ಅತ್ಯುತ್ತಮ ಮೆರವಣಿಗೆ ಇದಾಗಿದ್ದು ಜನರನ್ನು ಆಕರ್ಷಿಸಲು ಹಾಗೂ ಚಳವಳಿಯಲ್ಲಿರುವ ಹಾಗೂ ಸಂಘಗಳಿಂದ ಹೊರ ಹೋಗಿದ್ದ ನೂರಾರು ಕಾರ್ಯಕರ್ತರಿಗೂ ಹೊಸದೊಂದು ಸ್ಪೂರ್ತಿ ನೀಡುವಲ್ಲಿ ಯಶಸ್ವಿಯಾಯಿತು ಎನ್ನಲಾಗಿದೆ.



ನೂತನ ರಾಜ್ಯ ಪದಾಧಿಕಾರಿಗಳ ಆಯ್ಕೆ

15 ನೇ ರಾಜ್ಯ ಸಮ್ಮೇಳನವು ಈ ಕೆಳಕಂಡ 41 ಜನ ನೂತನ ರಾಜ್ಯ ಪದಾಧಿಕಾರಿಗಳನ್ನು ಆಯ್ಕೆ ಮಾಡಿತು.

ಅಧ್ಯಕ್ಷರಾಗಿ ಎಸ್. ವರಲಕ್ಷ್ಮಿ

ಉಪಾಧ್ಯಕ್ಷರಾಗಿ, ವಿಜೆಕೆ ನಾಯರ್, ಕೆ. ಶಂಕರ್, ಜೆ. ಬಾಲಕೃಷ್ಣ ಶೆಟ್ಟಿ, ಕೆ. ಪ್ರಕಾಶ್, ವಸಂತಾಚಾರಿ, ಹೆಚ್ .ಎನ್. ಗೋಪಾಲಗೌಡ, ಎನ್. ಪ್ರತಾಪ್ ಸಿಂಹ ಆರ್.ಎಸ್. ಬಸವರಾಜು, ಜಿ. ಜಯರಾಮು, ಶಾಂತಾ ಘಂಟೆ, ಹರೀಶ್ ನಾಯ್ಕ್, ಗೈಬು ಜೈನೇಖಾನ್, ತಿಲಕ್ ಗೌಡ, ಸತ್ಯಬಾಬು, ಬಾಲಾಜಿ ರಾವ್, ಮಂಜುನಾಥ್ ಹೆಚ್.ಎಸ್, ಕುಮಾರಿ

ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ

ಕಾರ್ಯದರ್ಶಿಗಳಾಗಿ, ಮಹಂತೇಶ್ ಕೆ, ಸೈಯದ್ ಮುಜೀಬ್, ಹೆಚ್.ಎಸ್. ಸುನಂದ, ಮಂಟನಗೌಡ, ಧರ್ಮೇಶ್, ಯಮುನಾ ಗಾಂವ್ಕರ್, ಮಾಲಿನಿ ಮೇಸ್ತಾ

ಮಹೇಶ್ ಪತ್ತಾರ್, ಸುನಿಲ್ ಕುಮಾರ್ ಬಜಾಲ್, ಬಿ.ಎನ್. ಮಂಜುನಾಥ್, ಬಿವಿ ರಾಘವೇಂದ್ರ, ನಿರುಪಾದಿ ಬೆನಕಲ್, ಮುನಿರಾಜು, ಸುರೇಶ್ ಕಲ್ಲಾಗರ, ಜಿ ಕಮಲಾ, ನರಸಿಂಹಮೂರ್ತಿ, ಮಂಜುನಾಥ ಎಲ್, ಖಜಾಂಚಿಯಾಗಿ ಪಿಕೆ ಪರಮೇಶ್ವರ. ಸರ್ವಾನುಮತದಿಂದ ಆಯ್ಕೆಯಾದರು.



ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ವಿಸ್ತರಣೆಗೆ ಆಗ್ರಹ: ಬಳ್ಳಾರಿಯಲ್ಲಿ ಎಸ್.ಸಿ. / ಎಸ್.ಟಿ ಮತ್ತು ಹಿಂದುಳಿದ ವರ್ಗಗಳ ಸಮಾವೇಶ

ಸಂವಿಧಾನದ ಆಶಯಕ್ಕೆ ತಕ್ಕಂತೆ ಸಮಾನತೆ ಸಿಗುವವರೆಗೆ ಮೀಸಲಾತಿ ಇರಬೇಕು: ಕಾಂತರಾಜ್



'ಇಷ್ಟು ವರ್ಷಗಳಾದರೂ ಕೂಡ ಮೀಸಲಾತಿ ಯಾಕೆ ಬೇಕು? ಎಂಬ ಮಾತಿದೆ, ಇನ್ನೂ ಎಷ್ಟು ವರ್ಷ ಮೀಸಲಾತಿ ಕೊಡುತ್ತಾರೆ? ಎಂದು ಪ್ರಶ್ನಿಸುತ್ತಾರೆ. ಸಂವಿಧಾನ ಬಯಸುವಂತೆ ಸಮಾಧಾನ, ಸಮಾನತೆ ಬಂದಿಲ್ಲ. ಸಂವಿಧಾನದ ಆಶಯದಂತೆ ಸಮಾನತೆ ನಿರ್ಮಾಣವಾಗುವವರೆಗೆ ಮೀಸಲಾತಿ ಜಾರಿಯಲ್ಲಿರಬೇಕು' ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಮಾಜಿ ಅಧ್ಯಕ್ಷ ಹೆಚ್.ಕೆ.ಕಾಂತರಾಜ್ ಹೇಳಿದರು.

ಬಳ್ಳಾರಿ ನಗರದ ಬಿಡಿಎಎ ಸಭಾಂಗಣದಲ್ಲಿ ಸೋಮವಾರ ಬೆಳಿಗ್ಗೆ ಮೀಸಲಾತಿ ಹೆಚ್ಚಳದ ಜಾರಿಗಾಗಿ ಮತ್ತು ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿ ವಿಸ್ತರಣೆಗಾಗಿ ಹೋರಾಟ ಸಮಿತಿಯು ಆಯೋಜಿಸಿದ್ದ 'ಮೀಸಲಾತಿ ಹೆಚ್ಚಳ ಅನುಷ್ಠಾನ; ಸಮುದಾಯಗಳ ಮುಂದಿನ ದಾರಿ ಏನು?' ಎಂಬ ವಿಷಯದಡಿ ರಾಜ್ಯ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಸರ್ಕಾರದಿಂದ ವರ ಸಿಕ್ಕಿದೆ. ಫಲ ಇನ್ನೂ ಕೈಗೆ ಬಂದಿಲ್ಲ, ಬರಬೇಕು. ಎಸ್ಸಿ ಎಸ್ಟಿ ಮೀಸಲಾತಿ ಹೆಚ್ಚಳ ಆಗಿದೆ. ಅದು ಇನ್ನೂ ಕೈಗೆ ಸಿಗಬೇಕು. ಹಲವು ವರ್ಷಗಳ ಹೋರಾಟದ ನಂತರ ಎಸ್ಸಿ, ಎಸ್ಟಿ ಮೀಸಲಾತಿ ಹೆಚ್ಚಾಗಿದೆ. ಸರ್ಕಾರದ ತೀರ್ಮಾನಕ್ಕೆ ಹೃದಯಪೂರ್ವಕ ಸ್ವಾಗತ' ಎಂದ ಅವರು, 'ಆದರೆ ಇದು ಜಾರಿಗೆ ಬರಬೇಕಾಗಿದೆ. ಆದಷ್ಟು ಬೇಗ ಇದರ ಫಲ ನಮಗೆ ಸಿಗಬೇಕಾಗಿದೆ. ಸರ್ಕಾರಕ್ಕೆ ಈ ವಿಚಾರದಲ್ಲಿ ನಾವು ಸಹಕಾರ ನೀಡುತ್ತೇವೆ' ಎಂದರು.

'ಕಾನೂನು ಸೇರಿದಂತೆ ಹಲವು ತಾಂತ್ರಿಕ ಸಮಸ್ಯೆಗಳು ಈಗಲೂ ಇವೆ. ಅವನ್ನು ಬಗೆಹರಿಸಿಕೊಳ್ಳಬೇಕು' ಎಂದ ಕಾಂತರಾಜ್, 'ಮಿಲ್ಲರ್ ಆಯೋಗದಿಂದ ಸಂವಿಧಾನ ರಚನೆಗೂ ಮೊದಲು ಮೀಸಲಾತಿ ಇತ್ತು. ಅದಾದ ನಂತರ ಸಂವಿಧಾನದ ಮೂಲಕ ಸಮಗ್ರವಾಗಿ ಮೀಸಲಾತಿ ದೊರಕಿತು' ಎಂದರು.

'ನಮಗೆ ಸಂವಿಧಾನ ಬಂದ 42 ವರ್ಷಗಳ ನಂತರ ಮೀಸಲಾತಿ ಒಂದು ಹಂತದಲ್ಲಿ ಸಿಕ್ಕಿತು. 1998ರಲ್ಲಿ ಹಿಂದುಳಿದವರಿಗೆ ಮೀಸಲಾತಿ ಸಿಕ್ಕಿತು' ಎಂದು ಹೇಳಿದ ಅವರು, 'ಮೀಸಲಾತಿಯನ್ನು ಎಸ್ಸಿ, ಎಸ್ಟಿ, ಹಿಂದುಳಿದವರಿಗೆ, ಅಲ್ಪಸಂಖ್ಯಾತರಿಗೆ ಎಷ್ಟು ಪ್ರಮಾಣದಲ್ಲಿ ಸಿಕ್ಕಿದೆ? ಎಂಬುದು ಚರ್ಚಾರ್ಹ ಸಂಗತಿ. 500 ಜನ ಗುಮಾಸ್ತರ ಬದಲು ಒಬ್ಬ ಐಎಎಸ್ ಅಧಿಕಾರಿ ಕೊಡಿ ಎಂದು ಬಾಬಾಸಾಹೇಬರು ಹೇಳಿದ್ದರು. ಹೀಗಾಗಿ ನಿರ್ಣಯ ಕೈಗೊಳ್ಳುವ ಹುದ್ದೆಯಲ್ಲಿ ಅಹಿಂದ ವರ್ಗದ ಜನರು ಇರಬೇಕು' ಎಂದರು.

'ಸಮಾಜದಲ್ಲಿ ಜಾತಿ ಮತ್ತು ಕುಲಕಸುಬು ಯಾವ ಪ್ರಯತ್ನ ಇಲ್ಲದೇ ಸಿಗುತ್ತದೆ. ಕುಲಕಸುಬು ನಂಬಿ ಬಂದವರು ಯಾರೂ ಆಗರ್ಭ ಶ್ರೀಮಂತರಲ್ಲ. ಇವರ ಮನೆಯಲ್ಲಿ ಉನ್ನತಾಧಿಕಾರಿಗಳೂ ಇಲ್ಲ.. ಕುಲಕಸುಬು ನಂಬಿದವರು ಗಂಜಿ ವ್ಯವಸ್ಥೆ ಮಾಡಿಕೊಂಡರೆ ಸಾಕಾಗಿರುತ್ತದೆ. ಹೀಗಾಗಿ ಮೀಸಲಾತಿ ಸಮಾಜಕ್ಕೆ ಇನ್ನೂ ಅಗತ್ಯ ಇದೆ' ಎಂದ ಅವರು, 'ಮೀಸಲಾತಿ ಕೊಟ್ಟರೂ ಕೂಡ ಜನಸಂಖ್ಯೆಗೆ ಅನುಗುಣವಾಗಿ, ಶಿಕ್ಷಣ ಮತ್ತು ಉದ್ಯೋಗ ಸಮಪ್ರಮಾಣದಲ್ಲಿ ಸಿಕ್ಕಿಲ್ಲ, ಹೀಗಾಗಿ ಸರ್ಕಾರ ಮೀಸಲಾತಿ ಹೆಚ್ಚಿಸಿದೆ ಅಷ್ಟೇ. ಇದ್ದ ಮೀಸಲಾತಿ ತಕ್ಕಂತೆ ಅವಕಾಶಗಳು ಸಿಕ್ಕಿಲ್ಲ. ಉನ್ನತ ಶಿಕ್ಷಣದ ಸೀಟುಗಳು ಎಸ್ಸಿಗಳಿಗೆ ಶೇ.13ಕ್ಕಿಂತ ಹೆಚ್ಚು ಸಿಕ್ಕಿಲ್ಲ, ಎಸ್ಟಿ ಜನರಿಗೆ ಶೇ.7ಕ್ಕಿಂತ ಹೆಚ್ಚು ಸಿಕ್ಕಿಲ್ಲ. ಹಿಂದುಳಿದವರಿಗೆ ಶೇ.13 ಕ್ಕಿಂತ ಹೆಚ್ಚು ಸಿಕ್ಕಿಲ್ಲ, ಮೀಸಲಾತಿ ಇಲ್ಲದ ಸಾಮಾನ್ಯ ವರ್ಗದ ಶೇ.50 ರ ಅಡಿ ಮೀಸಲಾತಿ ಪಡೆದವರು ಉನ್ನತ ಹುದ್ದೆಗಳಲ್ಲಿ ಶೇ.60–70 ಜನರಿದ್ದಾರೆ' ಎಂದರು.

'ಮೀಸಲಾತಿ ಇದ್ದರೂ ಎಸ್ಸಿ, ಎಸ್ಟಿ ಹಿಂದುಳಿದವರು ನಿರೀಕ್ಷಿತ ಪ್ರಮಾಣದಲ್ಲಿ ಉನ್ನತ ಹುದ್ದೆಗಳಲ್ಲಿ ಇಲ್ಲ, ಸಮಾನತೆಗಾಗಿ ಮೀಸಲಾತಿ ನೀಡಲಾಗಿದೆ. ಸಾಮಾಜಿಕ ನ್ಯಾಯ ಎಂಬುದು ವಿಶಾಲ ವ್ಯಾಪ್ತಿ ಹೊಂದಿದೆ. ಎಲ್ಲ ರೀತಿಯ ಸಮಾನತೆ, ಸಾಮಾಜಿಕ ನ್ಯಾಯಕ್ಕೆ ದಾರಿ' ಎಂದರು.

'ಶೇ.30–40 ರಷ್ಟು ಹೊರಗುತ್ತಿಗೆ ಉದ್ಯೋಗಿಗಳಿದ್ದಾರೆ. ಈ ಎಲ್ಲ ಹುದ್ದೆಗಳನ್ನು ಭರ್ತಿ ಮಾಡಿದ್ದರೆ ಅವಕಾಶ ಹೆಚ್ಚು ಜನರಿಗೆ ಸಿಗುತ್ತಿದ್ದವು, ಹೀಗಾಗಿ ನಮ್ಮ ಆದ್ಯತೆ ಮೇರೆಗೆ ನಮ್ಮ ಚಿಂತನೆ ಹೋರಾಟ ನಡೆಯಬೇಕಿದೆ' ಎಂದು ಕಾಂತರಾಜ್ ಹೇಳಿದರು.

'ಶೇ.50 ದಾಟಿ ಮೀಸಲಾತಿ ನೀಡಬಾರದೆಂದು ಸುಪ್ರೀಂ ಹೇಳಿದೆ, ರಾಜ್ಯದಲ್ಲಿ ಹೆಚ್ಚಿಸಲಾಗಿರುವ ಮೀಸಲಾತಿಯಿಂದಾಗಿ ಈ ಮಿತಿ ದಾಟಿದೆ. ಈ ಬಗ್ಗೆ ಸರ್ಕಾರ ಸ್ಪಷ್ಟನೆ ನೀಡಬೇಕು' ಎಂದ ಅವರು, ಶೇ.50 ಮೀಸಲಾತಿ ಮಿತಿಯನ್ನು ಮರುಪರಿಶೀಲನೆ ಮಾಡುವ ಕೆಲಸವನ್ನು ರಾಜ್ಯ, ಕೇಂದ್ರ ಸರ್ಕಾರಗಳು ಮಾಡಬೇಕು ಅಥವಾ ಸಂವಿಧಾನದ ಮೂಲತತ್ವಕ್ಕೆ ಧಕ್ಕೆಯಾಗದ ಹಾಗೆ ಕಾನೂನು ಮಾಡಬೇಕು. ಈ ನಿಟ್ಟಿನಲ್ಲಿ ನಾವು ಸರ್ಕಾರಕ್ಕೆ ಸಹಕಾರ ನೀಡಬೇಕೆಂಬುದು ನನ್ನ ಅಭಿಪ್ರಾಯ' ಎಂದರು.

'ಮೀಸಲಾತಿ ಇರದ ಕ್ಷೇತ್ರಗಳು ಅನೇಕ ಇವೆ, ಖಾಸಗಿ ಕ್ಷೇತ್ರ ಪ್ರಮುಖವಾಗಿದೆ. ಈ ಕ್ಷೇತ್ರದಲ್ಲಿ ಮೀಸಲಾತಿ ನೀಡಬೇಕೆಂಬುದು ನಮ್ಮ ಹಳೆಯ ಬೇಡಿಕೆಯಾಗಿದೆ' ಎಂದು ಹೇಳಿದ ಕಾಂತರಾಜ್, 'ಮೀಸಲಾತಿ ಹೆಚ್ಚಳ ಮಾಡಿದರೆ ಸಾಲದು. ಅದು ಸಂಬಂಧಿಸಿದ ಸಮುದಾಯಗಳಿಗೆ ತಲುಪಬೇಕು. ನೂರಕ್ಕೆ 14 ಜನ ಮಕ್ಕಳು ಶಾಲೆಗಳಿಂದ ಡ್ರಾಪ್ ಔಟ್ ಆಗುತ್ತಿದ್ದಾರೆ. ಅಂತಹ ಸ್ಥಿತಿ ಇದೆ' ಎಂದರು.

'ಎಸ್ಸಿ, ಎಸ್ಟಿ ಹಿಂದುಳಿದ ಸಮುದಾಯದ ಜನರ ಸಾಮಾಜಿಕ ಸ್ಥಿತಿಗತಿ ಆಧರಿಸಿ ಮೀಸಲಾತಿ ನೀಡಬೇಕು, ರಾಜ್ಯದ ಕೊಳಚೆ ಪ್ರದೇಶಗಳಲ್ಲಿ ಶೇ.70ರಷ್ಟು ಇರುವುದು ಎಸ್ಸಿ ಸಮುದಾಯದ ಜನ ಎಂಬುದನ್ನು ಗಮನಿಸಬೇಕು' ಎಂದ ಅವರು, 'ಒಟ್ಟು ಮೀಸಲಾತಿಯನ್ನು ಶೇ.60–70 ನೀಡಿದರೆ ತಪ್ಪಿಲ್ಲ ಎಂಬುದು ನನ್ನ ಅಭಿಪ್ರಾಯ. ಸಮಾಜ ನಮ್ಮನ್ನು ಸಮಾನವಾಗಿ ನೋಡುತ್ತಿಲ್ಲ. ಹೀಗಾಗಿ ಮೀಸಲಾತಿ ನೀಡಲೇಬೇಕು' ಎಂದರು.

'ಎಸ್ಸಿ, ಎಸ್ಟಿ ಸಮುದಾಯಗಳ ಜೊತೆ ಹೊಂದಿಕೊಂಡು ಹೋಗಲು ಹಿಂದುಳಿದವರು ವೈಚಾರಿಕತೆ ಬೆಳೆಸಿಕೊಳ್ಳಬೇಕು. ಈ ಸಂದರ್ಭ ಹಿಂದುಳಿದವರು ಕೂಡ ಹಿಂದೆ ಉಳಿಯುತ್ತಿದ್ದಾರೆ. ರಾಜ್ಯ–ಕೇಂದ್ರ ಸರ್ಕಾರಗಳಿಂದ ಸಿಗುವ ಸವಲತ್ತಿಗಾಗಿ ಹಿಂದುಳಿದವರು ಹೋರಾಟ ಮಾಡಬೇಕಿದೆ' ಎಂದ ಅವರು, 'ಸಂವಿಧಾನದ ಮೂಲಕ ನೀಡಲಾದ ಮೀಸಲಾತಿ ರಾಜಕೀಯ ಕ್ಷೇತ್ರಕ್ಕೆ ಮಾತ್ರ ಸೀಮಿತಗೊಳಿಸಿ 10 ವರ್ಷಗಳಿಗೆ ಮಾತ್ರ ನೀಡಬೇಕೆಂದು ಬಾಬಾಸಾಹೇಬರು ಹೇಳಿದ್ದರು. ವಿನಃ ಬೇರೆ ಇತರ ಕ್ಷೇತ್ರಗಳ ಮೀಸಲಾತಿ ಬಗ್ಗೆ 10 ವರ್ಷಗಳ ಮಿತಿ ಹೇಳಿಲ್ಲ. ಹೀಗಾಗಿ ಸಮಾಜದಲ್ಲಿ ಸಮಾನತೆ ಬರುವವರೆಗೆ ಮೀಸಲಾತಿ ಕೊಡಲೇಬೇಕು' ಎಂದು ಕಾಂತರಾಜ್ ಹೇಳಿದರು.

ಪ್ರಾಸ್ತಾವಿಕವಾಗಿ ದಲಿತ ಮುಖಂಡ ಎ. ಮಾನಯ್ಯ ಮಾತನಾಡಿ 'ಮಂಡಲ್ ಆಯೋಗದ ವರದಿಯನ್ನು ವಿರೋಧ ಮಾಡಿದವರೇ ಇಂದು ನಮ್ಮನ್ನು ಆಳುತ್ತಿದ್ದಾರೆ. ರಾಜ್ಯ ಕೇಂದ್ರ ಸರ್ಕಾರಗಳು ಮಾಡುತ್ತಿರುವ ಸರ್ಕಾರಿ ಸಂಸ್ಥೆಗಳ ಖಾಸಗೀಕರಣವು ಅಹಿಂದ ವರ್ಗಗಳಿಗೆ ಮೀಸಲಾತಿ ಹಕ್ಕು ಸಿಗದಂತೆ ಮತ್ತು ಅಭಿವೃದ್ಧಿಯಾಗದಂತೆ ಮಾಡುತ್ತಿವೆ' ಎಂದು ಹೇಳಿದರು.

'ಸರ್ಕಾರಿ ಸಂಸ್ಥೆಯಲ್ಲಿ ಉದ್ಯೋಗವಕಾಶ ಸಿಗುತ್ತದೆ ಎಂದೇ ನಾವು ನಮ್ಮ ಮಕ್ಕಳು ಶಿಕ್ಷಣ ಪಡೆಯುತ್ತೇವೆ. ಆದರೆ ಸರ್ಕಾರಿ ಸಂಸ್ಥೆಗಳನ್ನು ಖಾಸಗೀಕರಣ ಮಾಡಲಾಗುತ್ತಿದೆ' ಎಂದು ಹೇಳಿದ ಅವರು 'ಸರ್ಕಾರ ಎಲ್ಲ ಕೆಲಸಗಳನ್ನೂ ಹೊರ ಗುತ್ತಿಗೆ ಮೂಲಕ ತುಂಬುತ್ತಿದೆ' ಎಂದರು.

'ಮೂಲಭೂತ ಸಮಸ್ಯೆಗಳನ್ನು ಬದಿಗೊತ್ತಿ ಮೊಟ್ಟೆ ತಿನ್ನಬೇಡಿ, ಬಾಳೆ ಹಣ್ಣು ತಿನ್ನಿ ಎನ್ನುವವರು ಇಂದು ನಮ್ಮನ್ನು ಆಳುತ್ತಿದ್ದಾರೆ. ಮೂಲ ಸಮಸ್ಯೆಗಳನ್ನು ಮರೆ ಮಾಡುವ ಹುನ್ನಾರ ನಡೆದಿದೆ' ಎಂದರು.

'ಎಲ್ಲ ಅವಕಾಶಗಳಿಂದ ವಂಚಿತ ಸಮುದಾಯಗಳು ನಮ್ಮವು. ನಾವು ಇಂದು ಹೋರಾಟ ಮಾಡಬೇಕಾಗಿದೆ. ನಮ್ಮನ್ನು ರಕ್ಷಿಸುವವರೊಂದಿಗೆ ನಾವು ನಿಲ್ಲಬೇಕು' ಎಂದ ಅವರು, 'ಸಂಘ ಪರಿವಾರಕ್ಕೆ ಎರಡು ನಾಲಿಗೆ ಇದೆ. ಇರುವ ಇತಿಹಾಸ ಅಳಿಸುವುದು, ಇಲ್ಲದಿರುವ ಇತಿಹಾಸ ಹುಟ್ಟು ಹಾಕುವಂತೆ ಮಾಡುವುದು ಎರಡು ನಾಲಿಗೆ ಇವೆ' ಎಂದರು.

'ಎಸ್ಸಿ ಎಸ್ಟಿ ಮೀಸಲಾತಿ ನೀಡಿದ್ದೇವೆ ಎಂದು ಸರ್ಕಾರ ಹಾಗೂ ಸಚಿವರು ಹೇಳುತ್ತಿದ್ದಾರೆ. ಆದರೆ ಅದು ಇನ್ನೂ ಜಾರಿಗೆ ಆಗಬೇಕಿದೆ. ಚುನಾವಣೆ ಇರುವುದರಿಂದ ಇದು ಜಾತ್ರೆಯೂ ಆಗಬಹುದು' ಎಂದರು.

ಆಶಯ ನುಡಿಗಳನ್ನಾಡಿದ ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ರಾಜ್ಯ ಸಹಸಂಚಾಲಕ ಡಾ. ಎಸ್.ವೈ.ಗುರುಶಾಂತ್ ಮಾತನಾಡಿ 'ಎಸ್ಸಿ ಎಸ್ಟಿ ಮೀಸಲಾತಿ ಹೆಚ್ಚಳಕ್ಕೆ ಸಂಬಂಧಿಸಿ ರಾಜ್ಯ ಸರ್ಕಾರ ಸುಗ್ರೀವಾಜ್ಞೆಯನ್ನು ಹೊರಡಿಸಿದೆ. ಆದರೆ ಅದಷ್ಟೇ ಸಾಕಾಗುವುದಿಲ್ಲ ಎಂದು ಎಲ್ಲರಿಗೂ ತಿಳಿದಿದೆ. ವಿಧಾನಸಭೆಯಲ್ಲಿ ಅನುಮೋದನೆ ಸಿಕ್ಕು ಕೇಂದ್ರ ಸರ್ಕಾರಕ್ಕೆ ಕಳಿಸುವ ಕೆಲಸ ಬಾಕಿ ಇದೆ' ಎಂದರು.

'ಸರ್ಕಾರ ಮೀಸಲಾತಿ ಹೆಚ್ಚಳಕ್ಕೆ ಒಪ್ಪಿಕೊಂಡರೂ ಇದರ ಜಾರಿಗೆ ಹಂತ ಹಂತದಲ್ಲಿ ತೊಡಕು ಇವೆ. ಎಸ್ಸಿ ಎಸ್ಟಿ ಮೀಸಲಾತಿ ಹೆಚ್ಚಳ ಪಡೆಯಲು 40 ವರ್ಷದ ಹೋರಾಟ ಸಂದಿದೆ. ಇನ್ನು ಇದನ್ನು ಜಾರಿಗೊಳಿಸಬೇಕಾದರೆ ಇನ್ನೂ ಸಮಯ ಹಿಡಿಯಬಹುದು, ವಿಳಂಬ ಮಾಡಬಹುದು. ಇದರಿಂದ ವಂಚಿತ ಸಮುದಾಯಗಳಿಗೆ ಮತ್ತಷ್ಟು ವಂಚನೆ ಆಗಬಾರದು. ಆದ್ದರಿಂದ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತುರ್ತಾಗಿ ತೆಗೆದುಕೊಳ್ಳಬೇಕು' ಎಂದು ಸರ್ಕಾರವನ್ನು ಅಗ್ರಹಿಸಿದರು.

ಸಮುದಾಯಗಳು ಹಾಗೂ ಪ್ರಗತಿಪರ ಸಂಘಟನೆಗಳ ಹೋರಾಟದ ಫಲವೇ ಮೀಸಲಾತಿ ಹೆಚ್ಚಳ. ವಾಲ್ಮೀಕಿಶ್ರೀ ನಿರಂತರ ಸತ್ಯಾಗ್ರಹ ಭಾರಿ ಒತ್ತಡ ಸೃಷ್ಟಿಸಿತು. ಆದರೆ ಸಮುದಾಯಗಳ ಹಕ್ಕುಗಳ ವಿಳಂಬ ಮಾನ್ಯತೆಯನ್ನೇ ಇಂದು ಕೆಲವರು ರಾಜಕೀಯವಾಗಿ ದುರ್ಲಾಭ ಮಾಡಿಕೊಳ್ಳುವ ಪ್ರಯತ್ನ ನಡೆಸಿದ್ದಾರೆ' ಎಂದು ಹೇಳಿದ ಗುರುಶಾಂತ್, 'ಮೀಸಲಾತಿಯ ಫಲ ಸಂಪೂರ್ಣವಾಗಿ ಪಡೆಯಬೇಕಾದರೆ ಖಾಸಗಿ ಕ್ಷೇತ್ರಕ್ಕೂ ಮೀಸಲಾತಿ ವಿಸ್ತರಣೆ ಆಗಬೇಕಿದೆ. ಉದ್ಯೋಗದ ಅವಕಾಶಗಳು ಈಗ ಸರ್ಕಾರಕ್ಕಿಂತ ಖಾಸಗಿ ಕ್ಷೇತ್ರದಲ್ಲಿ ಹೆಚ್ಚು ಇವೆ' ಎಂದರು.

'ಮೂವತ್ತು ವರ್ಷಗಳಿಂದ ಶಿಕ್ಷಣ ಮತ್ತು ಔದ್ಯೋಗಿಕ ಕ್ಷೇತ್ರ ಕ್ಷೇತ್ರ ಬೆಳೆದಿದೆ, ಉದಾರೀಕರಣದಿಂದಾಗಿ ಸಾರ್ವಜನಿಕ ಕ್ಷೇತ್ರ ನಾಶಗೊಂಡು ಖಾಸಗಿ ಸಂಸ್ಥೆಗಳು ಅಪಾರವಾಗಿ ಬೆಳೆದಿವೆ. ಅಲ್ಲೂ ಮೀಸಲಾತಿಯನ್ನು ವಿಸ್ತರಿಸಬೇಕಿದೆ. ಅಲ್ಲೂ ಸಾಮಾಜಿಕ ನ್ಯಾಯ ಸಿಗಬೇಕಿದೆ. ಈ ನಿಟ್ಟಿನಲ್ಲಿ ಚಿಂತನೆ, ಹೋರಾಟ ಆರಂಭಿಸಬೇಕಿದೆ' ಎಂದ ಅವರು, 'ಎಸ್.ಸಿ. ಮತ್ತು ಎಸ್.ಟಿ. ವ್ಯಾಪ್ತಿಯಲ್ಲಿ ಬರುವ ಈ ಸಮುದಾಯಗಳ ಶೇ.82ರಷ್ಟು ಜನರಿಗೆ ಭೂಮಿ ಇಲ್ಲ, ವಸತಿ ಇಲ್ಲ ಶಿಕ್ಷಣದಲ್ಲೂ ಹೆಚ್ಚಿನ ಪ್ರಗತಿ ಇಲ್ಲ ಮೇಲಾಗಿ ಸ್ಪರ್ಧಾತ್ಮಕತೆಗೆ ತಲುಪಲು ಅಸಾಧ್ಯವಾದ ಪರಿಸ್ಥಿತಿ ಇದೆ' ಎಂದರು.

'ನಮ್ಮ ಸಮಾಜದಲ್ಲಿ ಮೇಲು ಕೀಳು ಭಾವನೆ ಹುಟ್ಟು ಹಾಕಲಾಗಿದೆ. ಒಬ್ಬರನ್ನು ಇನ್ನೊಬ್ಬರ ವಿರುದ್ಧ ಎತ್ತಿ ಕಟ್ಟುವ ಪ್ರಯತ್ನ ನಡೆದಿದೆ. ಈ ಎಲ್ಲ ಸಮುದಾಯಗಳು ಒಂದಾಗಿ ತಮ್ಮ ಹಕ್ಕುಗಳಿಗಾಗಿ ಹೋರಾಡಬೇಕಿದೆ' ಎಂದರು.

ಮೇಲ್ಮಟ್ಟದ ಉದ್ಯೋಗಗಳು ಮೇಲ್ಮಟ್ಟದ ವರ್ಗದವರಿಗೆ ಸಿಕ್ಕರೆ ಕೆಳ ಮಟ್ಟದ ಉದ್ಯೋಗಗಳು ಕೆಳವರ್ಗದವರಿಗೆ ಮಾತ್ರ ಸಿಗುತ್ತಿವೆ. ಇದು ಬದಲಾಗಬೇಕಿದೆ' ಎಂದು ಗುರುಶಾಂತ್ ಹೇಳಿದರು.

'ಈ ಸಮಾವೇಶದಲ್ಲಿ ಮುಂದಿನ ಹಾದಿ ಏನು ಎನ್ನುವುದರ ಕುರಿತು ಚರ್ಚಿಸಿ ಕ್ರಿಯಾಶೀಲ ಕಾರ್ಯಕ್ರಮವನ್ನು ರೂಪಿಸಬೇಕಿದೆ. ಇದು ಮುಖ್ಯ ಉದ್ದೇಶ' ಎಂದ ಅವರು 'ಎಲ್ಲಾ ಸಂಘಟನೆಗಳು ಒಗ್ಗೂಡಿ ಈ ಸಮಾವೇಶವನ್ನು ವ್ಯವಸ್ಥೆಗೊಳಿಸಿ, ಒಂದಾಗಿ ಹೋರಾಡುವ ಸಂಕಲ್ಪ ಕೈಗೊಂಡಿರುವುದು ಅಭಿನಂದನೀಯ. ಈ ಒಗ್ಗಟ್ಟನ್ನು ಸದಾ ಕಾಪಾಡಿಕೊಳ್ಳಬೇಕು' ಎಂದು ಮನವಿ ಮಾಡಿದರು.

ವಿಷಯ ಮಂಡನೆ ಮಾಡಿದ ಹಂಪಿ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಪ್ರೊ. ಟಿ. ಆರ್.ಚಂದ್ರಶೇಖರ್ ರವರು 'ಮೀಸಲಾತಿಗೂ ಆರ್ಥಿಕ ವಿಚಾರಕ್ಕೂ ಸಂಬಂಧವಿಲ್ಲ, ಆರ್ಥಿಕ ಸ್ಥಿತಿ ಗತಿಯ ಹಿನ್ನೆಲೆಯಲ್ಲಿಯೇ ಮೀಸಲಾತಿಯನ್ನು ತೀರ್ಮಾನಿಸಲಾಗದು. ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಿಂದುಳಿದವರಿಗೆ ನೀಡುವ ಸೌಲಭ್ಯ ಮೀಸಲಾತಿ' ಎಂದರು.

ಬಡತನವನ್ನು ಗುರುತಿಸಬೇಕಾದರೆ ಶೈಕ್ಷಣಿಕ ಹಾಗೂ ಸಾಮಾಜಿಕ ಸಮಸ್ಯೆಗಳ ಆಧಾರದಲ್ಲಿ ಅಧ್ಯಯನ ಮಾಡುತ್ತೇವೆ, ದಲಿತ ಮತ್ತು ಆದಿವಾಸಿ ಸಮುದಾಯಗಳಲ್ಲಿ ಶೈಕ್ಷಣಿಕ, ಸಾಮಾಜಿಕ ಇನ್ನಿತರ ಸಮಸ್ಯೆಗಳಿವೆ, ಈ ಸಮುದಾಯಗಳು ಒಟ್ಟು ಜನಸಂಖ್ಯೆಯಷ್ಟು ಸಾಕ್ಷರತೆಯನ್ನು ಸಾಧಿಸಲು ಸಾಧ್ಯ ಆಗಿಲ್ಲ. ಈ ಸಮಾಜ ಶತಮಾನಗಳ ಕಾಲ ಆದಿವಾಸಿ, ದಲಿತರನ್ನು ಅಕ್ಷರ ಕಲಿಯುವ ಹಕ್ಕಿನಿಂದ ವಂಚಿಸಿತ್ತು, ಹೀಗಾಗಿ ಸಾಮಾಜಿಕವಾಗಿ ಹಿಂದುಳಿದರು. ಅಸ್ಪೃಶ್ಯತೆ, ಅಸಮಾನತೆ ಇದ್ದಿದ್ದರಿಂದ ಸಮುದಾಯಗಳು ಅಭಿವೃದ್ಧಿಯನ್ನು ಕಾಣಲಿಲ್ಲ. ಆದ್ದರಿಂದ ಅಂತಹ ಸಮುದಾಯಗಳಿಗೆ ಮೀಸಲಾತಿ ಅಗತ್ಯವಿದೆ' ಎಂದರು.

'ದೇವಸ್ಥಾನದ ಚಪ್ಪಲಿ ಕಾಯುವ ಟೆಂಡರ್ ದಲಿತರಿಗೆ ನೀಡುವ ಕೆಟ್ಟ ಪರಿಪಾಠ ಈ ಸಮಾಜದಲ್ಲಿ ಇದೆ. ಇಂತಹ ಮನಸ್ಥಿತಿ ಇರುವವರೆಗೆ ಮೀಸಲಾತಿ ಪುಟ 12 ಕ್ಕೆ

ನೋಟುರದ್ದತಿಯ 6ನೇ ವಾರ್ಷಿಕದಂದು ನಗದಿನ 72% ಹೆಚ್ಚಳವೂ, ಸುಪ್ರಿಂ ಕೋರ್ಟಿನ ಮುಜುಗರವೂ

ಚಲಾವಣೆಯಲ್ಲಿರುವ ಕರೆನ್ಸಿ ನೋಟುಗಳ ಮತ್ತು ನಾಣ್ಯಗಳ ಮೊತ್ತ ಈಗ 30.88 ಲಕ್ಷ ಕೋಟಿ ರೂ. ಇದು ನವಂಬರ್ 8, 2016ರಂದು ಪ್ರಧಾನಿಗಳು ರಾತ್ರಿ 8ಗಂಟೆಗೆ ನೋಟುರದ್ಧತಿಯ ಪ್ರಕಟಣೆ ಮಾಡುವ ವೇಳೆಗೆ ಚಲಾವಣೆಯಲ್ಲಿದ್ದ ಮೊತ್ತಕ್ಕಿಂತ 71.84% ಹೆಚ್ಚು. ಆಗ ಚಲಾವಣೆಯಲ್ಲಿದ್ದ ನಗದಿನ ಒಟ್ಟು ಮೊತ್ತ 17.7 ಲಕ್ಷ ಕೋಟಿ ರೂ. ಇತ್ತು.

ನೋಟುರದ್ಧತಿಯ 6ನೇ ವಾರ್ಷಿಕದಂದು ಎಲ್ಲರ ಗಮನ ಸೆಳೆದಿರುವ ಸುದ್ದಿ ಇದು. 6 ವರ್ಷಗಳ ಹಿಂದೆ ಪ್ರಧಾನಿಗಳು ಇದರ ಉದ್ದೇಶ ಭಾರತವನ್ನು "ಕಡಿಮೆ ನಗದು" ಅರ್ಥವ್ಯವಸ್ಥೆಯಾಗಿ ಮಾಡುವುದು, ಈ ಮೂಲಕ ಕಪ್ಪು ಹಣದ ಮತ್ತು ಖೋಟಾ ನೋಟುಗಳ ಪ್ರಭಾವ ಇಲ್ಲವಾಗುತ್ತದೆ ಎಂದಿದ್ದರು.

ಇದರ ಮರುದಿನವೇ ಬಂದ ಇನ್ನೊಂದು ಸುದ್ದಿ–ಸರಕಾರದ ಈ ಕ್ರಮಕ್ಕೆ ಬಂದ ಸವಾಲುಗಳನ್ನು ಕುರಿತ 50ಕ್ಕೂ ಹೆಚ್ಚು ಅರ್ಜಿಗಳ ವಿಚಾರಣೆಯನ್ನು ಸುಮಾರು 6 ವರ್ಷಗಳ ನಂತರ ಕೈಗೆತ್ತಿಕೊಂಡ ಸುಪ್ರಿಂ ಕೋರ್ಟಿನ ಸಂವಿಧಾನ ಪೀಠ ಈ ಕುರಿತು ಅಫಿಡವಿಟ್‌ನ್ನು ಸಲ್ಲಿಸಬೇಕು ಎಂದು ಅಕ್ಟೋಬರ್ 12ರಂದು ನೀಡಿದ ಆದೇಶವನ್ನು ಸರಕಾರ ಪಾಲಿಸಿಲ್ಲ. ನವಂಬರ್ 9ರಂದು ವಿಚಾರಣೆ ಆರಂಭವಾದಾಗ ಅಟಾರ್ನಿ–ಜನರಲ್ ಅವರು ಕ್ಷಮೆ ಯಾಚಿಸುತ್ತ ಇನ್ನೂ ಒಂದು ವಾರದ ಸಮಯ ಕೇಳಿದರು. ಇದಕ್ಕೆ ಪ್ರತಿಕ್ರಿಯಿಸುತ್ತ ಸಂವಿಧಾನ ಪೀಠ "ಸಾಮಾನ್ಯವಾಗಿ, ಇಂತಹ ಒಂದು ಸಂವಿಧಾನ ಪೀಠದ ವಿಚಾರಣೆ ಆರಂಭವಾದ ಮೇಲೆ ಈ ರೀತಿ ಮುಂದೂಡಲ್ಪಡುವುದಿಲ್ಲ. ಇದು ಈ ನ್ಯಾಯಾಲಯಕ್ಕೆ ಬಹಳ ಮುಜುಗರದ ಸಂಗತಿ" ಎಂದು ಟಿಪ್ಪಣಿ ಮಾಡುತ್ತ, ವಿಚಾರಣೆಯನ್ನು ನವಂಬರ್ 24ಕ್ಕೆ ಮುಂದೂಡಿದೆ. ಅಟಾರ್ನಿ ಜನರಲ್ ತನಗೂ ಇದನ್ನು ಕೇಳಲು ಮುಜುಗರವಾಗುತ್ತಿದೆ ಎಂದರಂತೆ!

ಒಂದು ದೃಷ್ಟಿಯಲ್ಲಿ ಈ ಎರಡೂ ಸುದ್ದಿಗಳಿಂದ ಆಶ್ಚರ್ಯಪಡಬೇಕಾಗಿಲ್ಲ. ಏಕೆಂದರೆ, ಪ್ರಧಾನಿಗಳ ಪ್ರಕಟಣೆಯ ಮರುದಿನದಿಂದ ಜನಸಾಮಾನ್ಯರು ಉದ್ದುದ್ದ ಸಾಲುಗಳಲ್ಲಿ ಸಂಕಟ ಪಡುತ್ತಿದ್ದಾಗ, ಪ್ರಾಣಗಳನ್ನೂ ಕಳೆದುಕೊಳ್ಳುತ್ತಿದ್ದಾಗ, ಇದೊಂದು ಕಠಿಣ ಕ್ರಮ, ಆದರೆ ಇದರ ಪ್ರಯೋಜನಗಳನ್ನು ಮನಗಾಣಿಸಲು 50 ದಿನಗಳ ಸಮಯ ಕೊಡಿ ಎಂದ ಪ್ರಧಾನಿಗಳು ಆ ಮೇಲೆ ಇದರ ಬಗ್ಗೆ ಮಾತೇ ಆಡಿಲ್ಲ, ಇದೊಂದು ಸಾಧನೆ ಎಂದು ಭಕ್ತ ವೃಂದದವರೂ ಯಾರೂ ಭಜನೆ ಮಾಡುತ್ತಿಲ್ಲ.

ಅಲ್ಲದೆ ಸುಪ್ರಿಂ ಕೋರ್ಟ್ ಕೊನೆಗೂ ಸುಮಾರು 6 ವರ್ಷಗಳ ನಂತರ ಇದರ ವಿಚಾರಣೆಯನ್ನು ಕೈಗೆತ್ತಿಕೊಂಡಾಗ, ಇದು ಮುಗಿದುಹೋದ ಕತೆ, ಆದ್ದರಿಂದ ಇದರ ವಿಚಾರಣೆಗಾಗಿ ಸಮಯ 'ವ್ಯರ್ಥಮಾಡಬಾರದು' ಎಂದು ಈ ಮೊದಲು ಸರಕಾರ ನ್ಯಾಯಾಲಯವನ್ನು ಆಗ್ರಹಿಸಿತ್ತು ಎಂಬುದನ್ನು ಕೂಡ ಇಲ್ಲಿ ನೆನಪಿಸಿಕೊಳ್ಳಬಹುದು.

ನಗದಿನ ಪ್ರಮಾಣದಲ್ಲಿ ಸುಮಾರು 72% ಏರಿಕೆಯ ಸುದ್ದಿ ಕೇಳಿ ಆಶ್ಚರ್ಯವೇನೂ ಆಗಬೇಕಿಲ್ಲ ಎಂದು ಅರ್ಥಶಾಸ್ತ್ರಜ್ಞರು ಕೂಡ ಹೇಳುತ್ತಾರೆ. ಏಕೆಂದರೆ ಅದು ಖಂಡಿತಾ ಸಾಧ್ಯವೂ ಇರಲಿಲ್ಲ. **ಬಹುಶಃ ಅದು ಈ 'ವೀರಾವೇಶದ' ಕ್ರಮದ ನಿಜ ಉದ್ದೇಶವೂ ಆಗಿರಲಿಕ್ಕಿಲ್ಲ ಎಂದು ಈಗ ಹಲವರಿಗೆ ಸಂದೇಹವೂ ಬರುತ್ತಿದೆ. ವಿಶೇಷವಾಗಿ ಆಗ ಪರಿಚಯಿಸಿದ್ದ 2000ರೂ. ನೋಟುಗಳನ್ನು ಈಗ ನಿಲ್ಲಿಸಲಾಗುತ್ತದೆ ಎಂಬ ಸುದ್ದಿಗಳ ಹಿನ್ನೆಲೆಯಲ್ಲಿ.**

ಕಪ್ಪು ಹಣ ಮತ್ತು ಖೋಟಾ ನೋಟುಗಳು ವಾಪಾಸು ಬರುವುದಿಲ್ಲ ಎಂಬ ಘೋಷಿತ ನಿರೀಕ್ಷೆ ಸುಳ್ಳೆಂಬುದನ್ನು ಈ ಮೊದಲೇ ರಿಜರ್ವ್ ಬ್ಯಾಂಕ್ 99%ಕ್ಕಿಂತಲೂ ಹೆಚ್ಚಿನ ನೋಟುಗಳು ವಾಪಾಸು ಬಂದವು ಎಂದು ಪ್ರಕಟಿಸಿದಾಗಲೇ ಸ್ಪಷ್ಟವಾಗಿತ್ತು. ಅಂದಿನಿಂದಲೇ ಆಳುವ ಪಕ್ಷದ ಭಕ್ತರು, ಮಡಿಲ ಮಾಧ್ಯಮದ ತುತ್ತೂರಿಗಳು ಈ ಬಗ್ಗೆ ಮಾತಾಡುವುದನ್ನೇ ಬಿಟ್ಟುಬಿಟ್ಟಿದ್ದರು. ಆದರೆ ಇದರಿಂದ ಸಂಕಟಪಟ್ಟ ಸಾಬೀತಾಗುತ್ತಿದೆ ಎಂದು ಹೇಳುತ್ತಿದ್ದಾರೆ.

ಅತಿ ದೊಡ್ಡ ಹಣಕಾಸು ಮೂರ್ಖತನ–ಪ್ರೊ. ಐಸಾಕ್

ಇದು ಸ್ವತಂತ್ರ ಭಾರತ ಹಿಂದೆಂದೂ ಕಾಣದ ಅತಿ ದೊಡ್ಡ ಹಣಕಾಸು ಮೂರ್ಖತನ ಎಂದು ಸುಮಾರಾಗಿ ಎಲ್ಲರೂ ಒಪ್ಪಿಕೊಳ್ಳುತ್ತಾರೆ ಎಂದು ಕೇರಳದ ಹಿಂದಿನ ಎಲ್‌ಡಿಎಫ್ ಸರಕಾರದಲ್ಲಿ ಹಣಕಾಸು ಮಂತ್ರಿಗಳಾಗಿದ್ದ ಪ್ರೊ. ಥಾಮಸ್ ಐಸಾಕ್ ಹೇಳುತ್ತಾರೆ. ಇವರು ಆರು ವರ್ಷಗಳ ಹಿಂದೆ ಈ ಪ್ರಕಟಣೆಯ ರಾತ್ರಿಯೇ ಪತ್ರಿಕಾಗೋಷ್ಠಿಯಲ್ಲಿ ಇದೊಂದು ಹುಚ್ಚು ಕ್ರಮ ಎಂದಿದ್ದರು. ಕಪ್ಪು ಹಣ ಕಡಿಮೆಯಾಗಲಿಲ್ಲ, ಖೋಟಾ ನೋಟುಗಳು ಕಡಿಮೆಯಾಗಲಿಲ್ಲ, ಭಯೋತ್ಪಾದನೆಯೂ ಕಡಿಮೆಯಾಗಿಲ್ಲ. ಬದಲಾಗಿ 2016ರ ನಂತರ ಎಲ್ಲ ಆರ್ಥಿಕ ಸೂಚ್ಯಂಕಗಳು ಕೆಳಮುಖ ಮಾಡಿವೆ. ಆರ್ಥಿಕ ಅಭಿವೃದ್ಧಿ ದರ 8%ದಿಂದ 2018–19ರಲ್ಲಿ 4%ಕ್ಕೆ ಇಳಿಯಿತು. ನಿರುದ್ಯೋಗ 2–3%ದಿಂದ 7.7%ಕ್ಕೆ ಏರಿತು. ಅಧಿಕೃತ ಅಂಕಿ–ಅಂಶಗಳ ಪ್ರಕಾರ 2016ರಿಂದ ಜಾಗತಿಕ ಸೂಚ್ಯಂಕಗಳಲ್ಲಿ ಭಾರತ ಎಲ್ಲ ದೇಶಗಳಿಗಿಂತ ಹಿಂದೆ ಬಿದ್ದಿದೆ. ದೇಶದ ಅರ್ಥವ್ಯವಸ್ಥೆಗೆ ಇಂತಹ ಅಗಾಧ ನಷ್ಟಗಳ ನಂತರವೂ ಪ್ರಧಾನಿಗಳು ಏನೂ ಆಗಿಲ್ಲ ಎಂಬಂತೆ ಹೊಸ ವೀರಾವೇಶದ ಮಾತುಗಳನ್ನಾಡುತ್ತ ಅಡ್ಡಾಡುತ್ತಿದ್ದಾರೆ ಎಂದು ಪ್ರೊ. ಐಸಾಕ್ ಖೇದ ವ್ಯಕ್ತಪಡಿಸಿದ್ದಾರೆ.

ತಿಳಿಗೇಡಿತನದ ಪರಮಾವಧಿ–ಪ್ರೊ.ಪಟ್ನಾಯಕ್

ಇನ್ನೊಬ್ಬ ಹಿರಿಯ ಅರ್ಥಶಾಸ್ತ್ರಜ್ಞ ಪ್ರೊ.ಪ್ರಭಾತ್ ಪಟ್ನಾಯಕ್ ಕೂಡ ಸ್ವಾತಂತ್ರ್ಯಾನಂತರದ ಭಾರತದ ಚರಿತ್ರೆಯಲ್ಲಿ ಯಾವುದೇ ಆರ್ಥಿಕ ಕ್ರಮ ಜನಗಳಿಗೆ ಈ ನೋಟುರದ್ಧತಿಯಷ್ಟು ವಿಧ್ವಂಸಕಾರಿಯಾಗಿರಲಿಲ್ಲ, ಮತ್ತು ತನ್ನ ಘೋಷಿತ ಗುರಿಗಳನ್ನು ತಲುಪುವಲ್ಲಿ ಇಷ್ಟೊಂದು ನಿರರ್ಥಕವಾಗಿರಲಿಲ್ಲ ಎಂದು ವರ್ಣಿಸಿದ್ದಾರೆ. (ನ್ಯೂಸ್‌ಕ್ಲಿಕ್, ನ.8)

ಇದರಲ್ಲಿ ಅಚ್ಚರಿ ಪಡುವಂತದ್ದು ಕೂಡ ಏನೂ ಇಲ್ಲ, ಏಕೆಂದರೆ, ಇದೊಂದು ತಿಳಿಗೇಡಿತನದ ಪರಮಾವಧಿ ಎಂಬುದು ಇದನ್ನು ಪ್ರಧಾನಿಗಳು ಪ್ರಕಟಿಸುತ್ತಿದ್ದಾಗಲೇ, ಸರಕಾರದ ಭಟ್ಟಂಗಿಗಳನ್ನು ಬಿಟ್ಟು ಬೇರೆಲ್ಲ ಅರ್ಥಶಾಸ್ತ್ರಜ್ಞರಿಗೂ ಗೊತ್ತಿತ್ತು ಎಂದು ಅವರು ಹೇಳುತ್ತಾರೆ,

ಈ ಪ್ರಕ್ರಿಯೆಯ ಒಟ್ಟು ಫಲಿತಾಂಶವೆಂದರೆ, ಹಳೆಯ ನೋಟುಗಳ ಬದಲು ಹೊಸ ನೋಟುಗಳನ್ನು ಚಲಾವಣೆಗೆ ತಂದದ್ದು, ಅದೂ ಜನಗಳಿಗೆ ಹೇಳತೀರದ ಅನಾನುಕೂಲತೆಯನ್ನು ಸೃಷ್ಟಿಸಿ. ಬ್ಯಾಂಕುಗಳ ಮುಂದೆ ಗಂಟೆಗಟ್ಟಲೆ ಸಾಲುಗಳಲ್ಲಿ, ಹಲವು ಜೀವಗಳೂ ಬಲಿಯಾದವು.

ಇಂತಹ ಅನಾನುಕೂಲತೆ ಸೃಷ್ಟಿಸಿದ್ದಷ್ಟೇ ಅಲ್ಲ, ನಗದು ಹಣವನ್ನೇ ಬಹಳವಾಗಿ ಆಧರಿಸಿರುವ ರೈತರೂ ಸೇರಿದಂತೆ ಸಣ್ಣಪ್ರಮಾಣದ ಉತ್ಪಾದಕರನ್ನು ಅಥವ ಅನೌಪಚಾರಿಕ ಎನ್ನಲಾಗುವ ವಲಯವನ್ನು ಇದು ಸಂಪೂರ್ಣ ಜರ್ಝರಿತಗೊಳಿಸಿತು. ಅದನ್ನು ಸಾಲಗ್ರಸ್ತಗೊಳಿಸಿತು. ಇದು ಈ ವಲಯದ ಮೇಲೆ ಶಾಶ್ವತ ಹೊರೆಯನ್ನು ಬಿಟ್ಟು ಹೋಗಿದೆ. ದೇಶದಲ್ಲಿನ ಉದ್ಯೋಗಾವಕಾಶಗಳಲ್ಲಿ 94% ಈ ವಲಯದಲ್ಲೇ ಇರುವಂತದ್ದು ಎಂಬುದನ್ನು ಗಮನಿಸಿದರೆ, ಇದು ಎಂತಹ ಅಗಾಧ ಆರ್ಥಿಕ ಅನಾಹುತವನ್ನು ತಂದಿದೆ ಎಂಬುದನ್ನು ಅರ್ಥಮಾಡಿಕೊಳ್ಳಬಹುದು ಎಂದು ಪ್ರೊ. ಪಟ್ನಾಯಕ್ ಹೇಳುತ್ತಾರೆ. ಅಲ್ಲದೆ ಇದು ನೇರವಾಗಿ ಸಂಘಟಿತ ಅಥವ ಔಪಚಾರಿಕ ವಲಯದ ಮೇಲೂ ಕೆಟ್ಟ ಪರಿಣಾಮ ಬೀರಿದೆ.

ಈ ಅಗಾಧ ದುಷ್ಪರಿಣಾಮಗಳನ್ನು ನೆನಪಿಸಿದ ನಂತರ ಅವರು ಒಂದು ಮಾರ್ಮಿಕ ಪ್ರಶ್ನೆ ಕೇಳುತ್ತಾರೆ– ಯಾರಾದರೂ ಜನಗಳ ಸಂಕಟಗಳ ಬಗ್ಗೆ ನೋಟುರದ್ದತಿಯ ಫರ್ಮಾನು ಹೊರಡಿಸಿದ ಮೋದಿ ಸರಕಾರದಷ್ಟು ನಿರ್ಲಕ್ಷ್ಯದಿಂದಿರಲು ಸಾಧ್ಯವೇ? ಇದಕ್ಕೆ ಉತ್ತರ– "ಆಘಾತ ಮತ್ತು ಬೆರಗು" ಉಂಟುಮಾಡುವ ಅದರ ಬಯಕೆ ಮತ್ತು ಜನರು ಹೆಚ್ಚು ಸಂಕಟ ಪಟ್ಟಷ್ಟು, ಸರಕಾರ ಒಂದು ಉನ್ನತ ಗುರಿಸಾಧನೆಗಾಗಿಯಲ್ಲದೆ ಇಂತಹ ಕಷ್ಟಗಳನ್ನು ಕೊಡುತ್ತಿರಲಿಕ್ಕಿಲ್ಲ ಎಂದು ಜನರಿಗೆ ಖಚಿತ ಭಾವನೆ ಉಂಟಾಗುತ್ತದೆ ಎಂಬ ಅದರ ನಂಬಿಕೆ ಎನ್ನುವ ಪ್ರೊ. ಪಟ್ನಾಯಕ್, ಸರಕಾರದ ಅಜ್ಞಾನ, ಭಂಡತನ ಮತ್ತು "ಆಘಾತ ಮತ್ತು ಬೆರಗು" ಉಂಟುಮಾಡುವ ಬಯಕೆ ಇವುಗಳ ಸಂಯೋಜನೆ ಸಾಕಷ್ಟು ಮಾರಣಾಂತಿಕವಾಗಬಲ್ಲದು ಎಂಬುದನ್ನು ಭಾರತೀಯ ಜನತೆ ಬಹಳ ಬೆಲೆ ತೆತ್ತು ಕಲಿತಿದ್ದಾರೆ ಎಂದು ಖೇದದಿಂದ ಹೇಳುತ್ತಾರೆ.

ಸರಕಾರ–ಪ್ರಚೋದಿತ ಬಿಕ್ಕಟ್ಟು–ಪ್ರೊ. ಅರುಣ್ ಕುಮಾರ್

ನೋಟುರದ್ದತಿ ದೇಶವನ್ನು ಒಂದು ಧೋರಣೆ–ಪ್ರಚೋದಿತ ಬಿಕ್ಕಟ್ಟಿನತ್ತ ಒಯ್ದಿತು, ಇದಕ್ಕೆ ತೆತ್ತ ಮಾನವ ಬೆಲೆ ಅಪಾರ, ಮತ್ತು ಇದು ಬಹಳವಾಗಿ ಬಾಧಿಸಿದ್ದು ಸಮಾಜದ ಅತಿ ದುರ್ಬಲ ವಿಭಾಗಗಳನ್ನೇ. ಇದಕ್ಕೆ ಪ್ರತಿಯಾಗಿ ಸರಕಾರ ಇವರಿಗೆ ಕೊಡುತ್ತಿರುವ ಕೊಡುಗೆಗಳು, ಬಕ್ಷಿಸುಗಳು, ರೆವ್ಡಿಗಳು ಏನೇನೂ ಅಲ್ಲ ಎನ್ನುತ್ತಾರೆ ಮತ್ತೊಬ್ಬ ಅರ್ಥಶಾಸ್ತ್ರಜ್ಞ ಪ್ರೊ. ಅರುಣ್‌ಕುಮಾರ್



ನೋಟುರದ್ಧತಿ ಕಪ್ಪು ಹಣವನ್ನು ನಿರ್ಮೂಲ ಮಾಡಿದೆ ಎಂದಿಟ್ಟುಕೊಂಡರೂ, ಅದಕ್ಕೆ ಅಸಂಘಟಿತ ವಲಯ ತೆರಬೇಕಾಗಿ ಬಂದಿರುವ ಬೆಲೆ ಸಮರ್ಥನೀಯವೇ? ಎಂದು ಪ್ರೊ. ಅರುಣ್ ಕುಮಾರ್ ಪ್ರಶ್ನಿಸುತ್ತಾರೆ? (ದಿ ಲೀಫ್‌ಲೆಟ್, ನ.11).

ಈ ವಲಯದಲ್ಲಿ ಆದಾಯಗಳು ತೆರಿಗೆಮಿತಿಯ ಆದಾಯಗಳಿಗಿಂತ ಬಹಳ ಕೆಳಗಿರುವಾಗ ಇಲ್ಲಿ ಕಪ್ಪು ಹಣ ನಿರ್ಮಾಣ ಸಾಧ್ಯವಿಲ್ಲ. ಹೀಗೆ ಈ ನೋಟುರದ್ಧತಿ ಕಪ್ಪು ಹಣವನ್ನು ನಿರ್ಮಿಸುವಲ್ಲಿ ಏನೇನೂ ಪಾತ್ರವಿರದವರನ್ನು ವಿಪರೀತವಾಗಿ ತಟ್ಟಿದರೆ, ಕಪ್ಪು ಆದಾಯಗಳನ್ನು ಪಡೆಯುವವರಿಗೆ ಪ್ರಯೋಜನ ತಂದಿದೆ. ಅದೇ ರೀತಿಯಲ್ಲಿ, ಕಪ್ಪು ಅರ್ಥವ್ಯವಸ್ಥೆ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸಿದರೆ, ಪ್ರತಿಪಕ್ಷಗಳವರ ಕಪ್ಪು ಆದಾಯಗಳನ್ನಷ್ಟೇ ಆರಿಸಿ ಗುರಿಯಿಡುವ ಕ್ರಮಗಳು ಪ್ರಜಾಪ್ರಭುತ್ವವನ್ನು ಮತ್ತಷ್ಟು ದುರ್ಬಲಗೊಳಿಸುತ್ತವೆ. ಕಪ್ಪು ಅರ್ಥವ್ಯವಸ್ಥೆಯ ವಿರುದ್ಧ ಹೋರಾಟದ ಈ ಅನಪೇಕ್ಷಿತ ಪರಿಣಾಮಗಳನ್ನು ತಪ್ಪಿಸಬೇಕಾಗಿದೆ ಎಂಬುದು ಕಲಿಯಬೇಕಾದ ಪಾಠ ಎಂದು ಪ್ರೊ. ಅರುಣ್ ಕುಮಾರ್ ಹೇಳುತ್ತಾರೆ.

ಸುಪ್ರಿಂ ಕೋರ್ಟಿನ "ಮುಜುಗರ'

ಸರಕಾರದ ಈ ಕ್ರಮವನ್ನು ಪ್ರಶ್ನಿಸಿ ಕೂಡಲೇ ಸುಪ್ರಿಂ ಕೋರ್ಟಿನ ಮುಂದೆ ಸಲ್ಲಿಸಿದ್ದ ಸುಮಾರು 50 ಅರ್ಜಿಗಳನ್ನು ಸ್ವಲ್ಪದಿನಗಳ ನಂತರ ಕೈಗೆತ್ತಿಕೊಂಡ ಮೂವರು ನ್ಯಾಯಾಧೀಶರ ಪೀಠ ಈ ಕುರಿತು 9 ಪ್ರಶ್ನೆಗಳನ್ನು ರೂಪಿಸಿ ಅವನ್ನು ಡಿಸೆಂಬರ್ 2016ರಲ್ಲಿ ಐವರು ನ್ಯಾಯಾಧೀಶರ ಸಂವಿಧಾನ ಪೀಠಕ್ಕೆ ವಹಿಸಿತು. ಈ ಕ್ರಮ ಸಮಾನತೆ, ಬದುಕು ಮತ್ತು ಸ್ವಾತಂತ್ರ್ಯ, ಆಸ್ತಿ, ಹಾಗೂ ವೃತ್ತಿಯನ್ನು ಮತ್ತು ವ್ಯಾಪಾರವನ್ನು ನಡೆಸಿಕೊಂಡು ಹೋಗುವ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸಿದೆಯೇ, 1934ರ ಕಾಯ್ದೆಯ ಅಡಿಯಲ್ಲಿ ನೋಟುರದ್ದತಿಯ ಅಧಿಸೂಚನೆ ಕಾನುನುಬದ್ಧವಾಗಿತ್ತೇ, ಅಲ್ಲದೆ ಇದಕ್ಕೆ ಅಂಗೀಕರಿಸಿದ ವಿಧಾನ ನ್ಯಾಯಬದ್ಧವಾಗಿತ್ತೇ ಇತ್ಯಾದಿ ಪ್ರಶ್ನೆಗಳು ಇದರಲ್ಲಿ ಸೇರಿವೆ.

ಸುಮಾರು ಆರು ವರ್ಷಗಳ ನಂತರ ಈ ಸಂವಿಧಾನ ಪೀಠ ಈ ವರ್ಷದ ಅಕ್ಟೋಬರ್ 12ರಂದು, ಆರಂಭಿಕ ವಿಚಾರಣೆಯಲ್ಲಿ, ಈ ಕ್ರಮದ ಮೂಲಕ ಕಪ್ಪು ಹಣವನ್ನು, ಭಯೋತ್ಪಾದನೆಗೆ ಹಣಕಾಸನ್ನು ಮತ್ತು ಖೋಟಾ ನೋಟುಗಳನ್ನು ತಡೆಯುವ ಘೋಷಿತ ಗುರಿಗಳು ಈಡೇರಿವೆಯೇ ಎಂದು ಒಂದು ಸಮಗ್ರ ಅಫಿಡವಿಟ್ ಸಲ್ಲಿಸಲು ಸರಕಾರಕ್ಕೆ ಹಾಗೂ ರಿಝರ್ವ್

ಪುಟ 12 ಕ್ಕೆ

ಇದು ಅಮೃತಕಾಲ



ಸಂವಿಧಾನದ ಆಶಯಕ್ಕೆ ತಕ್ಕಂತೆ ಸಮಾನತೆ ಸಿಗುವವರೆಗೆ ಮೀಸಲಾತಿ ಇರಬೇಕು.......... ಪುಟ 10 ರಿಂದ

ಇರಬೇಕು' ಎಂದ ಅವರು, 'ಎ ಮತ್ತು ಬಿ ವರ್ಗದಲ್ಲಿ ಮೀಸಲಾತಿ ಕೊರತೆ ನೀಗಿಸಲಾಗಿಲ್ಲ. ಸಫಾಯಿ ಕರ್ಮಚಾರಿ– ಪೌರ ಕಾರ್ಮಿಕರಲ್ಲಿ ನೂರರಷ್ಟು ದಲಿತರು ಇದ್ದಾರೆ. ಉನ್ನತ ವರ್ಗದ ಹುದ್ದೆಗಳಲ್ಲಿ ದಲಿತರ ಪ್ರಮಾಣ ಶೇ.5 ಇದೆ. ಹಸಿವಿಗೆ ಸಂಬಂಧಿಸಿಯೂ ಕೂಡ ಅಸಮಾನತೆ ಇದೆ. ಪೌಷ್ಟಿಕಾಂಶದ ಕೊರತೆಗೂ ಶೈಕ್ಷಣಿಕ ಕ್ಷೇತ್ರಕ್ಕೂ ಸಂಬಂಧ ಇದೆ. ಶಾಲೆಗಳಲ್ಲಿ ಮೊಟ್ಟೆ ಕೊಡುತ್ತೇವೆಂದರೆ ಅದಕ್ಕೆ ವಿರೋಧ ಮಾಡಲಾಗುತ್ತದೆ. ಮೊಟ್ಟೆ ವಿತರಣೆಗೆ ವಿದೇಶದಿಂದ ಬಂಡವಾಳ ತರಬೇಕೆ?' ಎಂದು ಅವರು ಪ್ರಶ್ನಿಸಿದರು.

ಭೂ ರಹಿತ ಕೃಷಿ ಕಾರ್ಮಿಕರು ಎಸ್ಸಿ, ಎಸ್ಟಿಗಳಲ್ಲಿ ಶೇ.40ರಷ್ಟು ಇದ್ದಾರೆ, ಸಾಮಾಜಿಕ ನ್ಯಾಯ ಕೇವಲ ಮೀಸಲಾತಿಗೆ ಸಂಬಂಧಿಸಿದ್ದಲ್ಲ. ಸಾಮಾಜಿಕ ನ್ಯಾಯ ಎಂದರೆ ಕೇವಲ ಮೀಸಲಾತಿ ಅಲ್ಲ, ಒಂದು ಸಮಾಜದ ಅಭಿವೃದ್ಧಿಯ ಎಲ್ಲ ಫಲ ಎಲ್ಲ ಜನರಿಗೂ ತಲುಪಬೇಕು. ಇದೇ ಸಾಮಾಜಿಕ ನ್ಯಾಯ' ಎಂದ ಪ್ರೊ.ಚಂದ್ರಶೇಖರ್, 'ರಾಜ್ಯದಲ್ಲಿ 12 ಲಕ್ಷ ಎಕರೆ ಒತ್ತುವರಿ ಆಗಿದೆ. ಈ ಭೂಮಿಯನ್ನು ದಲಿತರಿಗೆ ಯಾಕೆ ಹಂಚಬಾರದು? ದಲಿತರಿಗೆ, ಆದಿವಾಸಿಗಳಿಗೆ ಭೂಮಿ ಹಂಚುವ ಹೋರಾಟ ಮಾಡಬೇಕಿದೆ' ಎಂದರು.

'ದಲಿತ, ಆದಿವಾಸಿ ಮಕ್ಕಳಿಗೆ ಉತ್ತಮ ಶಿಕ್ಷಣ ಸಿಗಬೇಕಾದರೆ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸಬೇಕು, ಎಸ್ಸಿ, ಎಸ್ಟಿ ಮೀಸಲಾತಿಯಲ್ಲಿ ಮಹಿಳೆಯರಿಗೆ ಸಿಗುವ ಪ್ರಮಾಣ ಎಷ್ಟು? ಎಂಬುದರ ಬಗ್ಗೆಯೂ ನಾವು ಮಾತಾಡಬೇಕು. ಎಸ್ಸಿ,ಎಸ್ಟಿ ಮಹಿಳೆಯರ ಸಾಕ್ಷರತೆಯ ಪ್ರಮಾಣವೂ ಕೂಡ ಕಡಿಮೆ, ಈ ಬಗ್ಗೆ ಸರ್ಕಾರ ಕಾರ್ಯಕ್ರಮ ರೂಪಿಸಬೇಕು. ಲಿಂಗ ತಾರತಮ್ಯ ಮೀಸಲಾತಿಯ ಜಾರಿಯಲ್ಲಿಯೂ ಇರುವುದನ್ನು ಸರಿಪಡಿಸಬೇಕು. ನಾವು ಈ ವಿಚಾರವನ್ನು ಸರ್ಕಾರಕ್ಕೆ ಕೇಳಬೇಕು. ಮೀಸಲಾತಿ ವಿಚಾರ ಬಂದಾಗೆಲ್ಲ ಪ್ರತಿಭೆಗೆ ಸ್ಥಾನ ಸಿಗಲ್ಲ ಎಂದು ಹೇಳಲಾಗುತ್ತದೆ. ಆದರೆ ಇದು ಹುಸಿ ವಿಚಾರ. ಪ್ರತಿಭೆ ಯಾರ ಗುತ್ತಿಗೆಯೂ ಅಲ್ಲ' ಎಂದ ಅವರು 'ಮೀಸಲಾತಿ ನೂರಾರು ವರ್ಷಗಳ ಹೋರಾಟದ ಫಲ' ಎಂದರು.

ಕೊರೋನಾ ಕಾಲದ ಎರಡು ವರ್ಷಗಳು ಮಕ್ಕಳು ಓದಲಿಲ್ಲ. ಅದರ ಬಗ್ಗೆ ಸರ್ಕಾರ ಕಾರ್ಯಕ್ರಮ ರೂಪಿಸಬೇಕಲ್ಲವೇ? ಆದರೆ ಶಿಕ್ಷಣ ಮಂತ್ರಿ ಭಗವದ್ಗೀತೆ ಬಗ್ಗೆ, ಕಟ್ಟಡಕ್ಕೆ ಬಣ್ಣ ಬಳಿದು ವಿವೇಕ ಅಂತ ಹೆಸರು ಇಡುವುದರಲ್ಲಿ ತೊಡಗಿದ್ದಾರೆ' ಎಂದು ಟೀಕಿಸಿದರು.

'ಮೀಸಲಾತಿಯನ್ನು ಖಾಸಗಿ ಕ್ಷೇತ್ರಕ್ಕೂ ವಿಸ್ತರಣೆ ಮಾಡಬೇಕು ಎಂದು ತೀವ್ರವಾಗಿ ಹೋರಾಟ ಮಾಡಬೇಕಿದೆ. ರಾಜ್ಯದಲ್ಲಿ ಸರ್ಕಾರಿ ಹುದ್ದೆಗಳು ಲಕ್ಷ, ಲಕ್ಷ ಸಂಖ್ಯೆಯಲ್ಲಿ ಖಾಲಿ ಇವೆ. ಜಿಂದಾಲ್ ಸಂಸ್ಥೆ ದಲಿತರಿಗೆ, ಆದಿವಾಸಿಗಳ ಪೈಕಿ ಎಷ್ಟು ಜನರಿಗೆ ಉದ್ಯೋಗ ನೀಡಿದೇ?' ಎಂದ ಅವರು, 'ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣ ಮಾಡುವುದನ್ನು ಸರ್ಕಾರ ನಿಲ್ಲಿಸಬೇಕು' ಎಂದು ಆಗ್ರಹಿಸಿದರು.

ಸಮಾವೇಶದಲ್ಲಿ ಹಾಜರಿದ್ದ ವಕೀಲ, ಅನಂತ ನಾಯ್ಕ್ ಅವರು ಕೂಡ ವಿಷಯ ಮಂಡಿಸಿದರು. 'ರಾಜ್ಯದಲ್ಲಿ ಸುಗ್ರೀವಾಜ್ಞೆಯನ್ನು ಹೊರಡಿಸಿ ಎಸ್ಸಿ, ಎಸ್ಟಿ ಮೀಸಲಾತಿ ಹೆಚ್ಚಿಸಲಾಗಿದೆ. ಆದರೆ ಸುಗ್ರೀವಾಜ್ಞೆಗೆ ಆರು ತಿಂಗಳವರೆಗೆ ಮಾತ್ರ ಶಕ್ತಿ ಇರುತ್ತದೆ. ನಂತರ ಮತ್ತೊಮ್ಮೆ ಆದೇಶ ಹೊರಡಿಬಹುದು. ಇನ್ನು ಮೀಸಲಾತಿ ಹೆಚ್ಚಳಕ್ಕೆ ಸಂಬಂಧಿಸಿದ ಇನ್ನೂ ಕೆಲಸಗಳು ಬಾಕಿ ಇವೆ' ಎಂದರು.

ವಾಲ್ಮೀಕಿಶ್ರೀ ಅವರ ನಿರಂತರ ಹೋರಾಟ, ವಾಲ್ಮೀಕಿ ಜಯಂತಿ ಕಾರ್ಯಕ್ರಮಕ್ಕೆ ಬಹಿಷ್ಕಾರ ಹಾಕಿದ ತಕ್ಷಣ ಸರ್ಕಾರ ಬೇಡಿಕೆ ಒಪ್ಪಿತು. ಬೇಡಿಕೆ ಈಡೇರಿಸಿದ ನಂತರ ನ್ಯಾ.ನಾಗಮೋಹನದಾಸ್ ಅವರ ಅಭಿಪ್ರಾಯ ಪಡೆದು ಸುಗ್ರೀವಾಜ್ಞೆಯನ್ನು ಹೊರಡಿಸಿದರು. ಆದರೆ ಇಷ್ಟು ಸಾಲುವುದಿಲ್ಲ, ಅಧಿವೇಶನದಲ್ಲಿ ಈ ವಿಷಯ ಪಾಸ್ ಆಗಬೇಕು. ಶ್ರೀರಾಮುಲು ಸಮಾವೇಶದ ಮೇಲೆ ಸಮಾವೇಶ ಮಾಡುತ್ತಿದ್ದಾರೆ. ಅವರಿಗೆ ಸಮರ್ಪಕ ಮಾಹಿತಿ ನೀಡಬೇಕು. ವಿಶೇಷ ಅಧಿವೇಶನ ಕರೆದು ಈ ವಿಷಯದ ಮೇಲೆ ನಿರ್ಣಯ ಮಾಡಲಿ. ಸುಮ್ಮನೆ ಕೂಗಾಟ ಮಾಡಿದರೆ ಜನರಿಗೆ ಮೀಸಲಾತಿ ಸಿಗುವುದಿಲ್ಲ' ಎಂದರು.

ಮೀಸಲಾತಿ ಭಿಕ್ಷೆ ಅಲ್ಲ, ದಾನವಲ್ಲ, ಎಸ್ಸಿ, ಎಸ್ಟಿ, ಹಿಂದುಳಿದವರು ಸ್ವಾಭಿಮಾನದಿಂದ ಬದುಕಬೇಕು, ಕೀಳರಿಮೆ ಬಿಡಬೇಕು, ಸ್ವಾಭಿಮಾನದಿಂದ ಒಟ್ಟಾಗಿ ಹೋರಾಡಬೇಕು ಎಂದು ಹೇಳಿದ ಅನಂತ ನಾಯ್ಕ್, ವಿಧಾನ ಪರಿಷತ್, ರಾಜ್ಯಸಭೆಯಲ್ಲಿ ಮೀಸಲಾತಿ ಯಾಕಿಲ್ಲ? ಕೇಳಬೇಕಾದವರು ಕೇಳಬೇಕು ಅಲ್ಲವೇ?, ಸುಪ್ರೀಂ ಕೋರ್ಟ್ ಜಡ್ಜ್ ಆಗಬೇಕಾದರೆ ಮೀಸಲಾತಿ ಇರಬೇಕಲ್ಲವೇ–ಮಂಡಲ್ ಆಯೋಗದ ವರದಿ ಜಾರಿ ವಿರುದ್ಧವೇ ಅದರ ಫಲಾನುಭವಿಗಳು ಹೋರಾಟ ಮಾಡಿದರು.

ಎಸ್.ಸಿ., ಎಸ್.ಟಿ., ಹಿಂದುಳಿದ ವರ್ಗಗಳ ಜನರ ಒಗ್ಗಟ್ಟಿನ ಹೋರಾಟದ ಅಗತ್ಯ ಇದೆ, ಪ್ರಭುತ್ವದಲ್ಲಿರುವವರು ನಮ್ಮ ಮಾತು ಕೇಳಬೇಕು. ಹಾಗೆ ಹೋರಾಟ ರೂಪಿಸಬೇಕಾದ ಅಗತ್ಯ ಇದೆ' ಎಂದರು.

ಪ್ರವರ್ಗ 1 ಸಮುದಾಯಗಳ ಮುಖಂಡ ಚಿದಾನಂದಪ್ಪ ಮಾತನಾಡಿ.

ಎಸ್ಸಿ ಗಳ ವಿರುದ್ಧ ಎಸ್ಟಿಗಳನ್ನು ದುರ್ಬಳಕೆ ಮಾಡಲಾಗಿದೆ, ಆದರೀಗ ಎಸ್ಸಿ–ಎಸ್ಟಿಗಳ ವಿರುದ್ಧ ಹಿಂದುಳಿದವರನ್ನು ಎತ್ತಿ ಕಟ್ಟುವ ಕೆಲಸ ಮಾಡುವ ಸಂಭವ ಇದೆ. ಪ್ರವರ್ಗ ಒಂದರಲ್ಲಿ ಬರುವ ಸಮುದಾಯದ ಜನರಿಗೂ ಮೀಸಲಾತಿ ಹೆಚ್ಚಳ ಆಗಬೇಕಿದೆ. ಸಣ್ಣ ಸಣ್ಣ ಗಾತ್ರದ ಸಮುದಾಯಗಳ ಕುಲಶಾಸ್ತ್ರೀಯ ಅಧ್ಯಯನ ಆಗಬೇಕಿದೆ. ನಮ್ಮ ಪರ ಮಾತನಾಡಲು ಶಾಸನಸಭೆಗಳಲ್ಲಿ ಪ್ರತಿನಿಧಿಗಳು ಇಲ್ಲ, ನಮ್ಮ ಪರ ಎಸ್.ಸಿ., ಎಸ್.ಟಿ., ಹಿಂದುಳಿದ ಶಾಸಕರು, ಸಂಸದರೇ ಮಾತನಾಡಬೇಕು. ನಿಮ್ಮ ಪಾಲಿನಲ್ಲಿ ನಮಗೆ ಪಾಲು ಬೇಡ. ನಮ್ಮ ಜನಸಂಖ್ಯೆಗೆ ಆಧರಿಸಿ ಮೀಸಲಾತಿ ಸಿಗಲಿ. ಈ ಬಗ್ಗೆ ಸುದೀರ್ಘ ಚರ್ಚೆ ನಡೆಯಬೇಕು ಎಂದರು.

ಸಮಾವೇಶದ ಅಧ್ಯಕ್ಷತೆ ವಹಿಸಿ ಮಾತನಾಡಿದ ರೈತ ಮುಖಂಡ ವಿ.ಎಸ್.ಶಿವಶಂಕರ್

ಖಾಸಗಿ ಕ್ಷೇತ್ರದಲ್ಲಿ ಎಸ್ಸಿ, ಎಸ್ಟಿ, ಹಿಂದುಳಿದವರಿಗೆ ಮೀಸಲಾತಿ ನೀಡಬೇಕು, ಇಂದು ಸರ್ಕಾರಿ ಸಂಸ್ಥೆಗಳನ್ನು ಖಾಸಗೀಕರಣ ಮಾಡಲಾಗುತ್ತಿದೆ, 'ಸರ್ಕಾರಿ ಸಂಸ್ಥೆಗಳು ಖಾಸಗೀಕರಣಗೊಂಡರೆ ಮೀಸಲಾತಿ ತನ್ನಷ್ಟಕ್ಕೆ ತಾನೇ ಅಸ್ತಿತ್ವ ಕಳೆದುಕೊಳ್ಳುತ್ತದೆ. ಹೀಗಾಗಿ ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಸಿಗಬೇಕು. ಮೀಸಲಾತಿ ನೀಡುವ ಸರ್ಕಾರ ಅದಕ್ಕೆ ಭದ್ರತೆಯನ್ನು ನೀಡಬೇಕು. ಒಂದ ಕಡೆ ಮೀಸಲಾತಿ ಕೊಡುವುದು, ಮತ್ತೊಂದು ಕಡೆ ಸರ್ಕಾರಿ ಸಂಸ್ಥೆಗಳನ್ನು ಖಾಸಗೀಕರಣ ಮಾಡುವುದು, ಇದು ಸರ್ಕಾರಗಳ ನೀತಿಗಳು. ಬಳ್ಳಾರಿಗೆ ಎಸ್ಸಿ, ಎಸ್ಟಿ ಸಮಾವೇಶದಲ್ಲಿ ಪಾಲ್ಗೊಳ್ಳಲು ಬರುವ ಬಿಜೆಪಿ ನಾಯಕರು,ಈ ಬಗ್ಗೆ ಖಚಿತ ನಿರ್ದಾರ ಪ್ರಕಟಿಸಬೇಕು. ಸರಕಾರ ಇಂತಹ ತೀರ್ಮಾನ ಕೈಗೊಳ್ಳ ಬೇಕು' ಎಂದು ಆಗ್ರಹಿಸಿದರು.

ಹೊಸಪೇಟೆಯ ಮರಡಿ ಜಂಬಯ್ಯ ನಾಯಕ ಅವರು ನಿರ್ಣಯಗಳನ್ನು ಮಂಡಿಸಿದರು. ದೇವದಾಸಿ ಸಂಘಟನೆಯ ನಾಯಕಿ ದುರ್ಗಮ್ಮ, ಸಂಡೂರು ಅವರು ನಿರ್ಣಯವನ್ನು ಅನುಮೋದಿಸಿದರು.

ಇದೇ ನವೆಂಬರ್ 19 ರಂದು ಎಲ್ಲಾ ತಾಲೂಕುಗಳಲ್ಲಿ ಹಕ್ಕೊತ್ತಾಯ ಮೆರವಣಿಗೆ, ಮತಪ್ರದರ್ಶನ ನಡೆಸಿ ತಹಶೀಲ್ದಾರ್ ಅವರಿಗೆ ಮನವಿ ಪತ್ರ ನೀಡಬೇಕು ಎಂದು ತೀರ್ಮಾನ ಮಾಡಲಾಯಿತು.

ಸಿಐಟಿಯು ಮುಖಂಡರಾದ ಜೆ.ಸತ್ಯಬಾಬು ವಂದಿಸಿದರು. ಭಾಸ್ಕರರೆಡ್ಡಿ, ಪಿ.ಗಾದೆಪ್ಪ, ಯರಿಸ್ವಾಮಿ, ವಕೀಲರ ಸಂಘದ ಅಧ್ಯಕ್ಷ ಯರೇಗೌಡ, ಮಹಿಳಾ ಸಂಘಟನೆಯ ನಾಯಕಿ ಚಂದ್ರಕುಮಾರಿ, ಮೌಲಾಲಿ, ದೊಡ್ಡಯರ್ರೆಪ್ಪ, ಯೂನುಸ್, ಬಿಸಾಟಿ ತಾಯಪ್ಪ ನಾಯಕ, ಸೇರಿದಂತೆ ಸಮುದಾಯಗಳ ಹಾಗೂ ಪ್ರಗತಿಪರ ಸಂಘಟನೆಗಳ ಮುಖಂಡರು ಹಾಜರಿದ್ದರು.

ನೋಟು ರದ್ಧತಿಯ 6ನೇ ವಾರ್ಷಿಕದಂದು ನಗದಿನ 72% ಹೆಚ್ಚಳವೂ, ಸುಪ್ರಿಂ ಕೋರ್ಟಿನ ಮುಜುಗರವೂ..... ಪುಟ 11 ರಿಂದ

ಬ್ಯಾಂಕಿಗೆ ಸುಪ್ರಿಂ ಕೋರ್ಟ್ ಹೇಳಿತು. ಆದರೆ ಅದನ್ನು ನಿಗದಿತ ಅವಧಿ ಕಳೆದರೂ ಸರಕಾರ ಸಲ್ಲಿಸಿಲ್ಲ.

ಇದು ಮುಗಿದುಹೋದ ಕತೆ, ಆದ್ದರಿಂದ ಈ ವಿಚಾರಣೆಗೆ ಸಮಯ 'ವ್ಯರ್ಥಮಾಡಬಾರದು', ಇದೊಂದು 'ಅಕೆಡೆಮಿಕ್ ಕಸರತ್ತಷ್ಟೇ' ಆಗುತ್ತದೆ ಎಂದು ಈ ಮೊದಲು ಸರಕಾರ ನ್ಯಾಯಾಲಯಕ್ಕೆ ಆಗ್ರಹಪೂರ್ವಕವಾಗಿ ಬಿನ್ನಹ ಸಲ್ಲಿಸಿದ್ದರೂ ಈ ಸಂವಿಧಾನ ಪೀಠ ಅದನ್ನು ಮನ್ನಿಸಲಿಲ್ಲ. ಇದೊಂದು ಗಂಭೀರ ವಿಷಯ, ಈ ಬಗ್ಗೆ ಕೇಂದ್ರ ಸರಕಾರದಿಂದ ಮತ್ತು ರಿಝರ್ವ್ ಬ್ಯಾಂಕಿನಿಂದ ಇದರಲ್ಲಿ ಅಂಗೀಕರಿಸಿದ ವಿಧಾನದ ಕಾನೂನುಬದ್ಧತೆಯ ಬಗ್ಗೆ ವಿವರವಾದ ಉತ್ತರಗಳು ಬೇಕು ಎಂದಿತು. ಆದ್ದರಿಂದಲೇ ಅದು ಒಂದು ಸಮಗ್ರವಾದ ಅಫಿಡವಿಟ್ ಸಲ್ಲಿಸುವಂತೆ ಹೇಳಿದ್ದು. ಮುಂಬರುವ ಎಲ್ಲ ಸಮಯಕ್ಕೂ ಕಾನೂನನ್ನು ಘೋಷಿಸುವುದು ಒಂದು ಸಂವಿಧಾನ ಪೀಠದ ಪ್ರಧಾನ ಕರ್ತವ್ಯಗಳಲ್ಲಿ ಎಂದ ಪೀಠ ಯಾವುದಾದರೂ ಪ್ರಶ್ನೆಯ ಪರಿಶೀಲನೆಯನ್ನು ವಹಿಸಿಕೊಟ್ಟಾಗ ಅದನ್ನು ಉತ್ತರಿಸುವುದು ಸಂವಿಧಾನ ಪೀಠದ ಕರ್ತವ್ಯ, ಅದು ಈ ಕುರಿತು ಮಾಡುವ ಯಾವುದೇ ಘೋಷಣೆ ಮುಂದಿನ ಪೀಳಿಗೆಗಾಗಿ ಎಂದೂ ಹೇಳಿತ್ತು.

ಪ್ರಧಾನ ಮಂತ್ರಿಗಳು ಈ ಪ್ರಕಟಣೆಯನ್ನು ಮಾಡುವ ಮೊದಲು ನಡೆಸಿದ ವಿಚಾರ–ವಿಮರ್ಶೆಗಳ ಕುರಿತ ಕಡತಗಳನ್ನು, ಅಜೆಂಡಾ ಮತ್ತು ನಿರ್ಣಯಗಳಿಗೆ ಸಂಬಂಧಪಟ್ಟ ದಸ್ತಾವೇಜುಗಳನ್ನು, 2016ರ ನವಂಬರ್ 7 ಮತ್ತು 8ರ ನಡುವೆ ಕೇಂದ್ರ ಸರಕಾರ ಹಾಗೂ ರಿಝರ್ವ್ ಬ್ಯಾಂಕ್ ನಡುವಿನ ಪತ್ರವ್ಯವಹಾರಗಳನ್ನು ಸಿದ್ಧವಾಗಿಟ್ಟುಕೊಳ್ಳಬೇಕು ಎಂದೂ ಪೀಠ ಅಟಾರ್ನಿ ಜನರಲ್ ಅವರಿಗೆ ಹೇಳಿದೆ.

ಒಟ್ಟಿನಲ್ಲಿ ಇದೊಂದು ಸರ್ಜಿಕಲ್ ಪ್ರಹಾರವಾಗಿರಲಿಲ್ಲ, ನಿರರ್ಥಕ ಕಸರತ್ತು ಆಯಿತು, ಅದನ್ನು ಮರೆತು ಬಿಡಬೇಕು ಎಂದು ಸರಕಾರ ಬಯಸುತ್ತಿದ್ದರೆ, ಇನ್ನೊಂದೆಡೆಯಲ್ಲಿ ಆರ್ಥಿಕ ವಿಷಯಗಳಲ್ಲಿ 'ಲಕ್ಷ್ಮಣ ರೇಖೆ'ಯ ಅರಿವು ತನಗೆ ಇದೆ ಎಂದೂ ಹೇಳಿರುವ ಸಂವಿಧಾನ ಪೀಠ ಈ ಬಗ್ಗೆ ಅಂತಿಮವಾಗಿ ಏನು ಹೇಳಲಿದೆ ಎಂಬುದೂ ಕಾದು ನೋಡಬೇಕಾದ ಸಂಗತಿ. ಏಕೆಂದರೆ ಈ 'ಲಕ್ಷ್ಮಣ ರೇಖೆ' ಇದುವರೆಗೆ, ನ್ಯಾಯಾಲಯದ ಕಟು ಮಾತುಗಳ ಹೊರತಾಗಿಯೂ, ಆಳುವ ಸರಕಾರಕ್ಕೇ ಪ್ರಯೋಜನಕಾರಿಯಾದ ಸಂದರ್ಭಗಳೇ ಹೆಚ್ಚು.

'ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ'!... ಪುಟ 2 ರಿಂದ

ಅವರು ಸೇರಿಸಿದ್ದಾರೆ.

ಸಾವರ್ಕರ್ ಅವರು ತಮ್ಮ ಮೊದಲ ಘಟ್ಟದ ರಾಜಕೀಯ ಜೀವನದಲ್ಲಿ, ಭಾರತವು ಹಿಂದೂ ಮತ್ತು ಮುಸ್ಲಿಮರ ನಡುವಿನ ಘರ್ಷಣೆಯ ಕಣವಾಗಿತ್ತು ಎಂಬ ವಾದವನ್ನಾಗಲೀ ಅಥವಾ ಹಿಂದೂಗಳು ಮಾತ್ರ ಭಾರತದ ಸಹಜ ದೇಶಪ್ರೇಮಿಗಳು ಎಂಬ ನಂಬಿಕೆಯನ್ನಾಗಲೀ ಹೊಂದಿರಲಿಲ್ಲ. 1857 ರ ಬಗೆಗಿನ ಅವರ ಕೃತಿಯಲ್ಲಿ ಅವರು ನಿದರ್ಶನಗಳ ಮೇಲೆ ನಿದರ್ಶನಗಳನ್ನು ನೀಡಿ ಹಿಂದೂಗಳ ಒಂದು ವಿಭಾಗದವರ ವಂಚನೆಯನ್ನು ಬಯಲು ಮಾಡಿದ್ದಾರೆ. ಅಂತಹ ಒಂದು ಉದಾಹರಣೆಯಲ್ಲಿ ಬಾಜಿ ಪೇಶ್ವೆ ಬ್ರಿಟಿಷರಿಗೆ ಸಹಾಯ ಮಾಡಿ ಪಂಜಾಬನ್ನು ವಶಪಡಿಸಿಕೊಳ್ಳುವಲ್ಲಿ ಸಹಾಯ ಮಾಡಿದ್ದನ್ನು ಬರೆದಿದ್ದಾರೆ:

ಈ ಬಾಜಿಯು – ಶಿವಾಜಿಯ ಈ ಪೇಶ್ವೆ ಮತ್ತು ವಂಶದವರು – ತಮ್ಮ ಕೈಯಿಂದಲೇ ಹಣ ಖರ್ಚು ಮಾಡಿ ಒಂದು ಸಾವಿರ ಕಾಲ್ದಳಗಳನ್ನು ಮತ್ತು ಒಂದು ಸಾವಿರ ಅಶ್ವದಳಗಳನ್ನು ಇಂಗ್ಲಿಷರ ಸಹಾಯಕ್ಕೆ ಕಳಿಸಿದರು! ಈ ಬಾಜೀರಾಯನಿಗೆ ತಮ್ಮದೇ ಆದ ಶನಿವಾರವಾಡೆಯನ್ನು ರಕ್ಷಿಸಲು ಸಾಕಷ್ಟು ಸೇನೆಯನ್ನು ಕಳಿಸಲಾಗಲಿಲ್ಲ, ಆದರೆ ಗುರು ಗೋವಿಂದ್ ಸಿಂಗ್ ಅವರ ಮನೆಯನ್ನು ಪ್ರತ್ಯೇಕಿಸುವಲ್ಲಿ ಶತ್ರುಗಳಿಗೆ ಸಹಾಯ ಮಾಡಲು ಆತನ ಬಳಿ ಸೇನೆ ಇತ್ತು.

ಈ ಘಟ್ಟದಲ್ಲಿ, ಸಾವರ್ಕರ್ ಅವರು ಹಿಂದೂಗಳು ಮತ್ತು ಮುಸ್ಲಿಮರ ಬಗ್ಗೆ ಈ ನಂಬಿಕೆ ತಳೆದಿದ್ದರು:

ಇಬ್ಬರೂ ಹಿಂದೂಸ್ತಾನದ ಮಣ್ಣಿನ ಮಕ್ಕಳೇ ಆಗಿದ್ದಾರೆ. ಅವರ ಹೆಸರುಗಳು ಬೇರೆ ಬೇರೆ, ಅದರೆ ಅವರು ಒಂದೇ ತಾಯಿಯ ಮಕ್ಕಳಾಗಿದ್ದಾರೆ; ಆದ್ದರಿಂದ ಭಾರತವು ಈ ಇಬ್ಬರಿಗೂ ಸಮಾನ ತಾಯಿಯಾಗಿರುವುದರಿಂದ, ಅವರು ರಕ್ತಸಂಬಂಧದಲ್ಲಿ ಸೋದರರಾಗಿದ್ದಾರೆ. ನಾನಾ ಸಾಹೆಬ್, ದೆಹಲಿಯ ಬಹಾದುರ್ ಶಾಹ್, ಮೌಲ್ವಿ ಅಹಮದ್ ಶಾಹ್, ಖಾನ್ ಬಹಾದುರ್ ಖಾನ್, ಮತ್ತು 1857 ರ ಇತರ ಮುಖಂಡರುಗಳಿಗೆ ತಮ್ಮ ನಡುವಣ ಈ ಸಂಬಂಧ ಸ್ವಲ್ಪ ಮಟ್ಟಿಗೆ ಅನುಭವಕ್ಕೆ ಬಂದಿತ್ತು. ಆದ್ದರಿಂದಲೇ, ತಮ್ಮ ಹಗೆತನವನ್ನು ಹೊರಗಿಟ್ಟು ಸ್ವದೇಶದ ಬಾವುಟದ ಸುತ್ತ ಅಣಿನೆರೆದರು....

ಸಾವರ್ಕರ್ ಅವರು ನಾನಾ ಹಾಗೂ ಅಜೀಮುಲ್ಲಾ ಅವರ ನೀತಿಗಳನ್ನು ಹಾಡಿ ಹೊಗಳಿದ್ದರು:

ದೇಶದ ಸ್ವಾತಂತ್ರ್ಯಕ್ಕಾಗಿ ಭುಜಕ್ಕೆ ಭುಜ ಕೊಟ್ಟು ಒಟ್ಟಿಗೇ ಹೋರಾಡಲು ಮತ್ತು, ಸ್ವಾತಂತ್ರ್ಯ ಸಿಕ್ಕಾಗ ಭಾರತೀಯ ಆಳರಸರು ಹಾಗೂ ರಾಜರುಗಳ ಅಡಿಯಲ್ಲಿ ಸಂಯುಕ್ತ ಭಾರತದ ರಾಜ್ಯಗಳನ್ನು ರಚಿಸಬೇಕು

ಎಂಬುದಕ್ಕಾಗಿ ಹಿಂದೂಗಳು ಮತ್ತು ಮುಸ್ಲಿಮರನ್ನು ಒಂದುಗೂಡಿಸಬೇಕು, ಆಗ ಮಾತ್ರವೇ ಇಬ್ಬರೂ ಒಟ್ಟಿಗೇ ಹೋರಾಡಬಹುದು ಎಂಬುದು ಅವರ ಗುರಿಯಾಗಿತ್ತು ಎಂದಿದ್ದರು.

ನಾನಾ ಅವರ ಆಪ್ತ ನಂಬಿಕಸ್ತನಾಗಿದ್ದ ಮತ್ತು ಮಹಾನ್ ಮಿಲಿಟರಿ ತಂತ್ರಗಾರನಾಗಿದ್ದ ಅಜೀಮುಲ್ಲಾ ಖಾನ್‌ಗೆ ಈಸ್ಟ್ ಇಂಡಿಯಾ ಕಂಪನಿಯ ಆಡಳಿತದ ವಿರುದ್ಧ ಪ್ರತಿರೋಧ ಒಡ್ಡುವುದಕ್ಕಾಗಿ ಒಂದು ನೀಲಿ ನಕ್ಷೆಯನ್ನು ತಯಾರಿಸಿದ ಪೂರ್ಣ ಕೀರ್ತಿಯನ್ನು ಹೀಗೆ ಕೊಟ್ಟಿದ್ದಾರೆ:

1857 ರ ಕ್ರಾಂತಿಕಾರಿ ಸಮರದಲ್ಲಿ ಪ್ರಮುಖ ಪಾತ್ರ ವಹಿಸಿದವರಲ್ಲಿ ಅಜೀಮುಲ್ಲಾ ಖಾನ್ ಅವರ ಹೆಸರು ಅವಿಸ್ಮರಣೀಯವಾದುದು. ಸ್ವಾತಂತ್ರ್ಯ ಸಮರದ ವಿಚಾರವನ್ನು ಮೊದಲು ಪರಿಕಲ್ಪಿಸಿದ ಉತ್ಸಾಹಭರಿತ ಬುದ್ಧಿಶಾಲಿಗಳು ಹಾಗೂ ವಿವೇಕಶಾಲಿಗಳಲ್ಲಿ ಅಜೀಮುಲ್ಲಾ ಅವರಿಗೆ ಪ್ರಮುಖ ಸ್ಥಾನ ನೀಡಲೇಬೇಕು. ಕ್ರಾಂತಿಯ ವಿವಿಧ ಮಜಲುಗಳ ಹಲವಾರು ಯೋಜನೆಗಳನ್ನು ರೂಪಿಸಿದವರಲ್ಲಿ ಅಜೀಮುಲ್ಲಾ ಅವರಿಗೆ ವಿಶೇಷವಾದ ಗೌರವ ಸಲ್ಲಬೇಕು.

ಹಿಂದೂ ಮುಸ್ಲಿಂ ಸ್ವಾತಂತ್ರ್ಯ ಪ್ರೇಮಿ ಕ್ರಾಂತಿಕಾರಿಗಳ ಐಕ್ಯತೆಯನ್ನು ಸಾವರ್ಕರ್ ಅಭಿನಂದಿಸಿದರು. ಮೌಲ್ವಿ ಅಹಮದ್ ಶಾಹ್ ಅವರ ಜೆಹಾದಿ ಆದರ್ಶವನ್ನು ಹೊಗಳುವಷ್ಟರ ಮಟ್ಟಿಗೆ ಅವರು ಮುಂದಾದರು.

(ಮುಂದುವರೆಯುವುದು)



ಅರ್ಥಶಾಸ್ತ್ರವನ್ನು ಅಪ್ರಾಮಾಣಿಕತೆಯ ಮಟ್ಟಕ್ಕೆ ಇಳಿಸಿರುವ ನವ-ಉದಾರವಾದ

ಕೆಳ ಮಟ್ಟದ ಆದಾಯವು ಕ್ಯಾಲೊರಿ ಸೇವನೆಯ ಪ್ರಮಾಣವನ್ನು ತಗ್ಗಿಸುತ್ತದೆ ಎಂಬುದನ್ನು ಒಪ್ಪಿಕೊಂಡ ಸರ್ಕಾರ ಈ ವಾದಕ್ಕೆ ತದ್ವಿರುದ್ಧವಾಗಿ, ಉನ್ನತ ಮಟ್ಟದ ಆದಾಯವು ಕ್ಯಾಲೋರಿ ಸೇವನೆಯನ್ನು ಕಡಿಮೆ ಮಾಡುತ್ತದೆ ಎನ್ನುವ ಅಧಿಕೃತ ಅರ್ಥಶಾಸ್ತ್ರಜ್ಞರ ನಿಲುವನ್ನು ಕೂಡ ಸಮರ್ಥಿಸಿಕೊಳ್ಳುತ್ತದೆ; ಉದ್ದೇಶಪೂರ್ವಕ ಸುಳ್ಳು ಪ್ರತಿಪಾದನೆಯ ಮೇಲೆ ರೈತರಿಗೆ ಕೊಡುವ ಬೆಲೆ ಬೆಂಬಲವನ್ನು ತೆಗೆದುಹಾಕುವ ವಿಶ್ವ ವ್ಯಾಪಾರ ಸಂಘಟನೆಯ ಕಾರ್ಯಸೂಚಿಯನ್ನು ಮುಂದೊಯ್ಯುತ್ತದೆ. ಅರ್ಥಶಾಸ್ತ್ರದ ಹೆಸರಿನಲ್ಲಿ ತನ್ನ ಕಾರ್ಯಸೂಚಿಯನ್ನು ಉತ್ತೇಜಿಸುವ ಸಲುವಾಗಿ ನಿಷ್ಪಕ್ಷಪಾತರಲ್ಲದ ಅರ್ಥಶಾಸ್ತ್ರಜ್ಞರ ಒಂದು ಸೈನ್ಯವನ್ನೇ ಬಳಸುವ ನವ ಉದಾರವಾದಿ ಯುಗದಲ್ಲಿ ಅಪ್ರಾಮಾಣಿಕತೆಯು ಖಂಡಿತವಾಗಿಯೂ ಅದರ ಒಂದು ಹೆಗ್ಗುರುತೇ. ಅದೇ ರೀತಿಯಲ್ಲಿ ನವ-ಉದಾರವಾದವನ್ನು ಅಪ್ಪಿಕೊಂಡಿರುವ ಸರಕಾರದ ಸಮಯಸಾಧಕತನ ಕೂಡ.

ಪ್ರೊ.ಪ್ರಭಾತ್ ಪಟ್ನಾಯಕ್ **ಅನು: ಕೆ.ಎಂ.ನಾಗರಾಜ್**



ನೀತಿ ಆಯೋಗದ ಸದಸ್ಯರೊಂದಿಗೆ ಪ್ರಧಾನ ಮಂತ್ರಿಗಳು

ಅರ್ಥಶಾಸ್ತ್ರವು ವೈಜ್ಞಾನಿಕ ವಿವರಣೆಯನ್ನುಳ್ಳ ಒಂದು ವಿಷಯ ಎಂಬುದರ ಬದಲಾಗಿ ಆಳುವ ವರ್ಗಗಳು ತಮ್ಮದೇ ಸಿದ್ಧಾಂತ-ಪ್ರೇರಿತ ವಿವರಣೆಗಳನ್ನು ಕೊಡಲು ಪ್ರಯತ್ನಿಸುವ ವಿಷಯವಾಗಿ ಬಿಟ್ಟಿದೆ. ಅವರ ಈ ವಿವರಣೆಗಳು, ಶಾಸ್ತ್ರೀಯ ರಾಜಕೀಯ-ಅರ್ಥಶಾಸ್ತ್ರ(classical political economy) ಎಂಬುದಕ್ಕಿಂತ ಭಿನ್ನವಾದ ಮತ್ತು ಮಾರ್ಕ್ಸ್ "ಒರಟು ಅರ್ಥಶಾಸ್ತ್ರ" (vulgar economy) ಎಂದು ಕರೆದಿದ್ದ ಒಂದು ವೈಜ್ಞಾನಿಕವಲ್ಲದ ಪರ್ಯಾಯ ಸೈದ್ಧಾಂತಿಕ ರಚನೆಯೊಳಕ್ಕೆ ಹೊಂದಿಕೊಳ್ಳುವಂತವುಗಳು ಮತ್ತು ಹೊಂದಿಸಿದವುಗಳು. ಇಂತಹ ಒಂದು ಒರಟು ಅರ್ಥಶಾಸ್ತ್ರ ಸಹ ಎಲ್ಲರ ಗಮನಕ್ಕೆ ಬರುವ ವಿದ್ಯಮಾನಗಳನ್ನು ಹೊಂದಿಸಿಕೊಳ್ಳಲು ತನ್ನದೇ ಆದ "ಒರಟು" ರೀತಿಯಲ್ಲಿ ವ್ಯವಸ್ಥಿತವಾಗಿ ಏಗಲು ಪ್ರಯತ್ನಿಸುತ್ತದೆ. ಅದನ್ನೂ ಸಹ ನಿಷ್ಠೆಯಿಂದ ಮಾಡದೆ, ಸಮಯಕ್ಕೆ ತಕ್ಕ ಹಾಗೆ ತನ್ನದೇ ಸಿದ್ಧಾಂತವನ್ನುತುರುಕಿಸಿ ವಿವರಿಸಲು ಪ್ರಯತ್ನಿಸಿದಾಗ ಅದು ಇನ್ನೂ ಹೊಲಸಾಗಿ ಬಿಡುತ್ತದೆ. ಅಂತಹ ಪರಿಸ್ಥಿತಿಯಲ್ಲಿ ಅರ್ಥಶಾಸ್ತ್ರವು "ಒರಟು" ಮಟ್ಟದಿಂದ "ಅಪ್ರಾಮಾಣಿಕ" ಮಟ್ಟಕ್ಕೆ ಇಳಿಯುತ್ತದೆ. ಅರ್ಥಶಾಸ್ತ್ರವು ಈ ರೀತಿಯಲ್ಲಿ ಅಧಃಪತನಗೊಳ್ಳುವುದು ನವ ಉದಾರವಾದಿ ಕಾಲದ ಒಂದು ಹೆಗ್ಗುರುತು. ಈ ಬಗ್ಗೆ ಕೇವಲ ಮೂರು ಉದಾಹರಣೆಗಳಿಗೆ ಮಾತ್ರ ನಾನು ಇಲ್ಲಿ ನನ್ನನ್ನು ಸೀಮಿತಗೊಳಿಸಿಕೊಳ್ಳುತ್ತೇನೆ.

ನನ್ನ ಮೊದಲ ಉದಾಹರಣೆ ಬಡತನಕ್ಕೆ ಸಂಬಂಧಿಸಿದೆ. ಬಡತನವೆಂದರೆ, ಭಾರತದ ಯೋಜನಾ ಆಯೋಗವು ಗ್ರಾಮೀಣ ಭಾರತದಲ್ಲಿ ಒಬ್ಬ ವ್ಯಕ್ತಿಯು ದಿನಕ್ಕೆ 2400 ಕ್ಯಾಲೋರಿ ಮಟ್ಟದ ಆಹಾರವನ್ನು ಪಡೆಯಲಾಗದ ಪರಿಸ್ಥಿತಿ (ಕಾರ್ಯತಃ ಆಯೋಗವು ಇನ್ನೂ ಕೆಳಗಿನ 2200 ಕ್ಯಾಲೋರಿ ಮಾನದಂಡವನ್ನು ಅನುಸರಿಸುತ್ತಿತ್ತು), ಮತ್ತು ನಗರ ಭಾರತದಲ್ಲಿ ಪ್ರತಿ ವ್ಯಕ್ತಿಯು ದಿನಕ್ಕೆ 2100 ಕ್ಯಾಲೋರಿ ಮಟ್ಟದ ಆಹಾರವನ್ನು ಪಡೆಯಲಾಗದ ಪರಿಸ್ಥಿತಿ ಎಂಬುದಾಗಿ 1973-74ರಲ್ಲಿ ವ್ಯಾಖ್ಯಾನಿಸಿತ್ತು. ಆಯೋಗವು ನಿರ್ದಿಷ್ಟಪಡಿಸಿದ ಈ ಅಂಕಿಅಂಶಗಳ ಬಗ್ಗೆ ತಕರಾರುಗಳಿವೆ. ಆದರೂ, ಬಡತನದ ಅನುಪಾತದ ಪ್ರವೃತ್ತಿಗಳನ್ನು ಅಂದಾಜು ಮಾಡಲು ರಾಷ್ಟ್ರೀಯ ಮಾದರಿ ಸಮೀಕ್ಷೆ(ಎನ್‌ಎಸ್‌ಎಸ್) ಸಂಸ್ಥೆಯ ಪಂಚವಾರ್ಷಿಕ ದೊಡ್ಡ ಮಾದರಿ ಸಮೀಕ್ಷೆಗಳು ಸಂಗ್ರಹಿಸಿದ ದತ್ತಾಂಶಗಳನ್ನು ವಸ್ತುನಿಷ್ಠವಾಗಿ ಬಳಸಬಹುದಾದ ಒಂದು ಮಾನದಂಡವನ್ನು ಕನಿಷ್ಟ ಪಕ್ಷ ಈ ಅಂಕಿಅಂಶಗಳು ಒದಗಿಸಿದವು. ಮತ್ತು, ಬಡತನದ ಈ ಅನುಪಾತವು ನವ ಉದಾರವಾದಿ ಆಳ್ವಿಕೆಯ 2011-12ರವರೆಗಿನ ಅವಧಿಯಲ್ಲಿ (ಮತ್ತು ಸರ್ಕಾರವು ಸಮೀಕ್ಷೆಯ ದತ್ತಾಂಶವನ್ನುಬಚ್ಚಿಟ್ಟ 2017-18 ವರ್ಷದವರೆಗೂ), ಅಂದರೆ, ನವ ಉದಾರವಾದಿ ಅವಧಿಯಲ್ಲಿ ಎನ್‌ಎಸ್‌ಎಸ್ ನ ದೊಡ್ಡ ಮಾದರಿ ಸಮೀಕ್ಷೆಯ ದತ್ತಾಂಶಗಳು ಪೂರ್ಣವಾಗಿ ಲಭ್ಯವಿರುವ ವರೆಗೆ, ಏರುತ್ತ ಬಂದಿದೆ ಎಂಬುದನ್ನು ಸ್ಪಷ್ಟಪಡಿಸಿದವು.

ಬಡತನದ ಅಂದಾಜಿನಲ್ಲಿ ಅಪ್ರಾಮಾಣಿಕತೆ

ಬಡತನದ ಅಂದಾಜಿನ ಬಗ್ಗೆ ಯೋಜನಾ ಆಯೋಗವು ಮೊದಲಿಗೆ ವ್ಯಾಖ್ಯಾನಿಸಿದ್ದ ಕ್ಯಾಲೋರಿ ಮಾನದಂಡವನ್ನು ಕಾಲಾನಂತರ ಮತ್ತೊಂದು ವ್ಯಾಖ್ಯಾನದೊಂದಿಗೆ ಬದಲಾಯಿಸಿತು: ಕ್ಯಾಲೋರಿ ಮಾನದಂಡಗಳಿಗೆ ಅನುರೂಪವಾಗಿ, ಮೂಲ ವರ್ಷದ ತಲಾ ವೆಚ್ಚದ ಮಟ್ಟಗಳನ್ನು ನಿಗದಿಪಡಿಸಲಾಯಿತು ಮತ್ತು ಅವುಗಳನ್ನು ಗ್ರಾಮೀಣ ಮತ್ತು ನಗರ ಭಾರತದ "ಬಡತನ ರೇಖೆಗಳು" ಎಂದು ಕರೆಯಲಾಯಿತು. ಮೂಲ ವರ್ಷದ ಬಡತನದ ಈ ರೇಖೆಗಳನ್ನು ನಂತರದ ವರ್ಷಗಳಲ್ಲಿ ಗ್ರಾಹಕ ಬೆಲೆ ಸೂಚ್ಯಂಕವನ್ನು ಬಳಸಿಕೊಂಡು ಪ್ರತಿ ವರ್ಷವೂ ಪರಿಷ್ಕರಿಸಿ ಬಡತನದ ಹೊಸ ರೇಖೆಗಳನ್ನು ಗುರುತಿಸಲಾಯಿತು ಮತ್ತು ಬಡತನದ ಈ ಹೊಸ ರೇಖೆಗಳಿಗಿಂತ ಕೆಳಗಿರುವವರನ್ನು, ಬಡತನ-ರೇಖೆಯನ್ನು ಪರಿಷ್ಕರಿಸುವಾಗ ಅವರ ಆಹಾರ ಸೇವನೆಯ ಕ್ಯಾಲೊರಿ ಪ್ರಮಾಣವು ನಿರಂತರವಾಗಿ ಕುಸಿಯುತ್ತಿದ್ದುದು ಕಂಡುಬಂದರೂ ಸಹ, "ಬಡವರು" ಎಂದು ಪರಿಗಣಿಸಲಾಯಿತು. ಇದನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಆಹಾರ ಸೇವನೆಯಲ್ಲಿ ಕ್ಯಾಲೊರಿಗಳ ಕುಸಿತವನ್ನು ಅನುಭವಿಸುತ್ತಿದ್ದ ಜನರನ್ನೂ ಸಹ ಬಡತನದಿಂದ ಮೇಲೆತ್ತಲ್ಪಟ್ಟವರು ಎಂದು ಪರಿಗಣಿಸಲಾಯಿತು. ಟೀಕೆ-ಟಿಪ್ಪಣಿಗಳ ಹೊರತಾಗಿಯೂ, ಕ್ಯಾಲೊರಿ ಸೇವನೆಯ ಕುಸಿತದ ಬಗ್ಗೆ ಕೊಂಚವೂ ತಲೆಕೆಡಿಸಿಕೊಳ್ಳದೆ ಮತ್ತು ಗ್ರಾಹಕ ಬೆಲೆ ಸೂಚ್ಯಂಕಗಳನ್ನು ಮಾತ್ರ ಬಳಸಿಕೊಂಡು ನವೀಕರಿಸಿದ ಬಡತನದ ರೇಖೆಯು ಸುಳ್ಳುಗಳಿಂದ ಕೂಡಿದ್ದರೂ ಸಹ ತಲಾ ವೆಚ್ಚದ ವಿಧಾನವನ್ನೇ ಮುಂದುವರಿಸಲಾಯಿತು.

ಜೀವನ ನಿರ್ವಹಣೆಯ ವೆಚ್ಚಗಳ ನೈಜ ಹೆಚ್ಚಳವನ್ನು ಗ್ರಾಹಕ ಬೆಲೆ ಸೂಚ್ಯಂಕದ ಅಂಕಿ-ಸಂಖ್ಯೆಗಳು ಖಂಡಿತವಾಗಿಯೂ ಕೀಳಂದಾಜು ಮಾಡುತ್ತಿದ್ದವು. ವಿಶ್ವ ಬ್ಯಾಂಕಿನ ಷಬಾಸ್‌ಗಿರಿ ಪಡೆದ ಮತ್ತು ನವ ಉದಾರವಾದದ ಬಗ್ಗೆ ಒಂದು ಸುಂದರ ಚಿತ್ರಣವನ್ನು ಕಟ್ಟಿಕೊಡಲು ನೆರವಾದ ಈ ಬದಲಾವಣೆಯ (ಅಂದರೆ, ಗ್ರಾಹಕ ಬೆಲೆ ಸೂಚ್ಯಂಕವನ್ನು ಬಳಸಿಕೊಂಡು ಬಡತನವನ್ನು ಅಂದಾಜು ಮಾಡುವ ಈ ಕಾರ್ಯವಿಧಾನ) ನಿವ್ವಳ ಫಲಿತಾಂಶವೇ ಇಂದು ನಾವು ಎದುರಿಸುತ್ತಿರುವ ಈ ಅಸಂಬದ್ಧತೆ: ವಿಶ್ವ ಹಸಿವು ಸೂಚ್ಯಂಕದ ಪಟ್ಟಿಯಲ್ಲಿರುವ 121 ದೇಶಗಳ ಪೈಕಿ ಭಾರತವು 107 ನೇ ಶ್ರೇಯಾಂಕದಲ್ಲಿದೆ (ಸಾಂಕ್ರಾಮಿಕ-ಪೂರ್ವ ವರ್ಷಗಳಲ್ಲಿಯೂ ಸಹ ಭಾರತವು 100 ನೇ ಶ್ರೇಯಾಂಕದ ಸಮೀಪದಲ್ಲೇ ಇತ್ತು). 1973-74ರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಶೇ.56.4 ಮತ್ತು ನಗರ ಪ್ರದೇಶಗಳಲ್ಲಿ ಶೇ.49ರಷ್ಟಿದ್ದ ಬಡತನದ ಅನುಪಾತವನ್ನು 2011-12ರ ವೇಳೆಗೆ ಅನುಕ್ರಮವಾಗಿ ಶೇ.25.7 ಮತ್ತು ಶೇ.13.7ಕ್ಕೆ ಇಳಿಸಿರುವುದಾಗಿಯೂ ಮತ್ತು ಬಡತನದ ಈ ಇಳಿಕೆಯ ಪ್ರವೃತ್ತಿಯು ಮುಂದುವರೆಯುತ್ತಿದೆ ಎಂದೂ ಸರ್ಕಾರ ಹೇಳಿಕೊಳ್ಳುತ್ತದೆ.

ಅಧಿಕೃತ ಅರ್ಥಶಾಸ್ತ್ರಜ್ಞರು ಹೇಳುವುದೇನೆಂದರೆ, ಜನರ ಜೀವನ ಮಟ್ಟ ಉತ್ತಮಗೊಳ್ಳುತ್ತಿದ್ದಂತೆ, ಅವರು ಆಹಾರ ಧಾನ್ಯಗಳಿಗಾಗಿ ಮಾಡುವ ಖರ್ಚುಗಳು ಇಳಿಯುತ್ತವೆ. ಆಹಾರ ಸೇವನೆಗಾಗಿ ಅವರು ಮಾಡುವ ಖರ್ಚುಗಳಿಗಿಂತಲೂ ಹೆಚ್ಚಾಗಿ ಆರೋಗ್ಯ ರಕ್ಷಣೆ, ಮಕ್ಕಳ ಶಿಕ್ಷಣ ಮುಂತಾದವುಗಳಿಗೆ ಹೆಚ್ಚು ಹಣ ಖರ್ಚು ಮಾಡುತ್ತಾರೆ. ಹಾಗಾಗಿ, ಆಹಾರ ಸೇವನೆಯ ಕ್ಯಾಲೋರಿ ಕುಸಿತವು ಸುಧಾರಣೆಯನ್ನು ಸೂಚಿಸುತ್ತದೆ ಮತ್ತು ಜೀವನ ಮಟ್ಟ ಹದಗೆಡುವುದನ್ನಲ್ಲ ಎಂಬುದು ಅವರ ತರ್ಕ. ಅವರ ಈ ವಾದವನ್ನು ನಿಜ-ಜೀವನದ ಅನುಭವಗಳು ಸಂಪೂರ್ಣವಾಗಿ ಅಲ್ಲಗಳೆಯುತ್ತವೆ: ದೇಶದೊಳಗೆ ಮತ್ತು ದೇಶ ದೇಶಗಳಾದ್ಯಂತ, ತಲಾ ನೈಜ ಆದಾಯದ ಹೆಚ್ಚಳದೊಂದಿಗೆ ತಲಾ ಕ್ಯಾಲೊರಿ ಸೇವನೆಯೂ ಸಹ ನಿರಂತರವಾಗಿ ಹೆಚ್ಚುತ್ತದೆ. ಈ ಸಂಗತಿಯನ್ನು ನಾವು ನಿರ್ಲಕ್ಷಿಸೋಣ.

ವಿಷಯವೇನೆಂದರೆ, 2009-10ರ ಎನ್‌ಎಸ್‌ಎಸ್ ದೊಡ್ಡ ಮಾದರಿ ಸಮೀಕ್ಷೆಯ ಪ್ರಕಾರ, 2004-05ರ ಪರಿಸ್ಥಿತಿಗೆ ಹೋಲಿಸಿದರೆ, ಗ್ರಾಮೀಣ ಬಡತನದ ಅನುಪಾತ ಹೆಚ್ಚುತ್ತಿದೆ ಎಂಬುದು ಬಯಲಾಯಿತು. ಸರ್ಕಾರದ ಅಧಿಕೃತ ಅಂದಾಜಿನ ಪ್ರಕಾರ, 2004-05ರಲ್ಲಿದ್ದ ಶೇ.28.3ರ ಬಡತನದ ಅನುಪಾತಕ್ಕೆ ಹೋಲಿಸಿದರೆ, 2009-10ರಲ್ಲಿ ಅದು ಶೇ.33.8ಕ್ಕೆ ಏರಿಕೆಯಾಗಿತ್ತು (ಕ್ಯಾಲೋರಿ ಸೇವನೆಯ ಮಾನದಂಡದ ಪ್ರಕಾರವೂ ಈ ಏರಿಕೆಯು ಶೇ.69.5ರಿಂದ ಶೇ. 75.5ಕ್ಕೆ ಏರಿತ್ತು). ಆದ್ದರಿಂದ, ಸರ್ಕಾರವು 2009-10 ವರ್ಷವು ಒಂದು ಬರ ಪೀಡಿತ ವರ್ಷವಾಗಿತ್ತು ಎಂಬ ನೆಪದಲ್ಲಿ ಒಂದು ಹೊಸ ದೊಡ್ಡ ಮಾದರಿ ಸಮೀಕ್ಷೆಯನ್ನು ಕೈಗೊಳ್ಳುವಂತೆ ಆದೇಶಿಸಿತು. ಈ ಹೊಸ ಸಮೀಕ್ಷೆಯನ್ನು 2011-12 ರಲ್ಲಿ ಸೂಕ್ತವಾಗಿ ನಡೆಸಲಾಯಿತು. 2011-12 ವರ್ಷವು ಒಂದು ಉತ್ತಮ ಬೆಳೆ ವರ್ಷವಾಗಿತ್ತು. ವಿಪರ್ಯಾಸವೆಂದರೆ, 2009-10 ವರ್ಷವೇನೂ ಕಳಪೆ ಬೆಳವಣಿಗೆಯ ವರ್ಷವಾಗಿರಲಿಲ್ಲ: ಈ 2009-10 ವರ್ಷದಲ್ಲಿ, ಮೂಲಾಂಶ ಬೆಲೆ ಮಟ್ಟದಲ್ಲಿ (at factor cost) ಜಿಡಿಪಿಗೆ ಸೇರ್ಪಡೆಯಾದ ಒಟ್ಟು ಮೌಲ್ಯವು ಶೇ. 8.6ರ ಬೆಳವಣಿಗೆಯನ್ನು ಕಂಡಿತ್ತು ಮತ್ತು "ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳು" ವಿಭಾಗದಲ್ಲಿ ಶೇ. 1.5ರ ಬೆಳವಣಿಗೆಯನ್ನು ಕಂಡಿತ್ತು!

ಹೊಸ ಸಮೀಕ್ಷೆಯನ್ನು ಕೈಗೊಳ್ಳುವಂತೆ ಆದೇಶ ಮಾಡುವಲ್ಲಿ, ಕೆಳ ಮಟ್ಟದ ಆದಾಯವು ಕ್ಯಾಲೊರಿ ಸೇವನೆಯ ಪ್ರಮಾಣವನ್ನು ತಗ್ಗಿಸುತ್ತದೆ ಎಂಬುದನ್ನು ಸರ್ಕಾರವು ಸತ್ಯಾಂಶಗಳನ್ನು ಪರಿಶೀಲಿಸುವ ಮೂಲಕ ಒಪ್ಪಿಕೊಂಡಿತ್ತು. ಆದರೆ, ಈ ವಾದಕ್ಕೆ ತದ್ವಿರುದ್ಧವಾಗಿ, ಉನ್ನತ ಮಟ್ಟದ ಆದಾಯವು ಕ್ಯಾಲೋರಿ ಸೇವನೆಯನ್ನು ಕಡಿಮೆ ಮಾಡುತ್ತದೆ ಎಂಬುದಾಗಿ ವ್ಯಕ್ತಪಡಿಸಿದ ಅಧಿಕೃತ ಅರ್ಥಶಾಸ್ತ್ರಜ್ಞರ ನಿಲುವನ್ನು ಅದು ಉದ್ದಕ್ಕೂ ಸಮರ್ಥಿಸಿಕೊಳ್ಳುತ್ತಲೇ ಬಂತು. ಮೇಲ್ನೋಟದಲ್ಲೇ ವಿರುದ್ಧವಾಗಿ ಕಾಣುವ ಈ ಎರಡು ಹೇಳಿಕೆಗಳನ್ನು ಸಮನ್ವಯಗೊಳಿಸುವ ಪ್ರಯತ್ನವನ್ನು ಸರ್ಕಾರ ಮಾಡಲೇ ಇಲ್ಲ. ಈ ಒಂದೊಂದು ಹೇಳಿಕೆಯನ್ನೂ ತನಗೆ ಅನುಕೂಲವಾಗುವ ಸಂದರ್ಭಗಳಲ್ಲಿ ಅಂಗೀಕರಿಸಿದ ಸರ್ಕಾರದ ಈ ಸಮಯಸಾಧಕತನದಲ್ಲಿ ನವ ಉದಾರವಾದಿ ಅವಧಿಯ ಅರ್ಥಶಾಸ್ತ್ರದ ಅಪ್ರಾಮಾಣಿಕತೆ ಅಡಗಿದೆ.

ಡಬ್ಲ್ಯುಟಿಒ ದ ಸಬ್ಸಿಡಿ ಅಪಾಮಾಣಿಕತೆ

ನನ್ನ ಎರಡನೆಯ ಉದಾಹರಣೆಯು ವಿಶ್ವ ವ್ಯಾಪಾರ ಸಂಘಟನೆಯ ಅಪ್ರಾಮಾಣಿಕತೆಗೆ ಸಂಬಂಧಿಸುತ್ತದೆ. ಈ ವಿಶ್ವ ವ್ಯಾಪಾರ ಸಂಘಟನೆಯು ದೇಶ ದೇಶಗಳ ಸರ್ಕಾರಗಳು ತಮ್ಮ ಕೃಷಿಕರಿಗೆ ಒದಗಿಸುವ ಸಬ್ಸಿಡಿಗಳ ನಡುವೆ "ಮಾರುಕಟ್ಟೆ-ವಿರೂಪಗೊಳಿಸುವ" ಸಬ್ಸಿಡಿಗಳು ಮತ್ತು "ಮಾರುಕಟ್ಟೆ-ವಿರೂಪಗೊಳಿಸದ" ಸಬ್ಸಿಡಿಗಳು ಎಂಬ ಭಿನ್ನೀಕರಿಸುತ್ತದೆ. ಯುಎಸ್ ಮತ್ತು ಐರೋಪ್ಯ ಒಕ್ಕೂಟದ ಮುಂದುವರಿದ ದೇಶಗಳು ತಮ್ಮ ಕೃಷಿ ವಲಯಕ್ಕೆ ನೀಡುವ ನೇರ ನಗದು ವರ್ಗಾವಣೆಗಳನ್ನು ಮಾರುಕಟ್ಟೆ-ವಿರೂಪಗೊಳಿಸದ ಸಬ್ಸಿಡಿಗಳು ಎಂದು ಪರಿಗಣಿಸುತ್ತದೆ ಮತ್ತು ಯಾವ ಆಕ್ಷೇಪವೂ ಇಲ್ಲದೆ ಈ ಸಬ್ಸಿಡಿಗಳನ್ನು ಅನುಮೋದಿಸುತ್ತದೆ. ಆದರೆ, ಭಾರತದಂತಹ ಮೂರನೇ ಜಗತ್ತಿನ ದೇಶಗಳು ರೈತರಿಗೆ ನೀಡುವ ಬೆಲೆ ಬೆಂಬಲ ರೂಪದ ಸಬ್ಸಿಡಿಯನ್ನು ಮತ್ತು ಬೀಜ, ರಸ ಗೊಬ್ಬರ ಮುಂತಾದ ಪರಿಕರಗಳಿಗೆ ಕೊಡುವ ಸಬ್ಸಿಡಿಗಳನ್ನು ಮಾರುಕಟ್ಟೆ-ವಿರೂಪಗೊಳಿಸುವ ಸಬ್ಸಿಡಿಗಳು ಎಂದು ಪರಿಗಣಿಸಿ ಈ ಸಬ್ಸಿಡಿಗಳನ್ನು ಒಂದು ನಿರ್ದಿಷ್ಟಪಡಿಸಿದ ಮಿತಿಗೆ ಒಳಪಡಿಸುತ್ತದೆ. ತನ್ನ ಸಣ್ಣ ಸಂಖ್ಯೆಯ ಕೃಷಿಕರಿಗೆ ನಗದು ವರ್ಗಾವಣೆಯ ರೂಪದಲ್ಲಿ ಯುಎಸ್ ವಾರ್ಷಿಕವಾಗಿ 100 ಬಿಲಿಯನ್ ಡಾಲರ್ ಸಬ್ಸಿಡಿಯನ್ನು ನೀಡುತ್ತದೆ. ಈ ಬಗ್ಗೆ ವಿಶ್ವ ವ್ಯಾಪಾರ ಸಂಘಟನೆಗೆ ಯಾವ

ಪುಟ 15 ಕ್ಕೆ

ಯು.ಎಸ್ ಚುನಾವಣೆಗಳು
'ಟ್ರಂಪ್ ಅಲೆ'ಗೆ ತಡೆ, ಆದರೆ ಪ್ರಜಾಪ್ರಭುತ್ವಕ್ಕೆ ಅಪಾಯ ತಪ್ಪಿಲ್ಲ

ಜಗದ ಸುತ್ತ

ವಸಂತರಾಜ ಎನ್.ಕೆ.

ಟ್ರಂಪ್ ಅಲೆ ಠುಸ್ಸೆಂದರೂ ರಿಪಬ್ಲಿಕನ್ ಪಕ್ಷವು ಕಾಂಗ್ರೆಸ್ ಕೆಳಸದನವನ್ನು ಡೆಮೊಕ್ರಾಟಿಕ್ ಪಕ್ಷದಿಂದ ಕಸಿದುಕೊಂಡಿದೆ. ಮೇಲ್ ಸದನವನ್ನು ಡೆಮೊಕ್ರಾಟರು ಉಳಿಸಿಕೊಂಡಿದ್ದಾರೆ. ರಿಪಬ್ಲಿಕನ್ ಪಕ್ಷ ಅಧ್ಯಕ್ಷ ಬಿಡೆನ್ ಅವರ ವಿರುದ್ಧ ತನಿಖೆ, ದೋಷಾರೋಪಣೆಗಳನ್ನು ಹರಿಯ ಬಿಟ್ಟು ಅವರ ಕ್ರಮಗಳಿಗೆಲ್ಲ ಅಡ್ಡಿ ಒಡ್ಡಲಿದೆ. 'ಸ್ವಲ್ಪವಾದರೂ ಜನಪರವಾಗಿರುವ ಕನಿಷ್ಠ ವೇತನ ಏರಿಕೆ, ಬಡ ಕುಟುಂಬಗಳಿಗೆ ಆರೋಗ್ಯ ವಿಮೆ ವಿಸ್ತರಿಸುವ ಮತ್ತು ಮೆಡಿಕೇರ್ ಗಟ್ಟಿಗೊಳಿಸುವ ಬಿಡೆನ್ ಸರಕಾರದ ಕ್ರಮಗಳಿಗೆ ರಿಪಬ್ಲಿಕನ್ನರು ಅಡೆತಡೆಯನ್ನು ಒಡ್ಡಲಿದ್ದಾರೆ. ಹವಾಮಾನ ಬದಲಾವಣೆ ತಡೆಯುವ ಬಿಡೆನ್ ಕ್ರಮಗಳಿಗೂ ಕುತ್ತು ಕಾದಿದೆ. ಬಿಡೆನ್ ಅವರ ಉಕ್ರೇನ್ ಯುದ್ಧ, ರಶ್ಯಾ-ಚೀನಾ ವಿರುದ್ಧ ಆರ್ಥಿಕ ಯುದ್ಧ ಮುಂತಾದ ಆಕ್ರಾಮಕ ಕ್ರಮಗಳಿಗೆ ಕಡಿವಾಣ ಬೀಳಬಹುದು. ಟ್ರಂಪ್ ಅಲೆ'ಗೆ ತಡೆಯಾದರೂ, ಯು.ಎಸ್. ಪ್ರಜಾಪ್ರಭುತ್ವಕ್ಕೆ ಅಪಾಯ ತಪ್ಪಿಲ್ಲ.

ನವೆಂಬರ್ 8 ರಂದು ನಡೆದ ಯು.ಎಸ್ ಕಾಂಗ್ರೆಸ್ (ಯು.ಎಸ್ ಪಾರ್ಲಿಮೆಂಟ್ ನ ಹೆಸರು) ಗೆ ಚುನಾವಣೆಗಳ ಬಹುಪಾಲು ಫಲಿತಾಂಶಗಳು ಬಂದಿವೆ. ರಿಪಬ್ಲಿಕನ್ ಪಕ್ಷವು ಪ್ರತಿನಿಧಿ ಸಭೆ (ಹೌಸ್ ಆಫ್ ರೆಪ್ರಸೆಂಟೆಟಿವ್ಸ್ – ಪಾರ್ಲಿಮೆಂಟಿನ ಕೆಳಸದನ) ಯನ್ನು ಅಧ್ಯಕ್ಷ ಬಿಡೆನ್ ಅವರ ಡೆಮೊಕ್ರಾಟಿಕ್ ಪಕ್ಷದಿಂದ ಕಸಿದುಕೊಂಡಿದೆ. ಪ್ರತಿನಿಧಿ ಸಭೆಯ 435 ಸೀಟುಗಳಲ್ಲಿ ರಿಪಬ್ಲಿಕನ್ ಪಕ್ಷ 218 ಸೀಟು ಪಡೆದು ಅಲ್ಪ ಬಹುಮತ ಗಳಿಸಿದೆ. ಇನ್ನೂ 5 ಸೀಟುಗಳ ಫಲಿತಾಂಶ ಪ್ರಕಟವಾಗಿಲ್ಲ. ಈ ವರೆಗೆ ಡೆಮೊಕ್ರಾಟಿಕ್ ಪಕ್ಷ 212 ಸೀಟು ಪಡೆದಿದೆ. ಸೆನೆಟ್ ನಲ್ಲಿ (ಕಾಂಗ್ರೆಸ್ ನಲ್ಲಿ ಮೇಲ್ ಸದನ) ಡೆಮೊಕ್ರಾಟಿಕ್ ಪಕ್ಷ ಅತಿ ಪ್ರಯಾಸದಿಂದ ಅಲ್ಪ ಬಹುಮತ ಉಳಿಸಿಕೊಂಡಿದೆ. ಸೆನೆಟ್ ನಲ್ಲಿ 100 ಸೀಟುಗಳಿದ್ದು ಡೆಮೊಕ್ರಾಟಿಕ್ ಪಕ್ಷ 50 ಮತ್ತು ರಿಪಬ್ಲಿಕನ್ ಪಕ್ಷ 49 ಸೀಟುಗಳನ್ನು ಗೆದ್ದಿದೆ.

ಯು.ಎಸ್ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ 4 ವರ್ಷಗಳಿಗೊಮ್ಮೆ ಅಧ್ಯಕ್ಷೀಯ ಚುನಾವಣೆಗಳು ನಡೆಯುತ್ತವೆ. ಪ್ರತಿ 2 ವರ್ಷಗಳಿಗೊಮ್ಮೆ ಕಾಂಗ್ರೆಸ್ ಗೆ ಚುನಾವಣೆಗಳು ನಡೆಯುತ್ತವೆ. ಕೆಳಸದನದ ಎಲ್ಲ 435 ಸೀಟುಗಳಿಗೂ ಮತ್ತು ಸೆನೆಟ್ ನ ಮೂರನೆ ಒಂದುಭಾಗದ ಸ್ಥಾನಗಳಿಗೆ ಚುನಾವಣೆ ನಡೆಯುತ್ತದೆ. ಕಾಂಗ್ರೆಸ್ ಗೆ ಚುನಾವಣೆಗಳು ಅಧ್ಯಕ್ಷೀಯ ಚುನಾವಣೆಗಳ ಜತೆಗೆ ಸಹ ನಡೆಯುತ್ತವೆ. ಎರಡು ಅಧ್ಯಕ್ಷೀಯ ಚುನಾವಣೆಗಳ ನಡುವೆ ನಡೆಯುವ ಚುನಾವಣೆಗಳಿಗೆ 'ಮಧ್ಯಂತರ ಚುನಾವಣೆ' ಎಂದು ಕರೆಯಲಾಗುತ್ತದೆ. ಪ್ರತಿನಿಧಿ ಸಭೆಯ (ಕೆಳಸದನದ) ಸದಸ್ಯರ ಅವಧಿ 2 ವರ್ಷಗಳಾದರೆ, ಅಧ್ಯಕ್ಷರ ಅಧಿಕಾರಾವಧಿ 4 ವರ್ಷಗಳು ಮತ್ತು ಸೆನೆಟ್ ಸದಸ್ಯರ ಕಾಲಾವಧಿ 6 ವರ್ಷಗಳು. ಪ್ರತಿನಿಧಿ ಸಭೆಯಲ್ಲಿ ರಾಜ್ಯಗಳ ಪ್ರಾತಿನಿಧ್ಯ ಜನಸಂಖ್ಯೆಗೆ ಅನುಗುಣವಾಗಿ (ಅತಿ ಹೆಚ್ಚು ಜನಸಂಖ್ಯೆಯ ಕ್ಯಾಲಿಫೋರ್ನಿಯಕ್ಕೆ 52 ಸೀಟು ಇದ್ದರೆ, ಅತಿ ಕಡಿಮೆ ಜನಸಂಖ್ಯೆಯ ಅಲಾಸ್ಕಾಕ್ಕೆ 1 ಸೀಟು) ಇರುತ್ತದೆ. ಆದರೆ ಸೆನೆಟ್ ನಲ್ಲಿ ಎಲ್ಲ ರಾಜ್ಯಗಳಿಗೆ ತಲಾ 2 ಸೀಟು ಇರುತ್ತದೆ. ಸೆನೆಟ್ ಸೇರಿದಂತೆ ಈ ಮೂರೂ ಚುನಾವಣೆಗಳು ನೇರ ಚುನಾವಣೆಗಳೇ. ಈ ಎರಡು ಚುನಾವಣೆಗಳ ಜತೆಗೆ ರಾಜ್ಯದ ಗವರ್ನರ್ ಮತ್ತು ಶಾಸನಸಭೆಯ ಚುನಾವಣೆಗಳೂ ನಡೆಯುತ್ತವೆ.

ಮಾಧ್ಯಮ ಭವಿಷ್ಯವಾಣಿ, ದೀರ್ಘಕಾಲೀನ ಟ್ರೆಂಡ್ ಮೀರಿದ ಫಲಿತಾಂಶ

ಈ ಬಾರಿಯ ಕಾಂಗ್ರೆಸ್ ಚುನಾವಣೆಗಳು ಹಲವು ಮಾಧ್ಯಮ ಸಮೀಕ್ಷೆಗಳ ಭವಿಷ್ಯವಾಣಿಯನ್ನು ಮತ್ತು ದೀರ್ಘಕಾಲೀನ ಟ್ರೆಂಡ್ ಗಳನ್ನು ಮೀರಿದೆ ಎಂದು ಹೇಳಲಾಗುತ್ತದೆ. ಕಾಂಗ್ರೆಸ್ ಗೆ ನಡೆಯುವ 'ಮಧ್ಯಂತರ ಚುನಾವಣೆ'ಗಳಲ್ಲಿ ಅಧ್ಯಕ್ಷರ ಪಕ್ಷ ಸೀಟುಗಳನ್ನು ಕಳೆದುಕೊಳ್ಳುವುದು ದೀರ್ಘಕಾಲೀನ ಟ್ರೆಂಡ್. 1946ರಿಂದ ಕೇವಲ 2 ಬಾರಿ ಮಾತ್ರ ಅಧ್ಯಕ್ಷರ ಪಕ್ಷ ಸೀಟುಗಳನ್ನು ಕಳೆದುಕೊಂಡಿಲ್ಲವಂತೆ. ಅದು ಮಾತ್ರವಲ್ಲ ಅಧ್ಯಕ್ಷರ ಜನಪ್ರಿಯತೆಯ ರೇಟಿಂಗ್ ಶೇ.50ಕ್ಕಿಂತ ಹೆಚ್ಚಿದ್ದರೆ ಸರಾಸರಿ 27 ಸೀಟುಗಳನ್ನು ಕಳೆದುಕೊಳ್ಳುತ್ತದೆ. ರೇಟಿಂಗ್ ಶೇ.50ಕ್ಕಿಂತ ಕಡಿಮೆಯಿದ್ದರೆ (ಬಿಡೆನ್ ಅವರ ರೇಟಿಂಗ್ ಕೇವಲ ಶೇ.42 ಇತ್ತು) ಸರಾಸರಿ 27 ಸೀಟುಗಳನ್ನು ಕಳೆದುಕೊಳ್ಳುತ್ತವೆ. ಮಾಧ್ಯಮಗಳು ರಿಪಬ್ಲಿಕನ್ ಪಕ್ಷ 222ರಿಂದ 244 ಸೀಟುಗಳನ್ನು ಗೆಲ್ಲಬಹುದು ಎಂದು ಸಮೀಕ್ಷೆಯ ಆಧಾರದ ಮೇಲೆ ಹೇಳಿದ್ದವು. ಡೆಮೊಕ್ರಾಟಿಕ್ ಪಕ್ಷ ಕಳೆದ ಸದನದಲ್ಲಿ 220 ಸೀಟು ಹೊಂದಿದ್ದು, ಈ ಬಾರಿ 8 ಸೀಟುಗಳನ್ನು ಮಾತ್ರ ಕಳೆದುಕೊಂಡಿದೆ. ಸೆನೆಟ್ ನಲ್ಲಿ ಬಹುಮತ ಉಳಿಸಿಕೊಂಡಿದೆ. ಆ ಮೂಲಕ ಮಾಧ್ಯಮ ಸಮೀಕ್ಷೆಗಳ ಭವಿಷ್ಯವಾಣಿಯನ್ನು ಮತ್ತು ದೀರ್ಘಕಾಲೀನ ಟ್ರೆಂಡ್ ಗಳನ್ನು ಮೀರಿದೆ ಎಂದು ಹೇಳಲಾಗುತ್ತದೆ.

ತೀವ್ರ ಬೆಲೆಏರಿಕೆ, ಹಣದುಬ್ಬರ ಗಳಿಂದಾಗಿ ಮತ್ತು 'ಟ್ರಂಪ್ ಅಲೆ'ಯಿಂದಾಗಿ ರಿಪಬ್ಲಿಕನ್ ಪಕ್ಷ ಜಯಭೇರಿ ಹೊಡೆಯುತ್ತದೆ, ಡೆಮೊಕ್ರಾಟಿಕ್ ಪಕ್ಷ ಭಾರೀ ಸೋಲು ಕಾಣುತ್ತದೆ ಎಂದು ಮಾಧ್ಯಮಗಳು ಹೇಳಿದ್ದವು. ಅಭ್ಯರ್ಥಿಗಳ ಆಯ್ಕೆಗೆ ನಡೆಯುವ ರಿಪಬ್ಲಿಕನ್ ಪಕ್ಷದ ಪ್ರಾಥಮಿಕ ಚುನಾವಣೆಗಳಲ್ಲಿ ಕೆಲವು ಅಭ್ಯರ್ಥಿಗಳನ್ನು ಟ್ರಂಪ್ ಬೆಂಬಲಿಸಿದ್ದು ಅವರು ಪಕ್ಷದ ಟಿಕೇಟುಗಳನ್ನು ಗೆದ್ದಿದ್ದರು. ಈ ಅಭ್ಯಕರ್ಥಿಗಳ ಪರವಾಗಿ ಟ್ರಂಪ್ ಭಾರೀ ಬಿರುಸಿನ ಪ್ರಚಾರ ನಡೆಸಿದ್ದರು. ಒಟ್ಟಾರೆಯಾಗಿ ಟ್ರಂಪ್ ತೀವ್ರ ಬೆಲೆಏರಿಕೆ, ಹಣದುಬ್ಬರಗಳನ್ನು ತಡೆಯಲು ಅಧ್ಯಕ್ಷ ಬಿಡೆನ್ ವೈಫಲ್ಯದ ವಿರುದ್ಧ ಬಿರುಸಿನ ದಾಳಿ ನಡೆಸಿದ್ದರು. ಇದಕ್ಕೆ ಮತದಾರರ ಒಂದು ವಿಭಾಗದಿಂದ ಭಾರಿ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಟ್ರಂಪ್ 2024ರಲ್ಲಿ 3ನೇ ಬಾರಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲಿದ್ದಾರೆ. ಅದಕ್ಕಾಗಿ ಈ ಬಿರುಸಿನ ಪ್ರಚಾರ ನಡೆಸಿದ್ದಾರೆ. ಈ 'ಟ್ರಂಪ್ ಅಲೆ' ಡೆಮೊಕ್ರಾಟಿಕ್ ಪಕ್ಷವನ್ನು ಗುಡಿಸಿ ಹಾಕುತ್ತದೆ ಎಂಬುದು ಮಾಧ್ಯಮಗಳ ನಿರೀಕ್ಷೆಯಾಗಿತ್ತು. ಆದರೆ ಈ ನಿರೀಕ್ಷಿತ 'ಟ್ರಂಪ್ ಅಲೆ' ಠುಸ್ ಆಗಿದೆ. ಟ್ರಂಪ್ ಬೆಂಬಲಿತ ಹೆಚ್ಚಿನ ಅಭ್ಯರ್ಥಿಗಳು ಸೆನೆಟ್, ಪ್ರತಿನಿಧಿ ಸಭೆ, ಗವರ್ನರ್, ರಾಜ್ಯಗಳ ಶಾಸನಸಭೆಗಳಲ್ಲಿ ಸೋತಿದ್ದಾರೆ. ಇದಕ್ಕೇನು ಕಾರಣವೆಂದು ಮಾಧ್ಯಮಗಳು, ಚುನಾವಣಾ ಪಂಡಿತರು ತಲೆಕೆರೆದುಕೊಳ್ಳುತ್ತಿದ್ದಾರೆ.



ರಿಪಬ್ಲಿಕನ್ ತರ್ಕ: ನಾನು ಗೆದ್ದರೆ ಓಕೆ. ಇಲ್ಲದಿದ್ದರೆ ಚುನಾವಣಾ ಅಕ್ರಮ

ರಿಪಬ್ಲಿಕನ್ ಅಲೆ ಠುಸ್ ಯಾಕಾಯಿತು?

ಚುನಾವಣೆಯ ದಿನ ಮತದಾನದ ನಂತರ ಮತ್ತು ಆ ಮೇಲೆ ಮಾಡಲಾದ ಸಮೀಕ್ಷೆಗಳಲ್ಲಿ ಮತದಾರರ ಮುಂದೆ ಇದ್ದ ಅತಿ ದೊಡ್ಡ ವಿಷಯ ಬೆಲೆಏರಿಕೆ/ಹಣದುಬ್ಬರ ಗಳಿಂದ ಉಂಟಾದ ಭರಿಸಲಾಗದ ವಿಪರೀತ ಜೀವನ ವೆಚ್ಚ ಮತ್ತು ಅದನ್ನು ಸರಿಯಾಗಿ ನಿಭಾಯಿಸುವುದರಲ್ಲಿ ಅಧ್ಯಕ್ಷ ಬಿಡೆನ್ ವೈಫಲ್ಯ. ಇದು ಮುಖ್ಯ ವಿಷಯವಾಗಿದ್ದರೆ ಡೆಮೊಕ್ರಾಟರು ಹೀನಾಯವಾಗಿ ಸೋಲಬೇಕಿತ್ತು. ಆದರೆ 'ರಿಪಬ್ಲಿಕನ್ ಅಲೆ' ಯಾಕೆ ಅಷ್ಟು ಜೋರಾಗಿ ಬೀಸಲಿಲ್ಲ. ಇದಕ್ಕೆ ಕಾರಣ ಮತದಾರರಿಗೆ ಮುಖ್ಯವಾಗಿದ್ದ ಎರಡನೆಯ ಅತಿ ದೊಡ್ಡ ವಿಷಯವಾಗಿದ್ದ, ಮಹಿಳೆಯರ ಗರ್ಭಪಾತದ ಹಕ್ಕಿನ ಮೇಲೆ ತೀವ್ರ ನಿರ್ಬಂಧಗಳನ್ನು ಹೇರುವ, ಹೆಚ್ಚು ಕಡಿಮೆ ನಿಷೇಧ ಹೇರುವ ಸುಪ್ರೀಂ ಕೋರ್ಟಿನ ತೀರ್ಪು. ಇದು ಮಹಿಳೆಯರ ದೊಡ್ಡ ವಿಭಾಗ ಮತ್ತು ಶೇ.70 ಯುವಜನರನ್ನು ಬಾಧಿಸಿದ್ದು ಸಾರಾ ಸಗಟಾಗಿ ರಿಪಬ್ಲಿಕನ್ ರನ್ನು ಸೋಲಿಸಲು ಅವರು ದೊಡ್ಡ ಸಂಖ್ಯೆಯಲ್ಲಿ ಮತದಾನದಲ್ಲಿ ಭಾಗವಹಿಸಿದರು ಎನ್ನಲಾಗಿದೆ.

2020ರ ಅಧ್ಯಕ್ಷೀಯ ಚುನಾವಣೆಯಲ್ಲಿ ಡೆಮೊಕ್ರಾಟರು ಮೋಸದಲ್ಲಿ ಗೆದ್ದಿದ್ದಾರೆ. ಈಗಲೂ ಮೋಸ ಮಾಡುವವರಿದ್ದಾರೆ. ಹಾಗೆ ಮೋಸ ಮಾಡಿದರೆ 2021 ಜನವರಿ 6 ಕ್ಕೆ ಮಾಡಿದ ಹಾಗೆ ತನ್ನ ಬೆಂಬಲಿಗರು ನೇರ ಹಿಂಸಾತ್ಮಕ ಕಾರ್ಯಾಚರಣೆಗೆ ಹಿಂಜರಿಯುವುದಿಲ್ಲವೆಂಬ ಟ್ರಂಪ್ ಪ್ರಚಾರವೇ ರಿಪಬ್ಲಿಕನ್ನರಿಗೆ ಗರ್ಭಪಾತ ವಿಷಯದಂತೆ ಮುಳುವಾಗಿರಬಹುದು ಎಂದು ಅಂದಾಜು ಮಾಡಲಾಗಿದೆ. ಟ್ರಂಪ್ ಅವರ ಈ ಪ್ರಚಾರ ಮತ್ತು ವಲಸೆಗಾರರ ಮೇಲೆ ದ್ವೇಷ ಕಾರುವ ಅಭಿಯಾನ ಅವರ ಅಭಿಮಾನಿಗಳಾದ ಬಡ ಬಿಳಿಯ ಮತ್ತು ಉಗ್ರ ಬಲಪಂಥೀಯ ಬೆಂಬಲಿಗರನ್ನು ಅಣಿನೆರೆಸಲು ಸಹಾಯಕವಾಯಿತು. ಆದರೆ 2021 ಜನವರಿ 6 ರ ಹಿಂಸಾಚಾರವನ್ನು ಮತ್ತು ಚುನಾವಣಾ ಫಲಿತಾಂಶವನ್ನು ಒಪ್ಪದೆ ಪ್ರಜಾಪ್ರಭುತ್ವ ನಿಯಮಗಳನ್ನು ಗಾಳಿಗೆ ತೂರಿದ್ದನ್ನು ರಿಪಬ್ಲಿಕನ್ ಬೆಂಬಲಿಗರ ಒಂದು ವಿಭಾಗ ಇಷ್ಟಪಡಲಿಲ್ಲ. ಟ್ರಂಪ್ ಬೆಂಬಲಿತ ಹಲವು ಅಭ್ಯಿಗಳು ರಿಪಬ್ಲಿಕನ್ ಪ್ರಬಲವಾಗಿರುವ ಕ್ಷೇತ್ರಗಳಲ್ಲೂ ಸೋತಿದ್ದನ್ನು ಇದಕ್ಕೆ ಉದಾಹರಿಸಲಾಗಿದೆ. ರಿಪಬ್ಲಿಕನ್ ಭಾರೀ ಬಹುಮತದಿಂದ ಗೆದ್ದರೆ ಟ್ರಂಪ್ ರಿಪಬ್ಲಿಕನ್ ಅಭ್ಯರ್ಥಿ ಆಗುವ ಸಾಧ್ಯತೆ ಹೆಚ್ಚು, ಅದು ರಿಪಬ್ಲಿಕನ್ನರಿಗೆ ಮುಳುವಾಗಬಹುದು ಎಂಬ ಆತಂಕವೂ ಇತ್ತು. ಆದ್ದರಿಂದ ಟ್ರಂಪ್ ಬೆಂಬಲಿತ ಅಭ್ಯರ್ಥಿಗಳನ್ನು ವಿಶೇಷವಾಗಿ ಸೋಲಿಸಲಾಯಿತು. ರಿಪಬ್ಲಿಕನ್ ಅಧ್ಯಕ್ಷ ಅಭ್ಯರ್ಥಿ ಸ್ಥಾನಕ್ಕೆ ಟ್ರಂಪ್ ಗೆ ಪ್ರತಿಸ್ಪರ್ಧಿಯಾದ ಡಿ ಸಾಂಟಿಸ್ ಫ್ಲಾರಿಡಾ ಗವರ್ನರ್ ಪದವಿಗೆ ಶೇ.20ಕ್ಕೂ ಹೆಚ್ಚು ಅಂತರದಿಂದ ಆಯ್ಕೆಯಾಗಿರುವುದು ಟ್ರಂಪ್ ಗೆ ಹಿನ್ನಡೆ ಎನ್ನಲಾಗಿದೆ.

ಟ್ರಂಪ್ ಮತ್ತು ರಿಪಬ್ಲಿಕನ್ನರ ವಿರುದ್ಧ ಸಂಘಟಿತ ಕಾರ್ಮಿಕ ಸಂಘಗಳು, ಮಹಿಳಾವಾದಿ, ಅಲ್ಪಸಂಖ್ಯಾತ, ಪರಿಸರ ಸಂಬಂಧಿತ ಜನಚಳುವಳಿಗಳ ಬಿರುಸಿನ ಪ್ರಚಾರ ಸಹ ಪರಿಣಾಮಕಾರಿಯಾಗಿತ್ತು. ಅಮೆರಿಕದ 'ಎಡಪಂಥ' ಎನ್ನಲಾದ ಡೆಮೊಕ್ರಾಟಿಕ್ ಸೋಶಲಿಸ್ಟ್ ಕಾಂಗ್ರೆಸ್ ಸದಸ್ಯರ ಸಂಖ್ಯೆ 4ರಿಂದ 6ಕ್ಕೆ ಏರಿದೆ. ರಾಜ್ಯಗಳ ಶಾಸನ ಸಭೆಗಳಲ್ಲೂ ಹಲವು ಡೆಮೊಕ್ರಾಟಿಕ್ ಸೋಶಲಿಸ್ಟ್‌ರು ಡೆಮೊಕ್ರಾಟಿಕ್ ಟಿಕೆಟ್ ಮೇಲೆ ಗೆದ್ದಿದ್ದಾರೆ

ಹಲವು ಕ್ಷೇತ್ರಗಳಲ್ಲಿ ಗನ್ ನಿಯಂತ್ರಣ, ವಲಸೆಗಾರರ ಭೀತಿ ಮತ್ತು ಕೆಲವು ಸ್ಥಳೀಯ ವಿಷಯಗಳು ಪ್ರಮುಖ ಪಾತ್ರ ವಹಿಸಿದ್ದವು. ಈ ಚುನಾವಣೆಗಳಲ್ಲಿ 2020ರ ಜನಗಣತಿಯನ್ನು ಆಧರಿಸಿ ಚುನಾವಣಾ ಕ್ಷೇತ್ರಗಳ ಮರುವಿಂಗಡಣೆ ಮಾಡಲಾಗಿತ್ತು. ಇವು ಎರಡೂ ಪಕ್ಷಗಳಿಗೆ ಕೆಲವು ರಾಜ್ಯಗಳಲ್ಲಿ/ಕ್ಷೇತ್ರಗಳಲ್ಲಿ ಲಾಭ ತಂದು ಕೊಟ್ಟಿದೆ. ಆದರೆ ಎರಡು (ಅದರಲ್ಲಿ ನ್ಯೂಯಾರ್ಕ್ ಒಂದು) ಡೆಮೊಕ್ರಾಟಿಕ್ ಪ್ರಾಬಲ್ಯದ ರಾಜ್ಯಗಳಲ್ಲಿ ಮರುವಿಂಗಡಣೆಯನ್ನು ಕೋರ್ಟು ಕಿತ್ತು ಹಾಕಿದ್ದು ರಿಪಬ್ಲಿಕನ್ನರಿಗೆ ಅಲ್ಪ ಬಹುಮತಕ್ಕೆ ಕಾರಣವಾಯಿತು ಎನ್ನಲಾಗಿದೆ.

ಪ್ರಜಾಪ್ರಭುತ್ವಕ್ಕೆ ಅಪಾಯ ತಪ್ಪಿಲ್ಲ

ಕೆಳಸದನದಲ್ಲಿ ರಿಪಬ್ಲಿಕನ್ ಬಹುಮತ, ಮೇಲ್ ಸದನದಲ್ಲಿ ಡೆಮೊಕ್ರಾಟಿಕ್ ಅಲ್ಪ ಬಹುಮತ ಅಧ್ಯಕ್ಷ ಬಿಡೆನ್, ಡೆಮೊಕ್ರಾಟಿಕ್ ಪಕ್ಷದ ಆಳ್ವಿಕೆಯನ್ನು ಕಷ್ಟಕರಗೊಳಿಸಲಿದೆ. ಟ್ರಂಪ್ ವಿರುದ್ಧ ನಡೆಸಲಾಗುತ್ತಿರುವ ತನಿಖೆ, ವಿಚಾರಣೆಗಳನ್ನು ನಿಲ್ಲಿಸಬಹುದು. ಪ್ರತೀಕಾರವಾಗಿ ಬಿಡೆನ್ ವಿರುದ್ಧ ತನಿಖೆಗಳು, ದೋಷಾರೋಪಣೆಯ ಗಂಭೀರ ಪ್ರಯತ್ನಗಳು ನಡೆಯುವ ಸಾಧ್ಯತೆಯಿದೆ. ಸ್ವಲ್ಪವಾದರೂ ಜನಪರವಾಗಿರುವ ಕನಿಷ್ಠ ವೇತನ ಏರಿಕೆ, ಬಡ ಕುಟುಂಬಗಳಿಗೆ ಆರೋಗ್ಯ ವಿಮೆ ವಿಸ್ತರಿಸುವ ಮತ್ತು ಮೆಡಿಕೇರ್, ಗಟ್ಟಿಗೊಳಿಸುವ ಬಿಡೆನ್ ಸರಕಾರದ ಕ್ರಮಗಳಿಗೆ ರಿಪಬ್ಲಿಕನ್ನರು ಅಡೆತಡೆಯನ್ನು ಒಡ್ಡಲಿದ್ದಾರೆ. ಹವಾಮಾನ ಬದಲಾವಣೆ ತಡೆಯುವ ಬಿಡೆನ್ ಕ್ರಮಗಳಿಗೂ ಕುತ್ತು ಕಾದಿದೆ. ಹಲವು ರಾಜ್ಯಗಳಲ್ಲಿ ಚುನಾವಣೆ ಜತೆಗೆ ಗರ್ಭಪಾತ ಹಕ್ಕು ಹಿಂದಿನ ಹಾಗೆ ಮುಂದುವರೆಸಬೇಕೆ ಎಂಬ ಜನಮತಸಂಗ್ರಹದಲ್ಲಿ ವ್ಯಕ್ತವಾದ ಬೆಂಬಲವನ್ನು ಜಾರಿ ಮಾಡಲು ಹೊರಟ ಡೆಮೊಕ್ರಾಟಿಕ್ ಸರಕಾರಗಳ ಕ್ರಮಗಳಿಗೂ ಅಡ್ಡಿ ಮಾಡುವ ಸಾಧ್ಯತೆಯಿದೆ. 'ಡೆಮೊಕ್ರಾಟಿಕ್ ಚುನಾವಣಾ ಮೋಸ'ದ ವಿರುದ್ಧ ಪ್ರಚಾರ ಹಿಂಸಾಚಾರ ಪ್ರಚೋದಿಸುವ ಪ್ರಯತ್ನ ನಡೆಯಲಿದೆ. ಜನರ ಜೀವನ ವೆಚ್ಚ ಏರಿಕೆ ಕಡಿಮೆ ಮಾಡುವ ಗಂಭೀರ ಕ್ರಮಗಳನ್ನು ನಿರ್ಲಕ್ಷ ಮಾಡಿ ಬಿಡೆನ್ ಉಕ್ರೇನ್ ಹುಚ್ಚಾಟ ಮುಂದುವರೆಸಿದರೆ ಇತರ ಹಲವು ದೇಶಗಳಂತೆ ಯು.ಎಸ್ ನಲ್ಲೂ ಉಗ್ರ ಬಲಪಂಥ ಗಟ್ಟಿಗೊಂಡು ಪ್ರಜಾಪ್ರಭುತ್ವಕ್ಕೆ ತೀವ್ರ ಅಪಾಯ ಕಾಡಲಿದೆ. ಎರಡು ಪಕ್ಷಗಳ ಹಣಾಹಣಿ ಸಹ ಯು.ಎಸ್ ಸಮಾಜ ಮತ್ತು ಪ್ರಜಾಪ್ರಭುತ್ವದಲ್ಲಿ ತೀವ್ರ ಬಿಕ್ಕಟ್ಟು ತರಬಹುದು.



ಯು.ಎಸ್ ಚುನಾವಣಾ ಫಲಿತಾಂಶಗಳಿಂದ ಕೆಲವು ಸಕಾರಾತ್ಮಕ ಪರಿಣಾಮಗಳು ಸಹ ಆಗುವ ಸಾಧ್ಯದತೆಗಳಿವೆ. ರಿಪಬ್ಲಿಕನ್ ಪಕ್ಷ ಬಿಡೆನ್ ಗೆ ತೊಂದರೆ ಕೊಡಲು ಉಕ್ರೇನ್ ಯುದ್ಧ ಬಜೆಟ್ ಗೂ ಸಮಸ್ಯೆ ಮಾಡಬಹುದು. ಉಕ್ರೇನ್ ಯುದ್ಧ ದೀರ್ಘಕಾಲ ಎಳೆಯುವ ಬಿಡೆನ್ ನೀತಿ ಬದಲಾಯಿಸಬೇಕಾಗಬಹುದು. ಅಂತರ್ದೇಶೀಯ ಆರ್ಥಿಕ ವಿಷಯಗಳ ಮೇಲೆ ಗಮನ ಹರಿಸಲು ಮತ್ತು ಅದಕ್ಕೆ ಹಣ ಒದಗಿಸಲು, ಮತ್ತು ಅದನ್ನು ಉಲ್ಬಣಗೊಳಿಸುತ್ತಿರುವ ಉಕ್ರೇನ್ ಯುದ್ಧ ಮತ್ತು ರಶ್ಯಾ, ಚೀನಾಗಳ ವಿರುದ್ಧ ಆಕ್ರಾಮಕ ಆರ್ಥಿಕ ಯುದ್ಧದ ಧೋರಣೆ ಸಡಿಲಿಸಲು ಒತ್ತಡ ಬರಬಹುದು.

ಹಲವು 'ಪ್ರಥಮ'ಗಳು

ಇವೆಲ್ಲದೆ, ಗವರ್ನರುಗಳ ಹುದ್ದೆಗೆ ಈ ಬಾರಿ ಚುನಾವಣೆ ನಡೆದ 35 ರಾಜ್ಯಗಳಲ್ಲಿ ಈ ವರೆಗೆ ಲಭ್ಯವಿರುವ ಫಲಿತಾಂಶಗಳ ಪ್ರಕಾರ 18 ಡೆಮೊಕ್ರಾಟರು ಗೆಲ್ಲಲಿದ್ದಾರೆ. 17 ರಿಪಬ್ಲಿಕನ್ನರ ಪಾಲಾಗಲಿದೆ. 3 ರಾಜ್ಯಗಳಲ್ಲಿ ಡೆಮೊಕ್ರಾಟರು ರಿಪಬ್ಲಿಕನ್ನರಿಂದ, 1 ರಾಜ್ಯದಲ್ಲಿ ರಿಪಬ್ಲಿಕನ್ನರು ಡೆಮೊಕ್ರಾಟರಿಂದ ಗವರ್ನರ್ ಹುದ್ದೆ ಕಸಿದಿದ್ದಾರೆ, ಈ ಚುನಾವಣೆಗಳ ನಂತರ, ಒಟ್ಟು 50 ರಾಜ್ಯಗಳಲ್ಲಿ 25 ರಾಜ್ಯಗಳಲ್ಲಿ ರಿಪಬ್ಲಿಕನ್ ಮತ್ತು 24 ರಾಜ್ಯಗಳಲ್ಲಿ ಡೆಮೊಕ್ರಾಟ್ ಗವರ್ನರ್ ಗಳು ಅಧಿಕಾರ ನಡೆಸಲಿದ್ದಾರೆ. ಒಂದು ರಾಜ್ಯದಲ್ಲಿ ಚಿತ್ರ ಇನ್ನೂ ಸ್ಪಷ್ಟವಿಲ್ಲ.

ಈ ಬಾರಿಯ ಫಲಿತಾಂಶಗಳ ಕೆಲವು 'ಪ್ರಥಮ'ಗಳು ಗಮನಾರ್ಹವಾಗಿವೆ. ಮಹಿಳಾ ಗವರ್ನರ್ ಗಳ ಸಂಖ್ಯೆ ಚಾರಿತ್ರಿಕ ಅತ್ಯಧಿಕವಾಗಿದೆ. ಹಿಂದಿನ 2004ರ ರೆಕಾರ್ಡ್ 9ನ್ನು ಮುರಿದು ಮಹಿಳಾ ಗವರ್ನರುಗಳ ಸಂಖ್ಯೆ 12ನ್ನು ಮುಟ್ಟಿದೆ. ಕಳೆದ ಬಾರಿಯ 7 ಮಹಿಳಾ ಗವರ್ನರುಗಳು ಪುನರಾಯ್ಕೆಯಾಗಿದ್ದಾರೆ. ಹಿಂದಿನ ಗವರ್ನರ್ ರಾಜೀನಾಮೆಯ ನಂತರ ಮಧ್ಯದಲ್ಲಿ ಅಧಿಕಾರ ವಹಿಸಿಕೊಂಡ ನ್ಯೂಯಾರ್ಕ್ ಗವರ್ನರ್ ಚುನಾಯಿತರಾಗಿದ್ದಾರೆ. ಎರಡು ರಾಜ್ಯಗಳಲ್ಲಿ ಮೊದಲ ಬಾರಿಗೆ ಮಹಿಳಾ ಗವರ್ನರ್ ಚುನಾಯಿತರಾಗಿದ್ದಾರೆ. ಈ ಎರಡು ರಾಜ್ಯಗಳಲ್ಲಿ ಗವರ್ನರ್ ಮತ್ತು ಲೆಫ್ಟಿನೆಂಟ್ ಗವರ್ನರ್ ಇಬ್ಬರೂ ಮಹಿಳೆಯರಾಗಿರುವುದು ಇನ್ನೊಂದು 'ಪ್ರಥಮ'. ಎರಡು ಗವರ್ನರ್ ಗಳು ಯು.ಎಸ್ ನಲ್ಲೇ ಮೊದಲ ಸಲಿಂಗಿ ಮಹಿಳಾ ಗವರ್ನರ್ ಗಳು ಎಂಬುದು ಇನ್ನೊಂದು ವಿಶೇಷತೆ. ಲಾಸ್ ಏಂಗೆಲಿಸ್ ನಲ್ಲಿ ಮೊದಲ ಮಹಿಳಾ (ಅದೂ ಆಫ್ರಿಕನ್ ಅಮೆರಿಕನ್) ಮೇಯರ್ ಆಗಿ ಆಯ್ಕೆಯಾಗಿದ್ದಾರೆ. ಆಕೆ ಶತಕೋಟ್ಯಾಧಿಪತಿ ಆಗಿರುವ 10 ಕೋಟಿ ಡಾಲರುಗಳನ್ನು ಪ್ರಚಾರಕ್ಕೆ ಸುರಿದ ರಿಪಬ್ಲಿಕನ್ ಅಭ್ಯರ್ಥಿಯನ್ನು ಸೋಲಿಸಿದ್ದಾರೆ.

ರಿಪಬ್ಲಿಕನ್ ಅಭ್ಯರ್ಥಿಗಳು ಸಾಮಾನ್ಯವಾಗಿ ಬಿಳಿಯರಾಗಿರುತ್ತಾರೆ. ಜನಾಂಗೀಯ ಅಲ್ಪಸಂಖ್ಯಾತ (ಆಫ್ರಿಕನ್-ಅಮೆರಿಕ್ ಅಥವಾ ಲ್ಯಾಟಿನೊ) ಅಭ್ಯರ್ಥಿಗಳನ್ನು ಈವರೆಗೆ ಡೆಮೊಕ್ರಾಟಿಕ್ ಪಕ್ಷ ಮಾತ್ರ ಟಿಕೆಟ್ ಕೊಟ್ಟು ಗೆಲ್ಲಿಸುತ್ತಿತ್ತು. ಮೊದಲ ಬಾರಿಗೆ ರಿಪಬ್ಲಿಕನ್ ಪಕ್ಷದಿಂದ ತಲಾ ಒಬ್ಬ ಆಫ್ರಿಕನ್-ಅಮೆರಿಕ್ ಮತ್ತು ಲ್ಯಾಟಿನೊ ಅಭ್ಯರ್ಥಿಗಳು ಪ್ರತಿನಿಧಿ ಸಭೆಗೆ ಆಯ್ಕೆಯಾಗಿದ್ದಾರೆ. ಹಲವು ರಾಜ್ಯಗಳಿಂದ ಸೆನೆಟರ್, ಪ್ರತಿನಿಧಿ ಸಭೆ ಸದಸ್ಯ, ಸೆಕ್ರೆಟರಿ ಆಫ್ ಸ್ಟೇಟ್, ಅಟಾರ್ನಿ ಜನರಲ್, ನಗರಗಳ ಮೇಯರ್ ಆಗಿ ಮೊದಲ ಬಾರಿಗೆ ಮಹಿಳೆಯರು ಅಥವಾ ಜನಾಂಗೀಯ ಅಥವಾ ಲೈಂಗಿಕ ಅಲ್ಪಸಂಖ್ಯಾತರು ಆಯ್ಕೆಯಾಗಿದ್ದಾರೆ. ಅತ್ಯಂತ ಕಿರಿಯ ಅಂದರೆ 25 ವರ್ಷದ ಯುವಕ ಪ್ರತಿನಿಧಿ ಸಭೆಗೆ ಫ್ಲಾರಿಡಾದಿಂದ ಆಯ್ಕೆಯಾಗಿದ್ದಾರೆ.

ಅರ್ಥಶಾಸ್ತ್ರವನ್ನು ಅಪ್ರಾಮಾಣಿಕತೆಯ ಮಟ್ಟಕ್ಕೆ ಇಳಿಸಿರುವ ನವ-ಉದಾರವಾದ

ಪುಟ 13 ರಿಂದ

ಆಕ್ಷೇಪಣೆಯೂ ಇಲ್ಲ. ಆದರೆ, ಭಾರತದ ರೈತ ಕೃಷಿಯನ್ನು ಕಾರ್ಯಸಾಧ್ಯವಾಗುವಂತೆ ಮಾಡುವುದು ಮಾತ್ರವಲ್ಲದೆ ಬಡವರಿಗೆ ನೆರವಾಗುವ ಸಾರ್ವಜನಿಕ ಧಾನ್ಯ ವಿತರಣಾ ವ್ಯವಸ್ಥೆಯ ನಿರ್ವಹಣೆಗೂ ಸಹ ಅತ್ಯಗತ್ಯವಾಗಿರುವ ಧಾನ್ಯ ಖರೀದಿ ವ್ಯವಸ್ಥೆಯ ಬಗ್ಗೆ ವಿಶ್ವ ವ್ಯಾಪಾರ ಸಂಘಟನೆಯು ನಿರಂತರವಾಗಿ ಭಾರತವನ್ನು ಪ್ರಶ್ನಿಸುತ್ತಲೇ ಇದೆ.

ಈ ಭಿನ್ನತೆಗೆ ಕಾರಣವೆಂದರೆ, ಬೆಳೆಗಳ ಬೆಲೆ ನಿಗದಿಯ ಮಾರ್ಗವಾಗಿ ಕೃಷಿಗೆ ನೀಡುವ ಸಬ್ಸಿಡಿಯು ಉತ್ಪಾದನೆಯ ಮಟ್ಟವನ್ನು ಪ್ರಭಾವಿಸುವುದರಿಂದ ಮಾರುಕಟ್ಟೆಯ ಸಮತೋಲ ಬದಲಾಗುತ್ತದೆ; ಆದರೆ, ನೇರ ನಗದು ಸಬ್ಸಿಡಿಗಳನ್ನು ನೀಡಿದಾಗ ಮಾರುಕಟ್ಟೆಯ ಸಮತೋಲದ ಪರಿಸ್ಥಿತಿ ಬದಲಾಗುವುದಿಲ್ಲ ಎಂಬ ಭಾವನೆಯೇ. ಮಾರುಕಟ್ಟೆಯ ಸಮತೋಲವು ಅರ್ಥವ್ಯವಸ್ಥೆಯಲ್ಲಿ ಸಂಪನ್ಮೂಲಗಳ ಅತ್ಯುತ್ತಮ ಬಳಕೆಯನ್ನು ಒಳಗೊಂಡಿರುವುದರಿಂದ, ಸರ್ಕಾರವು ನೇರ ಹಣ ವರ್ಗಾವಣೆಯ ಮಾರ್ಗವಾಗಿ ಬೆಂಬಲ ಕೊಡುವ ಕ್ರಮಕ್ಕೆ ಆದ್ಯತೆ ನೀಡುತ್ತದೆ. ಏಕೆಂದರೆ, ಈ ಕ್ರಮವು, ಮಾರುಕಟ್ಟೆಯ ಸಮತೋಲಕ್ಕೆ ಭಂಗ ತರುವುದಿಲ್ಲ ಮತ್ತು ಮಾರುಕಟ್ಟೆಗೆ ಎಷ್ಟು ಬೇಕೊ ಅಷ್ಟು ಉತ್ಪಾದನೆಯಾಗುವಂತೆ ನೋಡಿಕೊಳ್ಳುತ್ತದೆ.

ಸಬ್ಸಿಡಿಗಳ ಈ ಭಿನ್ನತೆಯು ಸಂಪೂರ್ಣವಾಗಿ ಅಪ್ರಾಮಾಣಿಕವಾದುದು. ಈ ಭಿನ್ನತೆಯನ್ನು ಸೈದ್ಧಾಂತಿಕವಾಗಿ ನಿರೂಪಿಸುವುದು ಸಾಧ್ಯವಿಲ್ಲ ಎಂಬ ಅಂಶದ ಹೊರತಾಗಿಯೂ, ನೇರ ನಗದು ವರ್ಗಾವಣೆಗಳೂ ಸಹ ಉತ್ಪಾದನೆಯ ಮಟ್ಟದ ಮೇಲೆ ಪರಿಣಾಮ ಬೀರುತ್ತವೆ. ಅಮೆರಿಕಾದಲ್ಲಿ ಗೋಧಿ ಮತ್ತು ಹತ್ತಿಯಂತಹ ಕೆಲವು ಬೆಳೆಗಳು ಅನೇಕ ವರ್ಷಗಳಲ್ಲಿ ಸೇರಿಸಿದ್ದ ಮೌಲ್ಯವು ನಕಾರಾತ್ಮಕವಾಗಿತ್ತು. ಅಂದರೆ, ಉತ್ಪಾದನೆಗಾಗಿ ಖರ್ಚು ಮಾಡಿದ ಪದಾರ್ಥಗಳ ಮೌಲ್ಯವು ಫಸಲಿನ (ಬೆಳೆ ಉತ್ಪಾದನೆಯ) ಮೌಲ್ಯವನ್ನು ಮೀರಿತ್ತು ಎಂಬ ವಿಷಯವು ಎಲ್ಲರಿಗೂ ತಿಳಿದದ್ದೇ. ಅಂತಹ ಸಂದರ್ಭಗಳಲ್ಲಿ ಮಾರುಕಟ್ಟೆ ಸಮತೋಲದ ದೃಷ್ಟಿಯಲ್ಲಿ ಉತ್ಪಾದನೆಯು ಶೂನ್ಯವಾಗಿರಬೇಕಾಗುತ್ತದೆ. ಆದರೆ, ಆ ಸಂದರ್ಭದಲ್ಲಿಯೂ ಉತ್ಪಾದನೆಯು ಸಕಾರಾತ್ಮಕವಾಗಿತ್ತು, ಏಕೆಂದರೆ, ಕೃಷಿಕರ ಕಸುಬನ್ನು ಕಾರ್ಯಸಾಧ್ಯವಾಗಿ ಉಳಿಯುವಂತೆ ನೋಡಿಕೊಳ್ಳುವ ಉದ್ದೇಶದಿಂದ ಅವರಿಗೆ ಸಬ್ಸಿಡಿಯನ್ನು ನೇರ ಹಣ ವರ್ಗಾವಣೆಯ ಮೂಲಕ ಒದಗಿಸಲಾಗಿತ್ತು. ಈ ವಿದ್ಯಮಾನವು ಸಬ್ಸಿಡಿಗಳು ಉತ್ಪಾದನೆಯನ್ನು ಪ್ರಭಾವಿಸುತ್ತವೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಹಾಗಾಗಿ, ನೇರ ನಗದು ವರ್ಗಾವಣೆಗಳು ಮಾರುಕಟ್ಟೆಯನ್ನು ವಿರೂಪಗೊಳಿಸುವುದಿಲ್ಲ ಎಂಬ ವಾದವು ಸಂಪೂರ್ಣವಾಗಿ ಆಧಾರರಹಿತವಾಗಿದೆ. ಆದ್ದರಿಂದ, ನೇರ ನಗದು ವರ್ಗಾವಣೆಗಳ ಬಗ್ಗೆ ವಿಶ್ವ ವ್ಯಾಪಾರ ಸಂಘಟನೆಯ ವ್ಯಾಖ್ಯಾನವು ತಪ್ಪು ಮಾತ್ರವಲ್ಲ, ಸಮಯಸಾಧಕವೂ ಹೌದು. ಮುಂದುವರಿದ ದೇಶಗಳ ಹಿತಾಸಕ್ತಿಗಳನ್ನು ಕಾಪಾಡುವ ಉದ್ದೇಶದಿಂದ ಅವುಗಳು ನೇರ ನಗದು ವರ್ಗಾವಣೆಗಳ ಮೂಲಕ ಒದಗಿಸುವ ಕೃಷಿ ಸಬ್ಸಿಡಿಗಳ ಬಗ್ಗೆ ಕಣ್ಣು ಮುಚ್ಚಿಕೊಳ್ಳುವ ವಿಶ್ವ ವ್ಯಾಪಾರ ಸಂಘಟನೆಯು ಭಾರತದಂತಹ ದೇಶಗಳು ನೀಡುವ ಕೃಷಿ ಸಬ್ಸಿಡಿಗಳ ಬಗ್ಗೆ ಮುಗಿಬೀಳುತ್ತದೆ.

ಎಂಎಸ್‌ಪಿ ರದ್ದು ಮಾಡುವ ಅಪ್ರಾಮಾಣಿಕತೆ

ನನ್ನ ಮೂರನೆಯ ಉದಾಹರಣೆಯನ್ನು ಭಾರತ ಸರ್ಕಾರದ ಕೃಷಿ ನೀತಿಯಿಂದ ತೆಗೆದುಕೊಳ್ಳಲಾಗಿದೆ. ದೀರ್ಘಕಾಲದಿಂದಲೂ ಜಾರಿಯಲ್ಲಿರುವ, ಆಹಾರ ಧಾನ್ಯಗಳಿಗೆ ಒದಗಿಸುತ್ತಿರುವ ಕನಿಷ್ಠ ಬೆಂಬಲ ಬೆಲೆ ಪದ್ಧತಿಯನ್ನು ತೆಗೆದುಹಾಕಬೇಕೆಂದು ಸಮರ್ಥಿಸುವ ವಾದವೇನೆಂದರೆ, ಈ ಕ್ರಮವು ರೈತರು ಇತರ ಹೆಚ್ಚು ಲಾಭದಾಯಕ ಬೆಳೆಗಳತ್ತ ಹೊರಳುವ ಬದಲು, ಆಹಾರ ಧಾನ್ಯಗಳ ಉತ್ಪಾದನೆಯನ್ನೇ ಮುಂದುವರಿಸಲು ಪ್ರೋತ್ಸಾಹಿಸುತ್ತದೆ ಎಂಬುದು. ತೀವ್ರ ಹಸಿವಿನಿಂದ ಬಳಲುತ್ತಿರುವ ಭಾರತದಂತಹ ದೇಶದಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯಿಂದ ವಿಮುಖವಾಗುವುದು ಖಂಡಿತವಾಗಿಯೂ ಅಸಂಬದ್ಧವೇ. ಆಹಾರ ಧಾನ್ಯಗಳಿಗೆ ಬೇಡಿಕೆ ಅಸಮರ್ಪಕವಾಗಿರುವ ಕಾರಣದಿಂದ ಸರ್ಕಾರದ ಬಳಿ ಆಹಾರಧಾನ್ಯಗಳ ದಾಸ್ತಾನು-ಸಂಗ್ರಹವು ತುಂಬಿ ತುಳುಕುತ್ತಿದ್ದರೆ, ಆಗ, ಆಹಾರ ಧಾನ್ಯಗಳ ಉತ್ಪಾದನೆಯನ್ನು ಕಡಿತಗೊಳಿಸುವುದು ಪರಿಹಾರವಲ್ಲ. ಬದಲಿಗೆ, ಜನರ ಕೈಯಲ್ಲಿ ಕೊಳ್ಳುವ ಶಕ್ತಿಯನ್ನು ತುಂಬುವುದೇ ಸರಿಯಾದ ಪರಿಹಾರ. ಇದನ್ನು ನಾವು ಸದ್ಯಕ್ಕೆ ನಿರ್ಲಕ್ಷಿಸೋಣ.

ಆಹಾರಧಾನ್ಯಗಳಿಗೆ ಬದಲಾಗಿ ಇತರ ಬೆಳೆಗಳ ಉತ್ಪಾದನೆಯತ್ತ ರೈತರು ಹೊರಳಿದರೆ, ಆಗ, ಇತರ ಬೆಳೆಗಳ ಉನ್ನತ ಮಟ್ಟದ ಲಾಭದಾಯಕತೆಯು ಕಾರಣದಿಂದ ರೈತರಿಗೆ ತಕ್ಷಣವೇ ಪ್ರಯೋಜನವಾಗುತ್ತದೆ, ನಿಜ. ಆದರೆ, ಇತರ ಬೆಳೆಗಳಿಗೂ ಕನಿಷ್ಠ ಬೆಂಬಲ ಬೆಲೆ ಆಡಳಿತವನ್ನು ಜಾರಿಗೆ ತರದ ಹೊರತು, ಕಾಲಾನಂತರದಲ್ಲಿ ಬೆಲೆಗಳ ಕುಸಿತ ಉಂಟಾದಾಗ ರೈತರು ನಾಶವಾಗುತ್ತಾರೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಆಹಾರಧಾನ್ಯಗಳ ಉತ್ಪಾದನೆಯಿಂದ ಹೊರಳಿ ಇತರ ಬೆಳೆಗಳ ಉತ್ಪಾದನೆಯತ್ತ ಬದಲಾಗಬೇಕು ಎಂಬ ವಾದವು ಕನಿಷ್ಠ ಬೆಂಬಲ ಬೆಲೆ ವ್ಯವಸ್ಥೆಯನ್ನು ಹೊಂದಿರಬೇಕು ಎಂಬ ವಾದಕ್ಕಿಂತ ಸಂಪೂರ್ಣವಾಗಿ ಭಿನ್ನವಾಗಿದೆ. ರೈತರು ಆಹಾರ ಧಾನ್ಯಗಳ ಉತ್ಪಾದನೆಯಿಂದ ಹೊರಳಬೇಕೆಂದು ಸರ್ಕಾರವು ಒಂದು ವೇಳೆ ಬಯಸಿದರೆ, ಆಗ, ಇತರ ಬೆಳೆಗಳಿಗೂ ಕನಿಷ್ಠ ಬೆಂಬಲ ಬೆಲೆ ಕೊಡಲು ಮುಂದಾಗಬೇಕಾಗುತ್ತದೆ ಮತ್ತು ರೈತರನ್ನು ಪ್ರೇರೇಪಿಸುವ ರೀತಿಯಲ್ಲಿ ಕನಿಷ್ಠ ಬೆಂಬಲ ಬೆಲೆಗಳಲ್ಲಿ ಕೈಚಳಕ ಮಾಡಿಯೇ ಅವರನ್ನು ಇತರ ಬೆಳೆಗಳಿಗೆ ಬದಲಾಗುವಂತೆ ಮಾಡಬೇಕಾಗುತ್ತದೆ. ಆಹಾರ ಧಾನ್ಯಗಳಲ್ಲದ ಇತರ ಬೆಳೆಗಳಿಗೆ ಹೊರಳುವಂತೆ ರೈತರ ಮನವೊಲಿಸುವ ಸಲುವಾಗಿ ಈಗಾಗಲೇ ಜಾರಿಯಲ್ಲಿರುವ ಆಹಾರ ಧಾನ್ಯಗಳ ಮೇಲಿನ ಕನಿಷ್ಠ ಬೆಂಬಲ ಬೆಲೆ ಪದ್ಧತಿಯನ್ನು ರದ್ದು ಮಾಡುವುದು ತಪ್ಪು ಮಾರ್ಗವಾಗುತ್ತದೆ. ಇದು ತಪ್ಪು ಮಾತ್ರವಲ್ಲ, ಇದು ಸಮಯಸಾಧಕತನವೂ ಹೌದು. ಏಕೆಂದರೆ, ಬೆಲೆ ಬೆಂಬಲವನ್ನು ತೆಗೆದುಹಾಕುವುದರಿಂದ ರೈತರು ಮೊದಲಿಗಿಂತ ಉತ್ತಮ ಸ್ಥಿತಿಯಲ್ಲಿರುತ್ತಾರೆ ಎಂಬ ಒಂದು ಸಂಪೂರ್ಣ ಮತ್ತು ಉದ್ದೇಶಪೂರ್ವಕ ಸುಳ್ಳು ಪ್ರತಿಪಾದನೆಯ ಮೇಲೆ ರೈತರಿಗೆ ಕೊಡುವ ಬೆಲೆ ಬೆಂಬಲವನ್ನು ತೆಗೆದುಹಾಕುವ ವಿಶ್ವ ವ್ಯಾಪಾರ ಸಂಘಟನೆಯ ಕಾರ್ಯಸೂಚಿಯನ್ನು ಮುಂದೊಯ್ಯುತ್ತದೆ. ವಾಸ್ತವವಾಗಿ, ಬೆಲೆ ಬೆಂಬಲವನ್ನು ತೆಗೆದು ಹಾಕಿದಾಗ ಒಂದು ವೇಳೆ ರೈತರು ತಕ್ಷಣವೇ ಲಾಭ ಪಡೆದರೂ ಸಹ, ನಂತರ ಅವರು ನಷ್ಟದ ತೀವ್ರ ಅಪಾಯಕ್ಕೆ ಒಡ್ಡಿಕೊಳ್ಳುತ್ತಾರೆ.

ಅರ್ಥಶಾಸ್ತ್ರದ ಹೆಸರಿನಲ್ಲಿ ತನ್ನ ಕಾರ್ಯಸೂಚಿಯನ್ನು ಉತ್ತೇಜಿಸುವ ಸಲುವಾಗಿ ನಿಷ್ಪಕ್ಷಪಾತರಲ್ಲದ ಅರ್ಥಶಾಸ್ತ್ರಜ್ಞರ ಒಂದು ಸೈನ್ಯವನ್ನೇ ಬಳಸುವ ನವ ಉದಾರವಾದಿ ಯುಗದಲ್ಲಿ ಅಪ್ರಾಮಾಣಿಕತೆಯು ಖಂಡಿತವಾಗಿಯೂ ಅದರ ಒಂದು ಹೆಗ್ಗುರುತೇ.

ಹೋರಾಟ ನಿರತರ ಮೇಲಿನ ಪ್ರಕರಣದಿಂದ ಬಿಡುಗಡೆಗೊಳಿಸಿ ದೋಷಮುಕ್ತಗೊಳಿಸಿದ ಮಾನ್ಯ ಮೆಟ್ರೊಪೊಲಿಟನ್ ನ್ಯಾಯಾಲಯ.... ಪುಟ 16 ರಿಂದ

ಅಭಿಮುಖವಾಗಿ ಹಗಲು ರಾತ್ರಿ ಬೀದಿಯಲ್ಲಿ ಕುಳಿತುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಯಿತು. ನಾಡಿನ ಸಾಂಸ್ಕೃತಿಕ ಕಲೆ ಸಾಹಿತ್ಯ ಸಂಘಟನಾತ್ಮಕ ಮಹತ್ವದ ಅನೇಕ ಬುದ್ಧಿಜೀವಿಗಳು, ಹೋರಾಟಗಾರರು, ರೈತ ಕಾರ್ಮಿಕ ವಿದ್ಯಾರ್ಥಿ ಯುವಜನ ಮಹಿಳಾ ಸಂಘಟನೆಗಳು, ವಿವಿಧ ಜನಪರ ಸಂಘಟನೆಗಳು ಸ್ಥಳಕ್ಕೆ ನೂರಾರು ಸಂಖ್ಯೆಯಲ್ಲಿ ಬಂದು ಹೋರಾಟನಿರತರಿಗೆ ಸ್ಥೈರ್ಯ ತುಂಬಿದರು. ಅಂತೂ ಹೋರಾಟಕ್ಕೆ ಮಣಿದ ಸರ್ಕಾರ ಮಾತುಕತೆ ನಡೆಸಿತು. ಒಂದು ಹಂತದ ಲಿಖಿತ ಭರವಸೆ ನಂತರವೇ ಹೋರಾಟ ಹಿಂಪಡೆಯಲಾಯಿತು ಎಂಬುದೀಗ ಐತಿಹಾಸಿಕ ಮಹತ್ವ ಪಡೆದಿದೆ. ಬೇಡಿಕೆಗಳು ನ್ಯಾಯಬದ್ಧವಾಗಿದ್ದಾಗ್ಯೂ, ಹೋರಾಟದ ಮುನ್ಸೂಚನೆ ನೀಡಿಯೇ ಜಿಲ್ಲಾ ಮಟ್ಟದಲ್ಲಿ ಹನ್ನೆರಡು ದಿನಗಳ ಕಾಲ ಧರಣಿ ನಡೆಸಿದಾಗ ಸ್ಪಂದಿಸದ ಕ್ರಮ ಖಂಡಿಸಿ ನಂತರವೇ ರಾಜ್ಯ ಮಟ್ಟಕ್ಕೆ ಬರುವಂತಾದರೂ ಹೋರಾಟದ ನಾಯಕತ್ವ ವಹಿಸಿಕೊಂಡವರ ಮೇಲೆ ಪ್ರಕರಣ ದಾಖಲಿಸಲಾಯಿತು. ಅಂತೆಯೇ ಸತತ ಆರು ವರ್ಷಗಳ ನಂತರ ಇಂದು ಈ ಸಂಜೆ ಮಾನ್ಯ ಎಂಎಸಿಟಿ ನ್ಯಾಯಾಲಯವು ನಮ್ಮನ್ನೆಲ್ಲ ಬಿಡುಗಡೆಗೊಳಿಸಿದೆ. ಇದನ್ನು ನಮ್ಮ ಸಂಘಟನೆಯು ಸ್ವಾಗತಿಸಿದೆ. ಸತ್ಯ ಮತ್ತು ನ್ಯಾಯಬದ್ಧ ಹೋರಾಟಕ್ಕೆ ಎಷ್ಟೇ ತಡವಾದರೂ ನ್ಯಾಯ ದೊರಕುತ್ತದೆಂಬ ಅಚಲವಾದ ನಂಬಿಕೆಯೊಂದಿಗೆ ನಾವು ಮಾನ್ಯ ನ್ಯಾಯಪೀಠಕ್ಕೆ ಧನ್ಯವಾದ ಸಲ್ಲಿಸಿ ಹೊರಬಂದೆವು. ಅಂದು ಹೋರಾಟಕ್ಕೆ ಜೊತೆಯಾದವರನ್ನು ಮತ್ತು ನಮ್ಮ ಪರ ವಕಾಲತ್ತು ವಹಿಸಿದ ವಕೀಲರಾದ ಶರಣಬಸವ ಮರದ್ (ಆಲ್ ಇಂಡಿಯಾ ಲಾಯರ್ಸ್ ಯೂನಿಯನ್ ನ ಮುಖಂಡರು) ಹಾಗೂ ಸಹನೆಯಿಂದ ಆರು ವರ್ಷ ಕಾದವರಿಗೂ ವಂದನೆಗಳು.

ಮೇಲ್ಕಾಣಿಸಿದ ಬಹುತೇಕ ಬೇಡಿಕೆಗಳಲ್ಲಿ ಕೆಲವಷ್ಟನ್ನು ಈ ಆರು ವರ್ಷದ ಅವಧಿಯಲ್ಲಿ ಗೆಲ್ಲಲಿಕ್ಕೆ ಸಾಧ್ಯವಾಗಿದೆ. ಇದು ಕೇವಲ ಸಿಐಟಿಯು ನೇತೃತ್ವದಲ್ಲಿ ಇರುವವರಿಗೆ ಮಾತ್ರವಲ್ಲ ಇಡೀ ರಾಜ್ಯದ ಅಂಗನವಾಡಿ ನೌಕರರಿಗೆ ಉಪಯೋಗವಾಗಿದೆ. ಹಾಗೂ ದೇಶದಲ್ಲೇ ಮೊದಲ ಬಾರಿ ನಾವು ಸೇವಾ ಜ್ಯೇಷ್ಠತೆ ಆಧಾರದಲ್ಲಿ ಗೌರವಧನ ಹೆಚ್ಚಳ ಪಡೆಯಲು ಸಾಧ್ಯವಾಗಿದೆ. ಬೇರೆ ರಾಜ್ಯದ ಹೋರಾಟಕ್ಕೂ ಪ್ರೇರಣೆ ನೀಡಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE November 21-27, 2022 Price: Rs. 10/- Date of Publication: 18 November 2022 RNI No. KARKAN /2006/17926 Posted on 22-11-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate** - Rs. 2

ಕಾಂತಾರದ ಅಂತರಂಗ


ರಾಜೇಂದ್ರ ಉಡುಪ

ಇದು ಕಾಂತಾರದ ಚಿತ್ರ ವಿಮರ್ಶೆ ಅಲ್ಲ. ಅದು ಕಮರ್ಶಿಯಲ್ ಯಶಸ್ಸಿಗೆ ಬೇಕಾದ ಎಲ್ಲಾ ಫಾರ್ಮುಲಾಗಳನ್ನು (ಪ್ರೇಮ, ಫೈಟಿಂಗ್, ಹಿಂಸಾಚಾರ, ಸ್ಥಳೀಯ ವಿಶೇಷ ಆಚರಣೆಗಳು) ಒಳಗೊಂಡ ಒಂದು ಚಿತ್ರ. ಆದರೆ ಅದು ಅದಕ್ಕಿಂತ ಹೆಚ್ಚಿನ 'ಕಲಾತ್ಮಕತೆ'ಯ, 'ಸದಭಿರುಚಿ'ಯ, 'ರ್‍ಯಾಡಿಕಲ್ ರಾಜಕೀಯ ಧೋರಣೆ'ಯ ಚಿತ್ರ ಆಗಿರುವ ಪೋಸ್ ಕೊಡುತ್ತದೆ. ಅದು ನಿಜವಲ್ಲ ಎಂದು ವಾದಿಸುವ, ಪ್ರಮುಖವಾಗಿ ಅದರ ಹುಸಿ 'ರ್‍ಯಾಡಿಕಲ್ ರಾಜಕೀಯ ಧೋರಣೆ'ಯನ್ನು ಬಯಲುಗೊಳಿಸುವ ವಿಶ್ಲೇಷಣೆಯಿದು.

ಕಾಂತಾರ ಸಿನೇಮಾದ ವಿಚಾರದಲ್ಲಿ ಬಿಸಿ ಬಿಸಿ ಚರ್ಚೆಗಳು ಇನ್ನೂ ನಡೆಯುತ್ತಿವೆ. ಅನೇಕರು ಇದನ್ನು ಕ್ರಾಂತೀಕಾರೀ ವರ್ಗ ಹೋರಾಟದ ಕಲಾತ್ಮಕ ರೂಪ ಎಂದೂ, ವೈದಿಕ ಸಂಸ್ಕೃತಿಗೆ ಸೆಡ್ಡು ಹೊಡೆದು ನಿಂತ ಕರಾವಳಿಯ ನೆಲ ಮೂಲ ಸಂಸ್ಕೃತಿಯ ಉತ್ತಮ ಚಿತ್ರಣ ಎಂದೂ, ನಿರೂಪಣೆ ಮಾಡಿದ್ದನ್ನು ನೋಡಿದ್ದೇವೆ. ಆದರೆ ಅದರ ಆಳದಲ್ಲಿ ಹುದುಗಿದ ಪ್ರತಿಗಾಮಿ ತತ್ವವನ್ನು ಗಮನಿಸದೇ, ಮಾನಸಿಕ ಉದ್ವೇಗಕ್ಕೊಳಗಾಗಿ ಮಾಡುವ ಈ ನಿರೂಪಣೆಗಳು ಹಾದಿ ತಪ್ಪಿಸುತ್ತಿವೆ.

ಕರಾವಳಿ ಜನ ಸಾಮಾನ್ಯರಲ್ಲಿ ಒಂದು (ಮೂಢ) ನಂಬಿಕೆ ಇದೆ. 'ಗೂಳಿಗ ಭೂತ ಹೇಳಿದಂತೆ ಕೇಳಿ, ಹಾಗೇ ನಡೆಯಿರಿ. ಇಲ್ಲವಾದರೆ ರಕ್ತಕಾರಿ ಸಾಯುತ್ತೀರಿ. ಇದು ಗೂಳಿಗನ ಕಾರಣಿಕ'. ಕಾಂತಾರದ ಕಥೆಯಲ್ಲಿ ಮುಂಬೈಯಿಂದ ಬಂದ ನವಯುವಕನೊಬ್ಬ ನೆಲೊಡೆತನದ ಸಮಸ್ಯೆಯ ಪರಿಹಾರಕ್ಕೆ ಭೂತದ ವಾಕ್ಕನ್ನು ಧಿಕ್ಕರಿಸಿ ನ್ಯಾಯಾಲಯಕ್ಕೆ ಹೋಗುತ್ತಾನೆ. ಇದರ ಪರಿಣಾಮವಾಗಿ ರಕ್ತಕಾರಿ ಸಾಯುತ್ತಾನೆ. ಕಥೆಯ ಈ ತುಣುಕನ್ನು ಸಿನೇಮಾದ ಮೊದಲ ಹಂತದಲ್ಲೇ ತುರುಕಲಾಗಿದೆ.

'ಸಂವಿಧಾನ ಬದ್ಧ ನ್ಯಾಯತೀರ್ಮಾನಗೌಣ ಹಾಗೂ ಅಸಮರ್ಪಕ, ಆದುದರಿಂದ ನೆಲಮೂಲ ಸಂಸ್ಕೃತಿಯಿಂದ ಬಂದ



ಭೂತದ ನ್ಯಾಯ (ಇಲ್ಲವೇ ಧರ್ಮಸ್ಥಳದ ನ್ಯಾಯ) ವೇ ನಿಜವಾದ ಪರಿಹಾರ' ಎಂಬ ಸಂವಿಧಾನ ವಿರೋಧಿ ನಿಲುವು ಕಳೆದ ಮೂರುನಾಲ್ಕು ದಶಕಗಳಿಂದ ಚಲಾವಣೆಯಲ್ಲಿರುವುದನ್ನು ನಾವು ನೋಡಿದ್ದೇವೆ. ಕಾಂತಾರದ ಪ್ರಾಥಮಿಕ ಸೂಚನೆಯೂ ಅದೇ ಆಗಿದೆ. ಕಾಂತಾರ ಸಿನೇಮಾ ಭೂಮಿ ಪ್ರಶ್ನೆ ಕೇಂದ್ರಿತವಾದ ವರ್ಗ ದ್ವಂದ್ವವನ್ನು ಗುರುತಿಸಿದೆ. ಅದು ಸರಿಯಾಗಿ ಇದೆ, ಆದರೆ ಅದಕ್ಕೆ ಸಂವಿಧಾನಾತ್ಮಕ ಹೋರಾಟದ ಮಾರ್ಗವನ್ನು ಅಲ್ಲಗೆಳೆಯುತ್ತದೆ ಮತ್ತು ಸಮಸ್ಯೆಯ ಪರಿಹಾರವನ್ನು ಮೌಢ್ಯದ ಭ್ರಮಾ ಲೋಕಕ್ಕೆ ಕೊಂಡೊಯ್ಯುತ್ತದೆ.

ಕಾಂತಾರ ಸಿನೇಮಾ ಅತೀ ಮಾನುಷ ಶಕ್ತಿ ಹೀರೊನಿಂದ ಅರ್ಥಹೀನ ಹಿಂಸೆಯನ್ನು ದಾಖಲಿಸುತ್ತದೆ ಮತ್ತು ಹಿಂಸೆಯ ಪ್ರಕ್ರಿಯೆ ಕ್ಯಾಮರಾದ ಸನಿಹದಲ್ಲೇ ನಡೆಯುತ್ತದೆ. ಇದು ಹಿಂಸೆಯ ವಿಜೃಂಭಣೆ.

ಕರಾವಳಿಯ ಭೂತಗಳು (ನಾಗನನ್ನು ಸೇರಿಸಿ) ವೈದಿಕೀಕರಣಗೊಂಡ ದುರಂತವನ್ನು ನಾವು ನೋಡಿದ್ದೇವೆ. ಇದರಲ್ಲಿ ಪುರೋಹಿತರು, ಜ್ಯೋತಿಷಿಗಳು, ಕವಡೆ ಎಸೆಯುವವರು, ಅಷ್ಟ ಮಂಗಳದವರು, ತಾಂಬೂಲ ನೋಡುವವರು ಭಾಗಿಯಾಗಿರುತ್ತಾರೆ. ಇದರೊಂದಿಗೆ ಭೂತಗಳು ವ್ಯಾಪಾರೀಕರಣಕ್ಕೂ ಒಳಗಾಗಿವೆ. ಇದಕ್ಕಾಗಿ ಕರಾವಳಿ ಹೊರಗಿನಿಂದ ಅಗಾಧ ಬಂಡವಾಳ ಹರಿದು ಬರುತ್ತದೆ. ಹೊರಗಿನಿಂದ ಹರಿದು ಬರುವ ಬಂಡವಾಳದ ನಡೆಯ ಮೂಲ ಗುಟ್ಟಾಗಿ ಏನು ಉಳಿದಿಲ್ಲ. ವ್ಯಾಪಾರೀಕರಣದ ಸ್ಪರ್ಧೆಯಲ್ಲಿ ಮುಂದಿರುವ ಕೆಲವು ದೈವ ದೇವರುಗಳು, ಕಾರ್ಪೊರೇಟಿಕರಣಕ್ಕೆ ಒಳಗಾದದ್ದನ್ನು ನೋಡಿದ್ದೇವೆ. ಶಬರಿ ಮಲೈ, ಧರ್ಮಸ್ಥಳ, ತಿರುಪತಿ ಕೆಲವು ಉದಾಹರಣೆಗಳು. ಕಾಂತಾರದ ಜನಪ್ರಿಯತೆಯನ್ನು ನೋಡಿದರೆ ಪಂಜುರ್ಲಿ ಭೂತವೋ (ಇಲ್ಲ ಅಣ್ಣಪ್ಪ ಭೂತವೋ) ಕಾರ್ಪೊರೇಟಿಕರಣಗೊಳ್ಳುವುದರಲ್ಲಿ ಅನುಮಾನವಿಲ್ಲ. ಕಾಂತಾರ ಸಿನೇಮಾ ಹಾಕಿದ ಬಂಡವಾಳಕ್ಕೆ ಅಗಾಧ ಲಾಭ ತಂದುಕೊಟ್ಟಿದೆ, ಮುಂದೆ ಭೂತಕ್ಕೂ ಅಗಾಧ ಲಾಭ ಬರಬಹುದು.

ಭೂಮಾಲಕನ ತೈನಾತಿ ಆಗಿದ್ದ, ಕಾಡಿನ ಮರಕಡಿಯುವ, ಕಾನೂನಿಗೆ ವಿರುದ್ಧವಾಗಿ ಕಾಡು ಪ್ರಾಣಿಗಳನ್ನು ಕೊಲ್ಲುವ, ಅತಿಯಾದ ಕುಡಿತದ ಚಟ ಹಚ್ಚಿಕೊಂಡ ಒಬ್ಬನನ್ನು ಅವನ ಅತಿಮಾನುಷ ಪೌರುಷ, ದುಃಸಾಹಸ, ಹಿಂಸೆಗಳಿಂದ ಹೀರೊ ಆಗಿ ರೂಪಿಸುವುದು ಸಿನೇಮಾ ಪ್ರಪಂಚದಲ್ಲಿ ಹೊಸದೇನು ಅಲ್ಲ. ಇತ್ತೀಚೆಗೆ ಹಿಂಸೆಯ ವೈಭವೀಕರಣದ ಚಿತ್ರಗಳು ಬಂದಿರುವುದನ್ನು ಗಮನಿಸಿದ್ದೇವೆ. ಇವೆಲ್ಲವೂ ಸಂಘ ಪರಿವಾರದ ಬತ್ತಳಿಕೆಯನ್ನು ಸೇರಿದ್ದನ್ನೂ ನೋಡಿದ್ದೇವೆ. ಕಾಂತಾರದಲ್ಲಿ ದಟ್ಟವಾಗಿ ಹರಡಿದ ರಾಜಕೀಯ ಛಾಯೆಯನ್ನು ಅಲಕ್ಷಿಸುವುದು ದಡ್ಡತನವಾಗುತ್ತದೆ.

ಸಂವಿಧಾನಾತ್ಮಕ ಹೋರಾಟದ ಆಯುಧಗಳನ್ನು ಬಿಟ್ಟು ಹಿಂಸೆಯನ್ನೆ ಪ್ರಾಥಮಿಕವಾಗಿಸಿದ್ದರಿಂದ ಹೋರಾಟದಲ್ಲಿ ಹೆಂಗಸರ ಸ್ಥಾನ ಗೌಣವಾಗುತ್ತದೆ. ಮಾತ್ರವಲ್ಲ, ಇತರ ಕಮರ್ಶಿಯಲ್ ಸಿನೆಮಾಗಳಂತೆ ಕೀಳುರುಚಿಯ ಅಂಗಪ್ರಧಾನ ಅಪಹಾಸ್ಯ ಮಾಡಲಾದೆ. ಇದರಿಂದಾಗಿ ಕಾಂತಾರ ಪುರುಷ ಪ್ರಧಾನ ಪ್ರಕಾರದಲ್ಲಿ ಸೇರಿ ಸೊರಗಿದೆ.

ಕಾಂತಾರದ ಕೊನೆಯ ದೃಶ್ಯದಲ್ಲಿ ಭೂತದ ಹಣತಿಗೆ ಅಡ್ಡ ವಿಭೂತಿ ನಾಮ, ಮಧ್ಯೆ ಶಿವನ ಮೂರನೇ ಕಣ್ಣಿನ ಚಿತ್ರ, ಶಿವನೊಡನೆ ಗೂಳಿಗನನ್ನು ಐಕ್ಯಗೊಳಿಸುವ ಹಾಗೂ ವಿಷ್ಣುವಿನ ಅವತಾರವನ್ನು ನೆನಪಿಸುವ 'ವರಾಹ ರೂಪಂ' ಎನ್ನುವ ಸಂಗೀತ ಇವು ಸ್ಥಳೀಯ ಸಂಸ್ಕೃತಿಯ ಚಿತ್ರಣವಂತೂ ಅಲ್ಲ. ಭೂತಕೋಲ ಸನಾತನ ಹಿಂದೂ ವೈದಿಕ ಪದ್ಧತಿ ಎಂದು ಘೋಷಿಸಲು ಸಂಘ ಪರಿವಾರದ ಕೈಯಲ್ಲೊಂದು ಅಸ್ತ್ರ ಕೊಡುವ ಪ್ರಯತ್ನ. ಇದು ಸಂಘ ಪರಿವಾರವನ್ನು ಸಹಜವಾಗಿಯೇ ಹುಚ್ಚಿಗೆಬ್ಬಿಸಿದೆ.

ಕಾಡಿನಲ್ಲಿ ಬಾಳುವ ಜನರು, ಭೂಮಾಲಕರು, ಭೂತ ಪಾತ್ರಗಳು ಇವರೆಲ್ಲ ಅಮೂರ್ತರೂಪಗಳೆ? ಅವರಿಗೆ ಜಾತಿಗಳಿಲ್ಲವೆ? ಸಂದರ್ಭಾನುಸಾರವಾಗಿ ಜಾತಿಯನ್ನು ಅಂದಾಜಿಸಬಹುದಾದರೂ ಸಿನೇಮಾದಲ್ಲಿ ಅದನ್ನು ಮುಚ್ಚಿಟ್ಟ ಕಾರಣವೇನು?

ಕಾಂತಾರದಲ್ಲಿ ಒಂದು ಕಡೆ ಕಾಡಿನ ಬುಡಕಟ್ಟು ಜನರಿಗೂ ಪ್ರಭುತ್ವಕ್ಕೂ ಹಾಗೂ ಇನ್ನೊಂದು ಕಡೆ ಕಾಡಿನ ಬುಡಕಟ್ಟು ಜನರಿಗೂ ಭೂಮಾಲಕರಿಗೂ ಇರುವ ವೈರುಧ್ಯವನ್ನು ತೋರಿಸಿದ್ದಾರೆ. ಆದರೆ ಕೊನೆಗೂ ಪ್ರಭುತ್ವದ ಹೃದಯವಂತಿಕೆಯಿಂದಾಗಿ ಆ ವೈರುಧ್ಯವೂ ಕೊನೆಗೊಳ್ಳುವ, ಭೂಮಾಲಿಕನ ದೌರ್ಜನ್ಯದ ವಿರುದ್ಧ ಜನ ಮತ್ತು ಪ್ರಭುತ್ವ ಒಂದಾಗಿ ಹೋರಾಡುವ 'ದಂತಕತೆ' ಧ್ವನಿಸುವ ರಾಜಕೀಯ ಧೋರಣೆಯೇನು? ಇದು ವಾಸ್ತವದಲ್ಲಿ ನೆಲೆಯಿರುವ ರ್‍ಯಾಡಿಕಲ್ ಧೋರಣೆಯಂತೂ ಖಂಡಿತ ಅಲ್ಲ. ಮಾತ್ರವಲ್ಲ, ಇಂದಿನ ಪ್ರಭುತ್ವದ ಇಲ್ಲದ 'ಹೃದಯವಂತಿಕೆ'ಯನ್ನು ಎತ್ತಿ ಹಿಡಿಯುವ ಪ್ರಯತ್ನವಲ್ಲವೇ?

ಕಾಡಿನ ಜನರು 'ಹೀರೊ' ನಾಯಕತ್ವದಲ್ಲೇ ನಡೆಸುವ ಸಾಮುದಾಯಿಕ ಹೋರಾಟ ಹೀರೊ ಬಂಧನವಾದ ಕೂಡಲೇ ನಿಂತು ಹೋಗುತ್ತದೆ. ಜೈಲಿನಿಂದ ಬಂದ ಹೀರೊ ಗೆ ತನ್ನ ಸೋದರನ ಕೊಲೆಗೆ ಪ್ರತೀಕಾರ ಮಾತ್ರ ಮುಖ್ಯವಾಗುತ್ತದೆ. ಹೀರೋನನ್ನು ಅತಿಮಾನುಷ ದೈವವಾಗಿಸಿ ಕೈತೊಳೆದು ಕೊಳ್ಳಲಾಗುತ್ತದೆ. ಕಾಡಿನ ಜನರು ಒಂದು ಕಡೆ, ಭೂಮಾಲಕರು ಕಾಂಟ್ರ್ಯಾಕ್ಟರುಗಳು ಮತ್ತು ಅವರ ಬೆಂಬಲಕ್ಕಿರುವ ಪ್ರಭುತ್ವದ ಬಲ ಇನ್ನೊಂದು ಕಡೆ, ಇಂದಿನ ಕಟು ವಾಸ್ತವವಾಗಿರುವಾಗ 'ಹೃದಯವಂತ' ಪ್ರಭುತ್ವದ 'ದಂತಕತೆ'ಯ ಉದ್ದೇಶ ಸ್ಪಷ್ಟವಲ್ಲವೇ? ಹೆಚ್ಚಿನ ದೈವಗಳು, ಭೂತಗಳು ವಾಸ್ತವವಾಗಿ ತಮ್ಮ ಕಾಲದ ಯಜಮಾನ ವರ್ಗಗಳ ಮತ್ತು ಪ್ರಭುತ್ವದ ದಮನ ಹಿಂಸಾಚಾರದ ವಿರುದ್ಧ ಹೋರಾಡಿ ಹುತಾತ್ಮರಾದವರು. ಅವರ 'ನಿಜಕತೆ'ಯನ್ನು ಮರೆಸಲು ಅಲ್ಲವೇ ಈ ದಂತಕತೆ?

'ನಿಮ್ಮ ಭೂಮಿಯ ಸ್ವಾಧೀನತೆ ಪಟ್ಟವನ್ನು ಮಾಡಿಕೊಡುತ್ತೇವೆ. ಕಾಡುತ್ಪತ್ತಿಯನ್ನು ಅನುಭವಿಸುವ ಹಕ್ಕನ್ನು ಕೊಡುತ್ತೇವೆ...' ಎಂದು ಅರಣ್ಯಾಧಿಕಾರಿ ಜನರಿಗೆ ಭರವಸೆ ಕೊಡುತ್ತಾನೆ. ಇದರಿಂದಾಗಿ ಕಾಡಿನ ಜನ ಅರಣ್ಯಾಧಿಕಾರಿ ಸೇರಿಕೊಳ್ಳುತ್ತಾರೆ. ಅರಣ್ಯಾಧಿಕಾರಿಯ ಭರವಸೆ ಶೂನ್ಯದಿಂದೇನು ಹುಟ್ಟಿ ಬರಲಿಲ್ಲ. ಅದು ದಂತಕಥೆಯ ಭಾಗವಲ್ಲ. ಈ ಕಾಯಿದೆ ಬಂದದ್ದು 2006ನೇ ಇಸವಿಯಲ್ಲಿ. ಇದಕ್ಕಾಗಿ ಅನೇಕ ವರ್ಷಗಳ ಪ್ರಜಾಸತ್ತಾತ್ಮಕ ಹೋರಾಟ ನಡೆದಿತ್ತು. ಸದನದ ಒಳಗೆ ಕಾಂ.ಬೃಂದಾಕಾರತ್‌ರ ನೇತೃತ್ವದಲ್ಲಿ ನಡೆದ ಹೋರಾಟವನ್ನು ನೆನೆಸಿಕೊಳ್ಳುವುದು ಸೂಕ್ತ. ಆದರೆ ಈ ಕಾನೂನುಬದ್ಧ ಸಂವಿಧಾನಬದ್ಧ 'ಭರವಸೆ'ಯನ್ನು ಹಿಂತೆಗೆದುಕೊಳ್ಳುವ ಹುನ್ನಾರವನ್ನು ಇಂದಿನ ಪ್ರಭುತ್ವ ನಡೆಸುತ್ತಿರುವಾಗ ಈ ದಂತಕತೆ ಅದನ್ನು ಮುಚ್ಚಿಕೊಳ್ಳಲು ಅಲ್ಲವೇ? 'ಕಾಂತಾರ' ನಿಜವಾದ ಪ್ರಜಾಸತ್ತಾತ್ಮಕ ಆಶಯಗಳನ್ನು ಹೋರಾಟವನ್ನು ಗೌಣಗೊಳಿಸುತ್ತದೆ ಮತ್ತು ಭ್ರಮಾತ್ಮಕ ಮಿಥ್ಯೆಯನ್ನು ವೈಭವೀಕರಿಸುತ್ತದೆ.

ಕಾಂತಾರ ಬಿತ್ತುವ ಒಟ್ಟಾರೆ ಧೋರಣೆಯಾದರೂ ಏನು? 'ಹೋರಾಟ ಮಾಡಬೇಡಿ, ಹೋರಾಟ ಹಿಂಸೆಯಲ್ಲೂ, ಸಾವು ನೋವಿನಲ್ಲೂ ಕೊನೆಗೊಳ್ಳುತ್ತದೆ. ಹೋರಾಟವನ್ನು ಬಿಟ್ಟು ಭೂತವನ್ನು ನಂಬಿ. ಹೃದಯವಂತ ಪ್ರಭುತ್ವವೂ ನಿಮ್ಮ ಬೆನ್ನಿಗಿದೆ. ಅದಕ್ಕೆ ಕೈ ಮುಗಿದು ನಿಂತು ನಿರಾಳರಾಗಿ.' ಇದನ್ನು ಕಾಂತಾರ ಸಿನೆಮಾದಲ್ಲಿ ನವಿರಾಗಿ ಹೆಣೆಯಲಾಗಿದೆ.

ಹೋರಾಟ ನಿರತರ ಮೇಲಿನ ಪ್ರಕರಣದಿಂದ ಬಿಡುಗಡೆಗೊಳಿಸಿ ದೋಷಮುಕ್ತಗೊಳಿಸಿದ ಮಾನ್ಯ ಮೆಟ್ರೊಪೊಲಿಟನ್ ನ್ಯಾಯಾಲಯ: ತೀರ್ಪು ಸ್ವಾಗತಿಸಿದ ಸಿಐಟಿಯು ನೇತೃತ್ವದ ಅಂಗನವಾಡಿ ನೌಕರರ ಸಂಘ



ಸಿಐಟಿಯು ರಾಜ್ಯ ಅಧ್ಯಕ್ಷರು ಮತ್ತು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ರಾಜ್ಯ ಅಧ್ಯಕ್ಷರೂ ಆದ ಎಸ್. ವರಲಕ್ಷ್ಮಿ ಬೆಂಗಳೂರು, ಪ್ರಧಾನ ಕಾರ್ಯದರ್ಶಿ ಎಚ್.ಎಸ್. ಸುನಂದಾ ಮೈಸೂರು, ಕಾರ್ಯಾಧ್ಯಕ್ಷರಾದ ಶಾಂತಾ ಎನ್ ಘಂಟೆ ಗುಲ್ಬರ್ಗ, ಖಜಾಂಚಿ ಜಿ. ಕಮಲಾ ತುಮಕೂರು, ಕಾರ್ಯದರ್ಶಿ ಯಮುನಾ ಗಾಂವ್ಕರ್ ಉತ್ತರ ಕನ್ನಡ, ಲಕ್ಷ್ಮಿ ದೇವಮ್ಮ ಕೋಲಾರ ಇವರೆಲ್ಲರ ಬಿಡುಗಡೆ.

ಪ್ರಕರಣದ ಹಿನ್ನೆಲೆ:

ಸಿಐಟಿಯು ಸಂಯೋಜಿತ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘಟನೆಯಿಂದ 2017 ರಲ್ಲಿ ಒಂದು ಹಂತದ ನಿರ್ಣಾಯಕ ಹೋರಾಟವನ್ನು ಹನ್ನೆರಡು ದಿನಗಳ ಕಾಲ ಜಿಲ್ಲಾ ಮಟ್ಟದಲ್ಲಿ ಮತ್ತು ನಾಲ್ಕು ದಿನಗಳ ಕಾಲ ರಾಜ್ಯ ಮಟ್ಟದಲ್ಲಿ ನಡೆಸಲಾಗಿತ್ತು. ಕನಿಷ್ಟ ಕೂಲಿ, ಕನಿಷ್ಟ 3000 ರೂ. ನಿವೃತ್ತಿ ವೇತನ, ಸೇವಾ ಜ್ಯೇಷ್ಟತೆ ಆಧಾರದಲ್ಲಿ ಕೂಲಿ ಹೆಚ್ಚಳಕ್ಕೆ, ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದು ಕೆಲಸ ಕಳೆದುಕೊಂಡವರಿಗೆ ಪುನಃ ಕೆಲಸ ನೀಡಲು, ಖಾಸಗಿಕರಣಗೊಂಡ ಕೇಂದ್ರಗಳ ಪುನಃ ಇಲಾಖೆಯ ವಶಕ್ಕೆ ಪಡೆಯುವುದೂ ಸೇರಿದಂತೆ ರಾಜ್ಯ ಮತ್ತು ಜಿಲ್ಲಾ ಮಟ್ಟದ ತಮ್ಮ ನೈಜ ಬೇಡಿಕೆಗಳ ಈಡೇರಿಕೆಗಾಗಿ ಎಲ್ಲಾ ಅಡೆತಡೆ ಮೀರಿ ನಲವತ್ತು ಸಾವಿರಕ್ಕೂ ಅಧಿಕ ಅಂಗನವಾಡಿ ತಾಯಂದಿರು ಬೆಂಗಳೂರಿಗೆ ಬಂದು ತಲುಪಿದರು. ಸರ್ಕಾರ ಕೂಡಲೇ ಸಕಾರಾತ್ಮಕವಾಗಿ ಸ್ಪಂದಿಸದೇ ಇದ್ದುದರಿಂದ ವಿದಾನಸೌಧದ ಪುಟ 15 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**